MADRAS GOVERNMENT ORIENTAL MANUSCRIPTS SERIES No. 63

V

ವೆಂಕಾಮಾತ್ಯಕವಿ ವಿರಚಿತಂ

ಶ್ರೀಮದ್ರಾಮಾಯಣಂ

ಅರಣ್ಯಕಾಂಡಂ

ARAṆYAKĀṆḌAM

(RĀMĀYAṆAM) OF VENKĀMĀTYA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library

(Under the orders of the Government of Madras)

1957

[*Price:* Rs. 2 · 25 N. P.

MADRAS GOVERNMENT ORIENTAL MANUSCRIPTS SERIES No. 63

వేంకామాత్యకవి విరచితం

శ్రీమద్రామాయణం

అరణ్యకాండం

ARAṆYAKĀṆḌAM

(RĀMĀYAṆAM) OF VENKĀMĀTYA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library

(Under the orders of the Government of Madras)

1957

[*Price:* *Rs.* 2 · 25 N. P.

PRINTED AT

THE SREEVATHSA PRESS

MADRAS-14

INTRODUCTION

Under the present series of Venkamatya's famous Ramayana composed in Vardhaka metre, Sundara Kanda, Ayodhya Kanda, Kishkindha Kanda, and Bala Kanda have already been published. Now we have great pleasure in bringing the edition of Aranya Kanda. But it is very unfortunate that the part of the work beyond the 11th Sandhi is not available. The parts of the books edited and published hitherto have been based on a palm leaf Ms. deposited in the Govt. Oriental Mss. Library Madras (D No. 1731) The manuscript is incomplete in parts. But in Aranya Kanda the lacuna is most (more than half). On learning that there is a Mss. in the Mysore Govt. Oriental Mss. Library, we aquired a copy of the same but to our utter disappointment, we found that the lacune in our Ms. are at the same places and it is likely that the Mysore manuscript is a copy of the Madras original.

Hence we have edited the Aranya Kanda based on the Madras Manuscript (as far as it is available), leaving the latter part of the Kanda in the Mysore Ms. which is an interpolation by the same scribe with the corresponding verses in Bhamini Shatpadi from Torave Ramayana. Should we be fortunate to get a complete Mss. at a future date, the portion left out now can be then edited and printed as Part II of Aranya Kanda. I hope and pray that it may be possible to publish the remaining Kandas of this great work and complete this sacred task.

I am thankful to Pandit M. Sankra Narayana Bhat who helped me in the preparation of the Press copy. During the printing stage of this work, he went on long leave and it was very kind of Pandit H. Sesha Ayyangar, Retd. Kannada Lecturer of the University of Madras and a member of the Kannada Advisory Committee to help us by supplying certain correct readings and correcting the proof. We are grateful to him. Lastly we wish to express over thanks to Messrs. Sreevathsa Press for beautifully printing this work in time.

Govt. Oriental
Mss. Library,
Madras.
30–3–'57

T. CHANDRASEKHARAN,
CURATOR.

ಮುನ್ನುಡಿ

ಶ್ರೀ ವೆಂಕಾಮಾತ್ಯ ಕವಿಯಿಂದ ಕನ್ನಡವಾರ್ಧಕಷಟ್ಪದಿ ಛಂದಸ್ಸಿನಲ್ಲಿ ರಚಿಸಲ್ಪಟ್ಟ ಶ್ರೀಮದ್ರಾಮಾಯಣದ ಏಳುಕಾಂಡಗಳೊಳಗೆ ಈಗಾಗಲೇ ಸುಂದರಕಾಂಡ, ಅಯೋಧ್ಯಾಕಾಂಡ, ಕಿಷ್ಕಿಂಧಾಕಾಂಡ, ಬಾಲಕಾಂಡಗಳು ಪ್ರಕಟವಾಗಿವೆ. ಪ್ರಕೃತದಲ್ಲಿ ಅರಣ್ಯಕಾಂಡವನ್ನು ಮುದ್ರಿಸಿ ಪ್ರಕಟಿಸಲು ನಾನು ಆನಂದಿಸುತ್ತೇನೆ. ಆದರೆ ಈ ಕಾಂಡದ ೧೧ನೆಯ ಸಂಧಿಯಿಂದ ಮುಂದಣ ಕಥಾಭಾಗವು ಲುಪ್ತವಾಗಿರುವುದು ಕನ್ನಡಿಗರ ದೌರ್ಭಾಗ್ಯವೇ ಸರಿ. ಈ ಗ್ರಂಥಭಾಗಗಳು ಮದ್ರಾಸ್ ಸರ್ಕಾರಿ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿರುವ ಒಂದು ಓಲೆಯ ಪ್ರತಿ (ನಂ. 1731) ಯ ಆಧಾರದಿಂದಲೇ ಪ್ರಕಟವಾದುವು. ಈ ಓಲೆಯ ಪ್ರತಿಯಲ್ಲಿ ಅಲ್ಲಲ್ಲಿ ಕೆಲವು ಷಟ್ಪದಿಗಳಲ್ಲಿ ಮಾತ್ರ ಗ್ರಂಥಲೋಪಗಳು ಸಾಮಾನ್ಯವಾಗಿ ಇರುವುದಾದರೂ ಈ ಕಾಂಡದ ಅಂತ್ಯದಲ್ಲೂ ಬಾಲಕಾಂಡದ ಆದಿಭಾಗದಲ್ಲೂ ಗ್ರಂಥಭಾಗವೇ ಲುಪ್ತವಾಗಿವೆ. ಬಾಲಕಾಂಡದಲ್ಲಿ ಲುಪ್ತವಾಗಿರುವ ಭಾಗವು ಅತ್ಯಲ್ಪ. ಈ ಕಾಂಡದಲ್ಲಿಯಾದರೋ ಕಥಾಭಾಗವು ಅರ್ಧಕ್ಕಿಂತ ಹೆಚ್ಚಾಗಿ ಲುಪ್ತವಾಗಿದೆ. ಈಚಿಗೆ ಮೈಸೂರು ಸರ್ಕಾರದ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿ ಒಂದು ಹಸ್ತಲಿಖಿತಪ್ರತಿಯಿರುವುದೆಂದು ತಿಳಿದು ಈ ಕಾಂಡವನ್ನೂ ಬಾಲಕಾಂಡದ ಆದಿಭಾಗ ಮತ್ತು ಪಾಠಾಂತರಗಳನ್ನೂ ತರಿಸಲಾಯಿತು. ಅದನ್ನು ನೋಡಿದರೆ ಆ ಕಾಗದದ ಪ್ರತಿಯು ಈ ಲೈಬ್ರೆರಿಯ ಓಲೆಯ ಪ್ರತಿಯ ಪುತ್ರಿಕೆಯೆಂದೇ ಭಾಸವಾಗುವುದು. ಮುಖ್ಯವಾಗಿ ಈ ನಮ್ಮ ಪ್ರತಿಯಲ್ಲಿ ಗಳಿತ(ಲುಪ್ತ)ವಾಗಿರುವ ಭಾಗವೆಲ್ಲವೂ ಅದರಲ್ಲೂ ಗಳಿತ(ಲುಪ್ತ)ವಾಗಿಯೇ ಇದೆ. ಅಲ್ಲದೆ ಅರಣ್ಯಕಾಂಡದಲ್ಲಿ ಈಗ ನಮ್ಮ ಪ್ರತಿಯಲ್ಲಿರುವ ಭಾಗದಷ್ಟೇ ಗ್ರಂಥವು ಇದೆ. ಆದರೆ ಅದರ ಮುಂದಣ ಕಥಾಭಾಗವನ್ನು ಒಳಗೊಂಡ ಕನ್ನಡ ಭಾಮಿನೀಷಟ್ಪದಿಯಲ್ಲಿ ರಚಿತವಾಗಿರುವ ತೊರವೆ ರಾಮಾಯಣದ ಪದ್ಯಗಳನ್ನು ಯಾರೋ ಕಥಾಪೂರ್ತಿಗಾಗಿ ಸೇರಿಸಿ ಬರೆದಿರುವರೆಂದು ತಿಳಿದುಬಂದುದರಿಂದ ಆ ಭಾಗವನ್ನು ಮುದ್ರಣಕ್ಕೆ ಸೇರಿಸದೆ ದೊರಕಿದಷ್ಟು ಗ್ರಂಥಭಾಗವನ್ನೇ ಮುದ್ರಿಸಿ ಪ್ರಕಟಿಸಿದೆ. ಮತ್ತೆಲ್ಲಾದರೂ ಮುಂದೆ ಈ ಗ್ರಂಥದ ಹಸ್ತಲಿಖಿತಪ್ರತಿಗಳು ದೊರಕುವುದಾದರೆ ಮುಂದಣಭಾಗವನ್ನು II ನೆಯ ಭಾಗವನ್ನಾಗಿ ಮುದ್ರಿಸಬೇಕೆಂದಿರುವೆವು. ವರ್ಷವರ್ಷವೂ ಒಂದೊಂದು ಕಾಂಡದಂತೆ ಈ ಗ್ರಂಥವು ಮುದ್ರಿತವಾಗಿ ಬೇಗಬೇಗನೆ ಯಾವವಿಧ ವಿಘ್ನವೂ ಇಲ್ಲದೆ ಪ್ರಕಟವಾಗುತ್ತಿರುವ ವಿಷಯದಲ್ಲಿ ನನಗೆ ತುಂಬಾ ಸಂತೋಷವುಂಟಾಗಿರುವುದು. ಹೀಗೆಯೇ ಮುಂದೆ ಉಳಿದ ಕಾಂಡಗಳನ್ನೂ ಮುದ್ರಿಸಿ ಕನ್ನಡಿಗರಿಗೊದಗಿಸಲು ಶಕ್ತನಾದರೆ ನಾನು ಕೃತಾರ್ಥನೆಂದು ಭಾವಿಸುವೆನು.

ಈ ಮುದ್ರಣ ಪ್ರತಿಯನ್ನು ಸಿದ್ಧಪಡಿಸಿದ ಶ್ರೀಮಾನ್ ಶಂಕರನಾರಾಯಣಭಟ್ ಇವರ ಕಾರ್ಯದಕ್ಷತೆಯು ಸ್ತುತ್ಯವಾದುದು; ಈ ಗ್ರಂಥವು ಪ್ರೆಸ್ಸಿಗೆ ಮುದ್ರಣಕ್ಕಾಗಿ ಕಳುಹಿಸಲ್ಪಟ್ಟ ಕೂಡಲೇ ಇವರು ದೀರ್ಘಕಾಲ ರಜಾದಲ್ಲಿ ಹೊರಟು ಹೋಗಿದ್ದುದ ರಿಂದ ಈ ಲೈಬ್ರರಿಯ ಅಡ್ವೈಸರಿ ಬೋರ್ಡಿನ ಮೆಂಬರಾದ H. ಶೇಷಯ್ಯಂಗಾರ್ಯರು (ರಿಟೈರ್ಡ್ ಕನ್ನಡ ಲೆಕ್ಚರರ್, ಮದ್ರಾಸ್ ಯೂನಿವರ್ಸಿಟಿ ಓರಿಯೆಂಟಲ್ ರಿಸರ್ಚ್ ಡಿಪಾರ್ಟ್‌ಮೆಂಟ್) ಅಲ್ಲಲ್ಲಿ ಕೆಲವು ಶುದ್ಧಪಾಠಗಳನ್ನು ಒದಗಿಸಿ ಪ್ರೂಫುಗಳನ್ನು ತಿದ್ದಿ ಮುದ್ರಣಕ್ಕೆ ಒತ್ತಾಸೆಮಾಡಿರುವುದು ತುಂಬಾ ಸ್ತುತ್ಯರ್ಹವಾಗಿದೆ.

ಕೊನೆಯದಾಗಿ ಈ ಗ್ರಂಥವನ್ನು ಶೀಘ್ರದಲ್ಲಿಯೇ ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀವತ್ಸ ಪ್ರಿಂಟಿಂಗ್ ವರ್ಕ್ಸ್ ಪ್ರೊಪ್ರೈಟರಿಗೂ, ಅವರ ಸಿಬ್ಬಂದಿಗೂ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳು.

ಗವರ್ನಮೆಂಟ್ ಓರಿಯೆಂಟಲ್
ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿ
ಮದ್ರಾಸ್–5.
30—3—1957.

—ಟಿ. ಚಂದ್ರಶೇಖರನ್,
ಕ್ಯೂರೇಟರ್.

.... ವಿ ಷ ಯ ಸೂ ಚಿ ....

|| ಶ್ರೀಃ ||

ವೆಂಕಾಮಾತ್ಯಕವಿ ವಿರಚಿತಂ

ಶ್ರೀಮದ್ರಾಮಾಯಣಂ

ಅ ರ ಣ್ಯ ಕಾಂ ಡ ಂ

卐 卐 卐

— ಒ ಂ ದ ನೆ ಯ ಸ ಂ ಧಿ —

ಶ್ರೀಮದಮಲಬ್ರಹ್ಮಧಾಮ ಶುಭಕರನಾಮ
ತಾಮರಸಭವಭವಪ್ರೇಮ ಮುನಿಹೃತ್ಕ್ಷೇಮ
ಸೋಮಾರ್ಕನೇತ್ರ ಸುಮನಸಪವಿತ್ರಿತಚಿತ್ತಚಿತ್ರಿತ ಚಿದಾತ್ಮ ನೀನೇ |
ರಾಮಣೀಯಕಮೂರ್ತಿ ರಾಘವಾನ್ವಯಕೀರ್ತಿ
ಸೋಮತಾರಕಪರಬ್ರಹ್ಮ ಬ್ರಹ್ಮಾಂಡಭೃ-
ತ್ಕೋಮಲಶರೀರ ರಘುವೀರ ಪಾಲಿಪುದೆನಗೆ ಮೋದದಿಂ ಮಂಗಳವನು || ೧ ||

ಚಿಲಿಪಾಲಿನೊಳಗೆ ಶರ್ಕರೆವೆರದು ಪರಿಮಳಂ
ಕಲಿತಮೆಂದೆನಿಸುತಿರಲಿಂಟೆ ನಾಲಗೆ ದಣಿದು
ಸುಲಭದಿಂ ನೆನೆದಪುದೆ ಷೇವ ಸಕಲಾನಂದದಾಗಾರವೆನಿಸಿ ಮೆರೆವ |
ಚೆಲುವೆನಿಪ ತಾರಕಬ್ರಹ್ಮನಾಮಂ ಸುಧಾ
ಲುಳಿತಮಂಜುಳವಾಣಿ ತಾವಕೀನಂ ಕಥೆಯ
ನೊಲಿದಿಂಟೆ ಕರ್ನಗಳ್ ತಣಿದಪವೆ ಮುಂಗತೆಯನುಸಿರೆಂದು ಬೆಸಗೊಂಡಳು ||೨||

ನಗಜಾತೆ ಬಿನ್ನವಿಸೆ ನಸುನಗುತ ತ್ರಿಪುರಹರ
ನೊಗುಮಿಗೆಯ ಹರ್ಷದೊಡನಿಂತೆಂದ ದೇವಿ ನೀಂ
ಜಗತಿಯೊಳಗುಳ್ಳಖಿಳಪ್ರಾಣಿಗಳಹಿತಕರವ ಬಯಸಿ ಬಲುದಯುವ ಬೆರಸಿ |
ನಿಗಮಾರ್ಥವೆನಿಪ ರಘುವರನ ಚರಿತೆಯ ಕೇಳೆ
ಸೊಗಸಿತಂತಃಕರಣಮಿದು ಪುಣ್ಯಪರಿಪಾಕ
ಬಗೆಬಗೆಯಭೀಷ್ಟಗಳ ಶ್ರವಣಮಾತ್ರದಲೀವ ಸತ್ಕಥೆಯ ಕೇಳ್ವುದಗಜೆ || ೩ ||

ಯೋಗಯೋಗಾಂಗಗಳನಧಿಕಮಂತ್ರಾರ್ಥಗಳ
ನೈಗಮಾಚಾರಗಳ ನವಸಾಂಖ್ಯತಂತ್ರಂಗ
ಳಾಗಾರಮೆನಿಪುದೀ ಕಾಂಡ ಜಗದುದ್ದಂಡಪಂಡಿತರ್ಕಳು ನಿಟ್ಟಿಸೆ |
ಶ್ರೀಗುರುಪದಾಬ್ಜಮಂ ಪೊಂದೆ ಸುಲಭೋಪಾಯ
ಮಾಗಿ ಸುಖಮನ್ನೀವುದಾರಣ್ಯಕಾಂಡಮಿದ
ನೀ ಗವುರವದಿ ತಿಳಿದು ಸವಿವುದಾನಂದದಿಂದೆನುತ ಮೇಲ್ಗತೆವೇಳ್ದನು || ೪ ||

ಅತಿಪುಣ್ಯಕರಮೆನಿಪ ಮುನಿಪನಾಶ್ರಮದಿಂದ
ವ್ರತಿಗಳೊಡಗೊಂಡು ರಘುಪತಿ ದಂಡಕಾರಣ್ಯ
ದತಿಶಯವ ದಿವ್ಯತರಕಾನನವನೊಳಪೊಗಲ್ ವಿವಿಧಪುಣ್ಯಾಶ್ರಮಿಗಳು |
ವಿತತಶಮೆ ಕಂಗೊಳಿಸೆ ವಿಮಲಹರ್ಷದೊಳು ಸಂ
ಗತಿವಿಡಿದು ನಾನಾಮೃಗಾಕೀರ್ಣಫಲಪುಷ್ಪ
ತತಿಭರಿತಶಾಖಿಗಳ ನೋಡುತ್ತ ಸಂಭ್ರಮದೊಳೈತಂದ ರಘುವೀರನು || ೫ ||

ಒಂದೆಸೆಯ ಸಂಹಿತಾವರ್ಣಕ್ರಮಂಗಳಿ
ನ್ನೊಂದೆಸೆಯ ಪದಲಕ್ಷಣಂಗಳ ವಿಚಾರ ಮಗು-
ಳೊಂದೆಸೆಯೊಳುಪನಿಷತ್ತುಗಳ ಪಾರಾಯಣಂ ವೇದಾಂತಪರಿಚಿಂತನಂ |
ಒಂದೆಸೆಯ ಜೈಮಿನಿಯ ನಯ ಯೋಗಸಾಂಖ್ಯಗಳ
ದೊಂದೆಸೆಯಲಾಗಮಸುತಂತ್ರಮಂತ್ರಾಭ್ಯಾಸ
ದಿಂದ ಸುರಪಿರಿಯನಾಗಾರಮೆನಲಾ ತಪೋವನರಾಜಿ ರಾಜಿಸಿದುದು || ೬ ||

ನೋಡುತಚ್ಚರಿಯಿಂದಲಾನಂದಮಯ ಪಾರ್ವ
ನಾಡನತಿಶಯಗೊಂಡು ಸೌಮಿತ್ರಿಯೊಡನೈದಿ
ಕೂಡಿ ಬಹ ಋಷಿನಿವಹಮಂ ಕಂಡು ವಿಪ್ರಕುಲ ಸಂತಸಂಗೊಂಡು ಬೇಗ |
ನಾಡೊಡೆಯನೈತಂದನಿಂದೆಮ್ಮ ಸುಕೃತ ಕೈ
ಗೂಡಿತೆಂದತಿಶಯದಿ ವಿಪ್ರಜನರೆಲ್ಲರೊಡ
ಗೂಡಿ ಜವದಿಂ ಬಂದು ಮಾನುಷ್ಯಲೀಲೆಯೊಳ್ ತೋರ್ಪ ಹರಿಯಂ ಕಂಡರು ||೭||

ಕಂಡು ಬಹುಧೋಪಚಾರಗಳೆಸಗಿ ಪ್ರೀತಿ ಮುಂ-
ಕೊಂಡು ಕರದೊಯ್ದು ನಿಜನಿಜಪರ್ಣಮಂದಿರದ
ತಂಡತಂಡವ ತೋರಿ ತವಕದಿಂ ಸಲವೇರಿ ಮಗುಳೆ ವಿಜ್ಞಾಪಿಸಿದರು |
ದಿಂಡೆದ್ದ ದಾನವರ ಬಾಧೆಯಿಂ ಕಳವಳಂ
ಗೊಂಡು ಚಿಂತಿಸುತಿರ್ದೆವೆಮಗೆ ಪೋಷಕನು ಭೂ
ಮಂಡಲಾಧಿಪ ನೀನು ದಯೆಗೆಯ್ದು ಸುಖಮೀಯೆ ನಿಖಿಲಮುನಿಸಂದೋಹಕೆ ||೮||

ಪತ್ತನದೊಳಿರಲಿ ಪಳ್ಳಿಯೊಳಿರಲಿ ಶೈಲಂಗ
ಳೊತ್ತಿನಲ್ಲಿರಲಿ ಕಾನನದೆಡೆಯೊಳಿರಲಿ ಭೂ
ಪೋತ್ತಮರ ಪ್ರಿಯದಿಂದಲೆಮಗೆ ಸತ್ಕರ್ಮಾದಿಗಳು ನಡೆವುವನುದಿನದೊಳು |
ಚಿತ್ತದನುಕಂಪದಿಂದೈತಂದು ಭೂಸುರರ
ವೃತ್ತಂಗಳಂ ತಿಳಿದು ಪಾಲಸಂಗೈವ ರಘು
ಸತ್ತಮನೆ ಸುರಪನೈವಡಿ ನೃಪನೆ ಮದ್ರಕ್ಷಣೆಗೆ ಬದ್ಧಕಂಕಣನಲೆ || ೯ ||

ಬಲುದಿನಂಗಳು ಹೃದಯಜಲಜಾತದೊಳು ನಿನ್ನ
ಚೆಲುವಮೂರ್ತಿಯನವನಿಜಾತೆಲಕ್ಷ್ಮಣಸಹಿತ
ಲಲುಗದಂದದೊಳಿಟ್ಟು ವಿವಿಧೋಪಚಾರದಿಂದೇಕಾಂತಭಕ್ತಿಗೆಯ್ದು |
ಕಲಿತತಪ ಫಲರೂಪಮಾಗಿ ಕಂಗೆಸದುದೀ
ಲಲಿತವಿಗ್ರಹಮಲ್ಲದುಳಿದ ಶ್ರುತಿಸಮುದಯದ
ಸಿಲುಕಿಲ್ಲದಮಲನಿತ್ಯಾನಂದ ಪರಬೊಮ್ಮ ಕಾಣ್ಬುದೇ ಕಲ್ಮಷರಿಗೆ ||೧೦||

ಎನುತರ್ಘ್ಯಪಾದ್ಯಾಚಮನಫಲಾಹಾರಗಳ
ನನುವಿಂದಲರ್ಪಿಸಿ ಸಮರ್ಪಿಸಿ ಮನಶ್ಚಿತ್ತ
ಘನತರಾಹಂಕಾರಮತಿವೃತ್ತಿಗಳನ್ನೆಲ್ಲಮುಲ್ಲಾಸದಿಂ ರುಷಿಗಳು ।
ಚಿನುಮಯಾನಂದದನುಭವದಿಂದಲಿರೆ ಬೇಗ
ವನಜಾಪ್ತ ಪಡುಗಡಲೊಳಿಳಿದು ಮೂಡಣ ಗಿರಿಯ
ಕೊನೆಗಡರ್ವನ್ನೆಗಂ ಸತ್ಕಥಾಲಾಪದಿಂ ಕಳೆದ ನಿಶೆಯಂ ರಾಘವಂ ||೧೧||

ನಳಿನಸಖನುದಯದೊಳಗೆದ್ದು ಸ್ನಾನಾಹ್ನಿಕಗ
ಳಳವಟ್ಟು ಋಷಿಗಳೊಡವೆರೆದು ಪೊರಮಟ್ಟು ರಘು
ತಿಲಕನಾ ಘೋರಕಾನನವ ನಿಟ್ಟಿಸಿ ದುಷ್ಟಜನರ ಶಿಕ್ಷಣೆಗೈದೊಡೆ ।
ತೊಳಲಿದಂ ವೃಕಮಹಿಷಶರಭಭೇರುಂಡಂಗ
ಳುಲಿವ ಪಂಚಾಸ್ಯಂ ಮೃಗಾದನನುದೇಭಂಗ
ಳಳವಿಗಳ ನಿಟ್ಟಿಸುತಲಲ್ಲಲ್ಲಿ ನೋಡುತಂ ರಘುನಾಥನೈತಂದನು ||೧೨||

ಗಿರಿಕೂಟದಂತೆಸವ ಮಸ್ತಕ ಮಹಾಸ್ಯನಂ
ತೆರೆವಾಯಿ ವಿಕಟವಿಷಮೋದರಂ ಬೀಭತ್ಸ
ಕರವಿಷಮದೀರ್ಘವಿಕೃತಂ ಘೋರದರ್ಶನಂ ವೈಯಾಘ್ರವನ್ನು ಪೊದಿದು ।
ಸುರಿವ ರುಧಿರವಸಾನ ಕಿಡಿಗಳುದುರುವ ಕಂಗ
ಳುರುಭೀಕರಾಟ್ಟಹಾಸದ ರಕ್ಕಸಂ ತ್ರಾಸ
ಕರಮೆನಿಪ ಶೂಲಮಂ ಪೆಗಲೊಳಿಟ್ಟೈತರುತಲಿರ್ದನಂತಕನೆಂಬೊಲು ||೧೩||

ಕರಿಗಳೀರೈದ ಹರಿಗಳ್ ಪತ್ತು ಪೃಷತಂಗ
ಳರುವತ್ತು ವೃಕಗಳೆಂಭತ್ತು ಶೂಲದೆ ನೆಗಹಿ
ಸುರಿವರುಣಜಲದಿಂದಲಂಗಮಂ ನನೆಸಿ ನಿಟ್ಟಿಸಿದವರ್ ನಡುಗುವವೊಲು ।
ಮೊರೆವುತಂ ಭೈರವಸ್ವನದಿಂದ ಕಾನನದಿ
ಯಿರುತಿಹ ವಿರಾಧನುಂ ನೋಡಿ ಲಕ್ಷ್ಮಣನ ಮುನಿಗ
ಳುರುತರಸ್ತೋತ್ರಯುತನೆನಿಪ ರಘುವೀರನಂ ಕೋಪಿಸಿದ ಕ್ರೂರತನದಿ ||೧೪||

ಪ್ರಳಯಝಂಝಾನಿಲನ ವುರುಬೆಗೈವಡಿ ಯೆನಲ್
ತಳಮಳಂಗೊಳಲಬ್ಧಿ ಯವನಿ ಕಂಪಿಸೆ ಮುನಿಗ
ಳೊಳಗೊಳಗೆ ಭೀತಿಯಿಂದಾಪದುದ್ಧಾರಕವ ಜಪಿಸುವಂದದಿ ಮೊರೆಯುತ ।
ಥಳಥಳಿಸುತಟ್ಟಹಾಸವ ನೆಸಗಿ ಮೂದಲಿಸು
ತೆಲವೋ ಕುಮಾರಕನೆ ಶರಚಾಪಜಟೆಗಳಂ
ತಳೆದಿಲ್ಲಿಗೈತಂದುದೇನು ಪ್ರಳಯಾಂತಕಂ ತಾನಿರ್ಪ ನೆಲೆಯನರಸಿ ||೧೫||

ಭೀಮಬಲನಖಿಳದೇವಾಸುರರ ದರ್ಪಹರ
ನೀ ಮಹಾಋಷಿಮಾಂಸಭಕ್ಷಣೆಯೊಳಂ ಸದಾ
ರಾಮವಾಸದೊಳಿರ್ಪ ಕಲಿವಿರಾಧನ ಪರಿಯ ನೆಂದಿಗುಂ ಕೇಳುತರಿಯ !
ತಾಮಸೀಜನಮುನಿಗಳುಪದೇಶದಿಂ ಮನೋ
ಭ್ರಾಮಕದಲೈತಂದೆ ನಿಂದೆ ನಿಮ್ಮಿರ್ವರಂ
ಪ್ರೇಮದಿಂ ಪಿಡಿದು ರುಧಿರಾಶನಂಗೆಯ್ವೆನೆನುತ್ತ ಭೋರ್ಮೊರೆದನಸುರಂ ||೧೬||

ಧರಿಸಿರ್ಪ ಶರಚಾಪತರವಾರಿಗಳಿದೇನು
ಮೆರವ ವಲ್ಕಲಜಟಾಭಾರಸಿಂಗರವೇನು
ಪೊರೆಯೊಳಿಹ ಸತಿಯೇನಿದಾವಾಶ್ರಮಂ ಸದಾಚಾರಮಿದನಾರ್ ಪೇಳ್ದರು |
ಕರುಣಮುಳ್ಳವರಂತೆ ಧರಿಸಿ ಯತಿವೇಷಗಳ
ಚರಿಪ ವಾಮಾಚಾರವೆನಗೆ ಗೋಚರಮಾಯ್ತು
ತರಿದಿರ್ವರಂ ಭವತ್ತರುಣಿಯಂ ಕೊಂಡೊಯ್ವೆನೆನುತ ಘರ್ಜನೆಗೆಯ್ದನು ||೧೭||

ಇಂತತಿಕಠೋರತರ ನುಡಿಗಳಿಂ ಧಿಕ್ಕರಿಸಿ
ಮುಂತರಿಯದಲೆ ತಮಂ ಸೋಮನಂ ಪಿಡಿವವೋಲ್
ಕಾಂತೆಯಂ ತುಡುಕಿ ಕಂಕುಳೊಳಾಂಕಿ ಕೆಲಸಾರುತಿಟ್ಟೈಸುತೆ ಮುಗುಳೆ ನಗುತ |
ಪಿಂತಿರುಗಿ ಪೋಗಿರೆಲೊ ಬಲವ ನೆನೆನೆನೆದಿಲ್ಲಿ
ನಿಂತಿರಾದೊಡೆ ನುಂಗದುಳಿಯೆ ನರಕೀಟ ಮತಿ
ಯಾಂತು ಬೇಗದಿ ಪೋಪುದೆನುತ ತೊಡೆವರೆಗುಟ್ಟಿ ನಕ್ಕು ರಕ್ಕಸ ಜರೆದನು ||೧೮||

ತುಡುಕಿ ಸ್ವರ್ಭಾನು ಹಿಮಭಾನುನಕೃಶಾನುಸರ
ವಿಡಿವಂತೆ ಬಳಲಿರುವ ಮುಖಬಿಂಬಮಂ ನೋಡಿ
ಪಿಡಿದ ಚಿಂತೆಯೊಳು ರಾಮಂ ಲಕ್ಷ್ಮಣನೊಳೆಂದ ಸೀತೆ ರಕ್ಕಸನಂಕದಿ |
ನಡುಗುತಿಹುದಂ ನೋಡು ಧರ್ಮವಿಡಿದಾವ್ ಬನಕೆ
ನಡೆದುದೀ ಪರಿಯಾಯ್ತು ಪಾತಕದ ರಾಶಿಯಂ
ಬಿಡದೆಸಗಿದಶ್ವಪತಿಯಣುಗಿಗಾದುದು ಮುದಂ ಪೇಳ್ವುದೇಂ ಕಾಲಬಲವ ||೧೯||

ತಂದೆತಾಯ್ಗಳ ಬಿಟ್ಟು ತಪಕೆ ಮನಮೊಡಬಟ್ಟು
ಕಂದಮೂಲಾದ್ಯಶನಗಳಲಿ ಸಂತಸವಟ್ಟು
ಕುಂದೆನಿಸದೊಂದರೊಳು ಧರ್ಮಜೀವನೆ ಯೆನಿಸಿ ನೆನೆಸಿ ಪಗಲಿರುಳೆಮ್ಮನು |
ಚಂದದಿಂದಾನಂದಗೊಳಿಪ ಸುಕುಮಾರಿಯು ದಿ(ಮ-
ದಾಂ)ವಾಂಧನಂ ಪೊಂದಿರಲ್ ಸಿರಿ ತಂದೆತಾಯ್ಗಳ
ನ್ನಿಂದು ಬಿಟ್ಟಗಲ್ದಂತೆ ತೋರ್ಪುದೆಂದತಿದೈನ್ಯವೆರೆದು ರಘುವೀರ ಮರುಗೆ ||೨೦||

ಸುರಿವಶ್ರುಧಾರೆಯಿಂ ಧರೆಯನಿಟ್ಟೈಸುತಳುವ
ಪರಿಯ ಕಂಡಾಗ ಸೌಮಿತ್ರಿಯತಿಕೋಪದಿಂ
ಮೊರೆಯುತಲೆ ಫಣಿಯಂತೆ ಮಮತೆಯಿಂದಣ್ಣನೊಡನಿಂತೆಂದ ಶೌರ್ಯವಿಡಿದು |
ಧರೆಯ ನಿರ್ಮಿಸಿ ಪೊರೆದು ತರಿವ ಸಾಹಸಭರಿತ
ಪರಮಪೂರುಷ ನೀನನಾಥರಂದದಿ ತೊಳಲಿ
ಮರುಗುವುದು ಲೋಕಕಚ್ಚರಿ ದೇವದೇವೇಶ ಲಾಲಿಸು ಪ್ರತಿಜ್ಞೆಯನ್ನು ||೨೧||

ಶರವೊಂದರಿಂ ರಕ್ಕಸಾಧಮನನಸುಗಳ
ನ್ನೊರತೆಯಂ ಪೀರ್ದಪೆಂ ತತ್ಕ್ಷಣದಿ ಕೈಕೆಯಂ
ಭರತನಂ ತರಿದಿಡುವೆ ಸಂತುಷ್ಟಿಗೊಳಿಸುವೆಂ ಧರಣಿಯಂ ಲೋಹಿತದೊಳು |
ಅರಿಯದಾದಂ ದೈತ್ಯ ದುರುಳತನದಿಂ ಯಮನ
ಸೆರಗ ಪಿಡಿದೆಳೆವಂತೆ ಕ್ಷೀಣಜೀವನನಿಂದು
ಬರಿದೆ ಕೆಣಕಿದನೆನ್ನ ವಿಕ್ರಮವನೆಲ್ಲರುಂ ನೋಡಲೆಂದೆನುತ ಮೊರೆದಂ ||೨೨||

ಘುಡುಘುಡಿಸಿ ಕೋಪದಿಂದಾರ್ಭಟಿಪ ಲಕ್ಷ್ಮಣನ
ಕಡೆಯ ನಿಟ್ಟಿಸಿ ಕಲ್ಪಮೇಘದಂವದಿ ಮೊರೆಯು
ತೊಡನೆ ರಘುವೀರನಂ ಬೆಸಗೊಂಡ ಕಲಿಕರ್ಕಶೋದ್ದಂಡವೇತಂಡನ |
ಎಡಹಿ ಕಾಣದೆ ಭಯವ ಮಡದಿಯನ್ನೊಡಗೊಂಡು
ಬಿಡದೆ ಸಂತಸದಿಂದಲೈತಂದ ಸಾಹಸವ
ನುಡಿಯಲಸದಳ ಭವದ್ವೃತ್ತಾಂತವೆಲ್ಲನಂ ಬಿತ್ತರಿಸವೇಳ್ಕೆಂದನು ||೨೩||

ಎನೆ ವಿರಾಧನ ನುಡಿಗೆ ಜನನಾಥ ನಿಜವಂಶ
ದನುವ ಬಿತ್ತರಗೈದು ರಕ್ಕಸನ ಪರಿಯನುಂ
ವಿನಯದಿಂ ಬೆಸಗೊಳಲ್ಕಹಗಹಿಸಿ ನಸುನಗುತ್ತಿಂತೆಂದ ರಾಮನೊಡನೆ |
ಮನುಜೇಂದ್ರ ಕೇಳ್ ಜಯನ ದೆಸೆಯಿಂದ ಶತಹೃದೆಯ |
ತನುವಿನೊಳಗುದಿಸಿದ ವಿರಾಧನೆಂಬುವರೆನ್ನ
ವನಜಪೀಠನ ವರದೊಳಾಯ್ತುಪಧ್ಯತೆಯೆನಗೆ ಸರ್ವಾಸ್ತ್ರತತಿಗಳಿಂದ ||೨೪||

ಸಮರದೊಳಗಜಭವಾದಿಗಳಿನ್ನು ಗೆಲಲರಿದು
ಪ್ರಮದೆಯಂ ಬಿಟ್ಟು ನೀವ್ಪೈದಿ ತನುವಂ ಪೊರೆವ
ಕ್ರಮವ ಮತ್ತೊಂದೆಡೆಯಲೆಸಗುವುದೆನಲ್ ದುರುಳದಾನವನ ನುಡಿಗಳಿಂದ |
ಸಮುದರಿಪುದಂತಿಕಂಠೀರವಂ ಕೋಪದಿಂ
ದಮರಪತಿ ನಡುಕಗೊಳೆ ಸಿಂಹನಾದಂಗೈಯು
ತಮರವೈರಿಯ ತಿರಸ್ಕರಿಸಿ ರಘುವೀರನಿಂತೆಂದ ಗಂಭೀರದಿಂದ ||೨೫||

ನರಮಾಂಸಭಕ್ಷಣೆಯ ಮದವಡರಿ ಬಲಿದು ತಾ
ನರಖರ್ವಗರ್ವದಿಂ ನುಡಿವೆಯೆಲೊ ಪಾಪಿಷ್ಠ
ತರಬುದ್ಧಿ ನೀಂ ಧರೆಯೊಳಿಹೆಯ ರಣದೊಳ್ ಕೈಗೆ ಕೈಗೊಟ್ಟು ಮೇಣ್ ನಿಲುವೆಯ |
ಅರಿಯೆನುತ ತಿರುವನೇರಿಸಿ ಧನಂಜಯದಿವ್ಯ
ಶರಗಳೇಳಂ ಪೂಡಿ ತೆಗದೆಚ್ಚೊಡಾಕ್ಷಣದೊ
ಳುರವ ಭೇದಿಸಿ ಪೊರಟುಚಲವುಂ ಕೊರೆದಿಡುವ ಕೂರಂಬಿನಲಗುಗಳಿನೆ ||೨೬||

ಬಿಸಿರಕುತವುಂ ಕುಡಿದು ಬೇಗ ಶರಗಳ್ ಪೋಗ
ಲಸುರಕಡುಗೋಪದಿಂ ಧರಣಿಜೆಯನಾಗಲಾ
ವಸುಮತಿಯೊಳಿಟ್ಟು ಪರದಾನಬಲದಿಂದೆಸೆವ ಶೂಲಮಂ ಪಿಡಿದು ಕರದಿ |
ಮಸೆದು ಪಲ್ಗಳ ಕಾಲಮೇಘದಂದದಿ ಮೊರೆಯು
ತುಸಿರಿಡುತ ಜಂಝಾನಿಲೋಪಮಿತಮೆನಿಸಿ ಸರ-
ಭಸದಿಂದಲಟ್ಟಹಾಸಂಗೈದು ಬಾಯ್ದೆರೆದು ಬರುತಿರ್ದನಾ ದೈತ್ಯನು ||೨೭||

ನೆಲ ನಡುಗಿತಾಕ್ಷಣದಿ ಕರದಿ ತಿರಿಪುವ ಶೂಲ
ಕಲಿತಮಾದುರಿಯಿಂದ ಕಂಗೆಡುತಲಿರೆ ಲೋಕ
ಕಲಿಗಳಗ್ರೇಸರಂ ಕಂಡು ಸೌಮಿತ್ರಿಯೊಡನಿಂತೆಂದ ನಸುನಗೆಯೊಳು |
ಗೆಲುವೆನೆಂದೀ ಘೋರರಕ್ಕಸಂ ಮಾನಸದ
ಗೆಲವಿಂದಲೈತಪ್ಪ ಮುಂತಪ್ಪ ಕಜ್ಜಮದ
ನೊಲಿದೀಕ್ಷಿಸದೆ ಮದಾಂಧತೆವೆರೆದ ಸ್ವಚ್ಛಂದಗಮನ ನಿರ್ಭೀತಿಯಿಂದೆ ||೨೮||

ಕೊಳು ಶರವನೆನುತುಸಿರಿ ಕೋಪದಿಂ ಕೆಂಗಿಡಿಯ
ತುಳುಕುವಸ್ತ್ರವ ಪಿಡಿದು ತಳುವದೆಸೆಯುತ ಕರದೊ
ಳುಲಿವ ಭಾರಿಯ ಶೂಲವಂ ಕಡಿದು ಧರಣಿಯೊಳ್ ಕೆಡಹಿದಂ ತತ್ಕ್ಷಣದೊಳು |
ಪೊಳೆವ ಕೆಂಗೋಲ್ಗಳಂ ಸುರಿದ ಲಕ್ಷ್ಮಣ ಗಿರಿಯ
ಜಳದ ಮುಸುಕುವ ತೆರದಿ ನಾಲ್ದೆಸೆಯೊಳೆಚ್ಚೊಡಂ
ಜಳಜಪೀಠನ ವರದ ಬಲದಿಂದ ದಾನವಂ ಕಂಪಿಸದೆ ಬೊಬ್ಬಿರಿದನು ||೨೯||

ಕರದ ಶೂಲವನೆಚ್ಚು ಕೆಡಹಿದತಿಶಯದಿಂದ
ನರಕೀಟಗಳ್ ನೀವು ನಗುವಿರಿದು ಸಾಹಸವ
ತೆರುವುದೇ ಪೋದಡೆಯು ನಿಜಶೌರ್ಯಮಾವೆಡೆಗೆ ಜಾರುವುದು ಮರುಳುಗಳಿರ |
ಧುರವ ಸಂಭಾಳಿಸುವುದೆನುತಲಂತಕನಂತೆ
ತೆರೆದ ಬಾಯಿಂ ಕರಗಳೆರಡರಿಂದಿರ್ವರಂ
ತುರುಗಿ ಪೆಗಲೊಳಗಿಟ್ಟು ಕೊಂಡಟ್ಟಹಾಸದಿಂ ತಿರುಗಿದಂ ಬನದ ಕಡೆಗೆ ||೩೦||

ದಾನವಪರಾಕ್ರಮಕೆ ಮಾನವಾಧಿಪ ಮೆಚ್ಚಿ
ಭಾನುವಂಶಜ ಸುಮಿತ್ರಾತನಯನೊಡನೆಂದ
ದಾನವಂ ಕೊಂಡೊಯ್ವ ವನಕೆಮ್ಮನೆಮಗಿದುವೆ ಮಾರ್ಗ ಪದಚಾರಿಗಳ್ಗೆ |
ಕಾನನಕ್ಕಿವನ ಬಲಿಗೊಟ್ಟು ಧೈರ್ಯವ ತೊಟ್ಟು
ದಾನವಾಧಮನ ನಿಗ್ರಹಿಸಲೆಂದೆನುತ ನೃಪ
ಸೂನುಗಳ್ ತಮ್ಮೊಳಾಳೋಚಿಸುತಲಿರಲಿತ್ತ ಸೀತೆ ಕಣ್ದೆರೆದಿಟ್ಟಿಸಿ ||೩೧||

ಕಕ್ಕಸದ ರಕ್ಕಸಗೆ ಸಿಕ್ಕಿದರ್ ನೃಪಕುವರ
ರುಕ್ಕುತಿಹ ಕೋಪದಿಂ ಪಕ್ಕಾಗಿ ಬಿಡಿಸಿ ತರ
ತಕ್ಕರಾರಿಕ್ಕುವರೆನುತ್ತಲಾರ್ತಸ್ವನದಲಳುವ ಧರಣೀತನುಜೆಯ |
ಕಕ್ಕುಲಿತೆಯಂ ಕಂಡು ಕಡುಗೋಪ ಮುಂಕೊಂಡು
ಇಕ್ಕೆಲದಿ ಕಡುಗಮಂ ಕಿಳ್ತು ಭುಜಗಳ ಕಡಿದು
ಸಿಕ್ಕದೊಲು ನೆಲಕೆ ಧುಮ್ಮಿಕ್ಕಿ ಬೊಬ್ಬಿರಿದಾರ್ದು ಮುಗುಳೆಚ್ಚರಾರ್ಭಟಿಸುತ ||೩೨||

ಗಂಡಶೈಲಂಗಳಿಕ್ಕಡಿಯಾಗಿ ಭೂತಳಕೆ
ದಿಂಡುಗೆಡದಂತುರುಳೆ ತೋಳ್ಗಳೀ ರಕ್ಕಸಂ
ಭಂಡನ(ಣ?)ವನುಳಿದು ಭೂಪತನವಾದಂ ಶರಗಳುಪಟಳಕ್ಕಳ್ಕಿ ಬಳ್ಕಿ |
ಗಂಡುಗಲಿಗಳ್ ಕರಪದಂಗಳಿಂ ತಾಡಿಸುತ
ಲಂಡಲೆದು ಹುಡಿಗುಟ್ಟಿ ಕೆಡೆಪಲಸು ಸಂಚಲಿಸಿ
ಬೆಂಡಿನಂತುರುಳಿರಲ್ ಕಂಡು ರಾಘವನೆಂದ ಸೌಮಿತ್ರಿಯೊಡನೆ ಪ್ರಿಯದಿ ||೩೩||

ಕೆಡೆದ ರಕ್ಕಸನೊಡಲು ಕಮಲಪೀಠನ ವರದ
ದೃಢಶಕ್ತಿಯಿಂ ಶರೀರವನೊಂದು ಗರ್ತದೊಳ್
ಕೆಡಹಿ ಮೃತ್ತರುಶಿಲೆಗಳಿಂದ ಪೂರಣೆಗೆಯ್ದು ಬೈಚಿಡಲ್ವೇಳ್ಕುಮೆನುತ |
ನುಡಿಯೆ ರಘುವರನದಂ ಕೇಳುತ್ತ ರಕ್ಕಸಂ
ಗೊಡನೆ ಜನ್ಮಾಂತರಜ್ಞಾನಸಂಭವಮಾಗೆ
ನುಡಿದನತಿಭಕ್ತಿಯಿಂ ಶ್ರೀರಾಮ ಜಗದೇಕನಾಥ ನೀನಾಲಿಸೆನುತ ||೩೪||

ಪಾವನಕೆ ಪಾವನಂ ಪರಕೆ ಪರ ಭೂತಗಳ
ನೋವಿ ಸೃಷ್ಟಿಸಿ ಪೊರೆದು ವಿಲಯಮೆಸಗುತ ಸರ್ವ
ಜೀವಮಯ ನೀನಿಂದು ಕಪಟನಾಟಕಮನುಜವೇಷಮಂ ಧರಿಸಿ ಧರೆಗೆ |
ಭಾವನಾಪರರಿಷ್ಟವಿಗಾಯಲೈತಂದಮರ
ದೇವ ನೀನೆಂದರಿತೆ ಸೀತೆ ಮೂಲಪ್ರಕೃತಿ
ಪಾವಿನರಸಂ ಸುಮಿತ್ರಾತ್ರತನಯನೆಂಬುದಂ ತಿಳಿದೆ ನಿಮ್ಮಯ ಕೃಪೆಯೊಳು ||೩೫||

ಕೃತಕೃತ್ಯನಾದೆನು ಭವನ್ಮೂರ್ತಿದರ್ಶನದೊ
ಳತಿಶಯಜ್ಞಾನಸಂಭವಮಾದುದದರಿಂದ
ಯತಿಶಿರೋಮಣಿಯೆನ್ನ ಪೂರ್ವವೃತ್ತಾಂತಮಂ ಬಿತ್ತರಿಪೆನವಧರಿಪುದು |
ಅತಿಶಯವಿಲಾಸಕರಗಂಧರ್ವಪೇಪ ಸ-
ನ್ನುತಿಗೈವ ಚೆಲ್ವಾಂತ ತುಂಬುರಾಹ್ವಯದಿಂದ
ಸತತನಾದಬ್ರಹ್ಮಮೆನಿಪ ಗಾನಾಸಕ್ತನೆನಿಸಿ ಸುಖದಿಂದಿರ್ದೆನು ||೩೬||

ಒಂದುದಿನ ಮನಬಂದು ಚೈತ್ರರಥಮಂ ನೋಡ
ಲೆಂದು ಪೋಗಲ್ಕಲ್ಲಿ ದಿವ್ಯಸರಸೀತಟದಿ
ವೃಂದಾರಕಾಂಗನೆಯು ರಂಭೆ ಕ್ರೀಡಿಸುತಿರ್ದಳಲ್ಲಿ ಮನದಿಚ್ಛೆಯಿಂದ |
ಮುಂದರಿಯದಾನಲ್ಲಿಗೈದಲಾ ಸತಿಗಾಯ್ತು
ಕಂದರ್ಪನುದ್ರೇಕ ಮದಗಂಧಹಸ್ತಿವೊಲು
ಹಿಂದುಮುಂದಿಟ್ಟಸದೆ ಬಂದಪ್ಪಿ ಸುರತಸುಖದಲ್ಲಿರ್ದಳೊಲವಿನಿಂದ ||೩೭||

ಅಸಮಶರಕೇಳಿಯೊಳು ತನುಭಾವಮಂ ಮರೆದು
ಶಶಿವದನೆಯೊಡನಿರ್ದೆನನ್ನೆಗಂ ಪ್ರಿಯದಿಂದ
ಪಶುಪತಿಯ ಸಖ ವನವಿಹಾರಕೆಂದೈತಂದು ಕಂಡು ಕಡುಗೋಪದಿಂದ |
ಅಸುರಯೋನಿಯೊಳು ಕೆಡೆಯೆಂದು ಶಪಿಸಲ್ ಭಯದಿ
ಬೆಸಗೊಂಡೆ ದೇವ ನಿಷ್ಕೃತಿಯಪ್ಪುದೆಂದಿಗಿದ
ಸಸಿನೆ ಬೆಸನೀವುದೆನೆ ದಯದಿಂದ ಪೌಲಸ್ತ್ಯ ನಸುನಗುತಲಿಂತೆಂದನು ||೩೮||

ಧರೆಯ ಭಾರವನಿಳುಹೆ ದಶರಥಾತ್ಮಜನೆನಿಸಿ
ಸಿರಿ ಲಕುಮಿ ಸೀತೆ ಯುರಗೇಶಲಕ್ಷ್ಮಣರಿಂದ
ಬರುವ ಮುನಿಸಂಸೇವ್ಯದಂಡಕಾವನದೆಡೆಗೆ ನೀನು ವಿಪ್ರಿಯವನೆಸಗೆ |
ತರಿದಿಡುವನಾ ಪರಬ್ರಹ್ಮಪ್ರಸಾದದಿಂ
ಪರಿದು ರಕ್ಕಸತನುವ ಧರಿಸಿ ಪೂರ್ವಾಕೃತಿಯ
ಪರಮಪುರುಷನ ನುತಿಸಿ ಬರುವೆ ಪೋಗೆಂದೆನುತ ಬೀಳ್ಕೊಟ್ಟ ವೈಶ್ರವಣನು ||೩೯||

ಶಾಪವಿಡಿದಾನಸುರರೂಪಾಂತು ಕಾನನದಿ
ತಾಪಸರ ಬಳಲಿಸುತ ಕ್ರೂರತರಕರ್ಮಯುತ
ಪಾಪಗಳನೆಸಗಿದೆಂ ಕೊಲುವರೆ ಸುರಾಸುರರಿಗಳವಡದ ವರದ ಬಲದಿ |
ಶ್ರೀಪತಿ ಭವತ್ಕರುಣದಿಂದಾದುದಾಂ ಪಡೆದ
ಶಾಪಕೆ ವಿಮುಕ್ತಿ ಯಿಾ ತನುವ ಗರ್ತದೊಳಿಟ್ಟು
ಗೋಪನಂಗೈಯಲಹುದಯ್ಯ ಸದ್ಗತಿಯಸುರಕುಲಸನಾತನಧರ್ಮವು ||೪೦||

ಎಂದಾ ವಿರಾಧ ನಿಜವೃತ್ತಂಗಳೆಲ್ಲಮಂ
ಚಂದದಿಂ ವಿಸ್ತರಿಸೆ ಕೇಳಿ ವಿಸ್ಮಯದಿ ರಘು
ನಂದನಂ ನಸುನಗುತ ಲಕ್ಷ್ಮಣನೊಳಿಂತೆಂದ ಕ್ರೂರರಕ್ಕಸತನುಪನು |
ವೊಂದಿಸುವರೊಂದವಟಗೈವುದೆನೆ ಕುದ್ದಾಲ
ದಿಂದ ಗರ್ತಂಗೆಯ್ಯಲೆಯ್ದೆ ಪಾದಾಂಗುಷ್ಠ
ದಿಂದ ರಕ್ಕಸಕಂಠಮಂ ಮೆಟ್ಟಿ ಶರಚಾಪವಿಡಿದು ನಿಂದಿರ್ದನೊಲಿದು ||೪೧||

ಅನಿತರೊಳ್ ಸೌಮಿತ್ರಿ ರಂಧ್ರವಾಯ್ತೆಂದೊರೆಯೆ
ಜನನಾಥನಾ ವಿರಾಧನ ಶರದಿ ಬಂಧಿಸುತ
ಬಿನದದಿಂದೆಳದೊಯ್ದು ಕುಳಿಯೊಳಂ ಬೀಳ್ಕೆಡಪಿ ಪೊಡೆಯೆ ಖಡ್ಗಂಗಳಿಂದ |
ವನಜಾಸನಂ ಕೊಟ್ಟ ವರದ ಬಲದಿಂ ಖಡ್ಗ
ಘನತರದ ತಾಡನೆಗೆ ಪೋಗದಿರಲಸು ಬೇಗ
ದನುಗೈದು ಪಾಷಾಣಮೃತ್ತಿಕೆಯೊಳಂ ಮುಚ್ಚಿ ಪದುಳಗೈದರು ಬೇಗದಿ ||೪೨||

ಸಿಡಿಲರವದಂತುಲಿವ ಕಡುಗಲಿಯ ಕುಳಿಯೊಳಂ
ಕೆಡೆಪಿ ಬೈಚಿಟ್ಟು ಮುನಿಜನರಿಗಭಯವ ಕೊಟ್ಟು
ಪೊಡವಿಜಾತೆಯನಪ್ಪಿ ಮುದದಿಂದ ಭೂಸುರರ ಮಧ್ಯದೊಳು ರಾಮನಿರಲು |
ನಡೆದುದೊಂದದ್ಭುತಮದೇನೆಂಬೆ ಸತ್ತಸುರ
ನೊಡಲಿಂದ ಪೊರಮಟ್ಟಖಂಡತೇಜಂ ಗಗನ
ದೆಡೆಯೊಳಂ ಬಗಿಯಾಗಿ ?ನಿಂದುದಚ್ಚರಿಯೆನಲ್ ಮುನಿತತಿಗಳಿಚ್ಚಿಸುತಿರೆ ||೪೩||

ಬೆಳಗಿನೊಳು ದಿವ್ಯರಥದೊಳಗೆ ಶುಭಕಾಂತಿಗಳ
ತಳೆಯೆ ದಿವ್ಯಾಭರಣದಿವ್ಯವಸ್ತ್ರಗಳಾಂತು
ನಳಿನಾರಿಯುಂ ಪೋಲ್ವ ಚೆಲುವಿಂದ ತುಂಬುರಂ ಕಂಗೊಳಿಸೆ ಜನರ ಕಣ್ಗೆ |
ವೊಳಗಿದುವು ದೇವದುಂದುಭಿಗಳಪ್ಸರಿಯರುಂ
ಕಳೆವೆತ್ತು ಗಾನನರ್ತನದಿಂದಲಾನಂದ
ಗೊಳಿಸಿದರನಂತರಂ ಗಾಂಧರ್ವ ರಘುವರನ ಭಕ್ತಿಯಿಂ ನುತಿಗೈದನು ||೪೪||

ಮಿತ್ರಕೈರವಮಿತ್ರನೇತ್ರ ಹರಿನೀಲನಿಭ
ಗಾತ್ರ ಶುಭಚಾರಿತ್ರ ಸಾರಸಾಸನಭವ
ಸ್ತೋತ್ರ ನೈಗಮನಿಪುಣವಾಣಿಗಂ ಚಿತ್ತದೃಗ್ಗೋಚರಂ ನೀನಲ್ಲವ |
ವಿತ್ತಪಾಭಯದಾತ ವಿಷಯಸುಖಮುಳಿದಿಹಾ
ಮುತ್ರಭೋಗವಿರಾಗ ಮುನಿಕುಲೋತ್ತಮನೇಕ
ಕ್ಷೇತ್ರರೂಪಾಂತ ಸಿರಪತ್ರಪ ಪರಾತ್ಪರನೆ ನೀನೆ ಶರಣಾಗೆಂದನು ||೪೫||

ಗುಪಿತದಿಂದಖಿಳಪ್ರಾಣಿಗಳ ಪ್ರಾರಬ್ಧಸಂ
ಕುಪಿತಪಾಶಗಳಿಂದ ಬಂಧಿಸಿ ಸುಖಾಸುಖಗ
ಳಪರಿಮಿತಮಾಗುಣಿಸಿ ಕುಣಿಸಿದಣಿಸುತಮಿದಂ ಮತ್ತೊರ್ವರರಿಯದಂತೆ |
ಅಪಲಪಿಸುತಜ್ಞಾನಮುಳಿಯದಂದದಿ ಮೋಹ
ಚಪಲತೆಯೊಳಂ ಸಿಲ್ಕಿ ತೊಳಗುವಂತೆಸದಿರ್ಪ
ಕಪಟನಾಟಕಸೂತ್ರಧಾರ ಶ್ರೀರಘುವೀರ ನೀನೆ ಶರಣಾಗೆಂದನು ||೪೬||

ಪೊಂದಿ ಸಕಲೇಂದ್ರಿಯಂಗಳ ಸುಖಾಸ್ಪದವೆನಿಪ
ಬಂಧುರಾನಂದಮಂ ಕೊಳುತಖಿಳರೊಳಹೊರಗೆ
ಪೊಂದಿಯೊಂದರೊಳಂಟದೊಂದುಳಿಯದೀ ಪರಿಯ ಸರ್ವಸುಖಭೋಕ್ತೃವೆನಿಸಿ ।
ನಿಂದು ವರ್ತಿಯಲಿ ತೈಲವನುಂಬ ಜ್ಯೋತಿಯಂ
ತೊಂದರೊಳು ತೊಡಕಿಲ್ಲದಕಳಂಕತವಪದ
ದ್ವಂದ್ವಕೆರಗುವೆ ದಯದಿ ಪೊರೆವುದೆನ್ನನೆನುತ್ತೆ ತುಂಬುರಂ ನುತಿಗೈದನು ॥೪೭॥

ಇಂತಮಿತಭಕ್ತಿಯಿಂ ಪೊಗಳುತಿಹ ತುಂಬುರ
ಸ್ವಾಂತನೈರ್ಮಲ್ಯಕಂ ಮೆಚ್ಚಿ ಸಂತಸದಿ ಶ್ರೀ
ಕಾಂತನಾಜ್ಞಾಪಿಸಿದ ಗಾಂಧರ್ವ ಬೇಡಿದುದನೀವೆ ಯಾಚಿಸುವುದೆನಲು ।
ಚಿಂತಾಯತ(ಕ?)ನೆ ಸತತಲೆನ್ನ ನಾಲಗೆ ನಾಮ
ಮಂ ತಳೆದು (ಯೆ?)ಕರಗಳುಂ ಪರಿಚರಣೆಗೈಯಲೋ
ರಂತೆ ಮಸ್ತಕ ಮಣಿಯಲತಿಭಕ್ತಿಯಂ ಪ್ರಿಯದೊಳೀವುದೆನಗೊಲಿದು ದಯದಿ ॥೪೮॥

ಧರಿಸಿರುವ ಚೀರವಸ್ತ್ರಂಗಳಿಂದುರುಜಟಾ
ಭರದಿಂದ ಶರಚಾಪವಿಡಿದ ಕರವೆರಡರಿಂ
ಧರಣಿಜೆಯು ಲಕ್ಷ್ಮಣಂ ಸೇವಿಸುತಲೆಡಬಲದೊಳೆಸವ ಮುನಿಮಂಡಲದೊಳು ।
ಮಿರುಪ ಮರಕತಮಣೀಸಂಪದವನಾಂತ ಶುಭ
ಕರಮೂರ್ತಿಯಗಲದಂತನುದಿನದಿ ಮಾನಸದೊ
ಳಿರುವಂತೆ ದಯೆಗೈಯವೇಳ್ಕು ನಮಿಸುವೆನೆನುತ ತುಂಬುರಂ ಕೀರ್ತಿಸಿದನು ॥೪೯॥

ನುತಿಗೆ ಸಂತಸವಟ್ಟು ಶ್ರೀರಾಮುಪುರದರಸ
ನತಿಶಯದ ಭಕ್ತಿಯಂ ದಯದೊಳಪ್ಪಣೆಗೊಟ್ಟು
ಸತತಸ(ಮು!)ನ್ಮೂರ್ತಿಯನ್ನಂತರಂಗದೊಳಿಟ್ಟು ಸುಖಮಿಹುದೆನುತ್ತಲೊರೆಯೆ ।
ಕತಿಪಯಸ್ತವಗಳಿಂ ಕೊಂಡಾಡಿ ನಿಜಲೋಕ
ಗತಿವಿಡಿದು ಗಂಧರ್ವ ಗಮಿಸಲಿತ್ತಲು ಮೌನಿ
ತತಿಯಮಿತಭಕ್ತಿಯಿಂ ಪೂಜಿಸುತ ಪೊಗಳಿದರ್ ಪರಬೊಮ್ಮನಗಜೆ ಕೇಳು ॥೫೦॥

ಅಂತು ಸಂಧಿ ೧ಕ್ಕಂ ಪದನು ೫೦ಕ್ಕಂ

ಮಂಗಳಮಹಾ ಶ್ರೀ ಶ್ರೀ ಶ್ರೀ.

— ಎರಡನೆಯ ಸಂಧಿ —

ಸೂಚನೆ || ಸುರರಾಜಮುಖ್ಯಗಾಂಧರ್ವರುಂ ಪೊಗಳುತಿರೆ
ಶರಭಂಗಮುನಿಗೆ ನಿರ್ವಾಣಸೌಖ್ಯಮನಿತ್ತು
ಧರಣಿಸುತೆ ಸಹಿತ ಕಲಶಜತನೂಭವ ಪರ್ಣನಿಳಯಕ್ಕೈತಂದನೊಲಿದು ||

ಪದನು|| ಘೋರತರರಕ್ಕಸಾಕಾರಮಂ ಪಳಿದು ಶೃಂ
ಗಾರತರದೇಹದಿಂದಂಬರದಿ ನಿಂತು ರಘು
ವೀರನಂ ನುತಿಗೈದು ಮುಂತಪ್ಪ ಕಜ್ಜಮಂ ಬಿನ್ನಪಂಗೆಯ್ದು ನಲಿದು |
ತೋರುತಿಹುದಯಿದರ್ಧಯೋಜನದಿ ಸುರಪನಾ
ಗಾರದೊಲು ಶರಭಂಗಮುನಿಪನಾಶ್ರಮಕೈದೆ
ತೋರಹರ್ಷಂ ಬರ್ಪುದೆಂದೊರೆದು ತುಂಬುರಂ ನಡೆದ ಕೇಳ್ ಶೈಲತನುಜೆ || ೧ ||

ಕಕ್ಕಸದ ರಕ್ಕಸನ ತಿಕ್ಕಿ ಭೂತಳಕಿಕ್ಕಿ
ಸೊಕ್ಕುವಾನಂದದಿಂ ಸೀತೆಯಂ ಬರೆಸೆಳೆದು
ತಕ್ಕವಿಸಿ ಸಂತವಿಸಿ ನೆರೆದ ಮುನಿಗಣದೊಡನೆ ರಘುವೀರನಿಂತೆಂದನು |
ಕಕ್ಕುಲಿತೆಗೊಳಿಪ ಕ್ರೂರಾಕಾರಮೃಗತತಿಗ
ಳಿಕ್ಕೆಯೆನಿಸುವ ಪೊಲವನುಳಿದು ತುಂಬುರ ಪೇಳ್ದ
ದಿಕ್ಕಿಗೈದಲ್ವೇಳ್ಕು ಶರಭಂಗನಾಶ್ರಮಕ್ಕೆಂದು ಸಂದೇಹಮುಳಿದು || ೨ ||

ಎನುತೊರೆಯಲಖಿಳಮುನಿಜನರೆಲ್ಲ ಸಂತಸದಿ
ಮನುಜಾಧಿನಾಥನೊಡನಾಳಂದದಿಂ ಬರಲು
ಜನಕಸುತೆ ಲಕ್ಷ್ಮಣರನೊಡಗೊಂಡು ಪಂಥಾನವಿಡಿದು ರಘುವರನೈತರೆ |
ವನಜಾಪ್ತವೈಶ್ವಾನರೋಪಮಿತರಥದೊಳಗೆ
ಮಿನುಗುತಿಹ ವಿರಜಾಂಬರಾಭರಣಭೂಷಣದಿ
ಘನವಾಹನಂ ವಿಬುಧಗಣದಿಂದ ಕಂಗೆಸದನಾಶ್ರಮದೊಳಚ್ಚರಿಯೆನೆ || ೩ ||

ಸುಲಲಿತಶುಭಾಕಾರದಿಂದಮಿತರಥಗಳಿ
ಕ್ಕೆಲದಿ ಸಂದಣಿಸಿರಲ್ ತತ್ಕಾಂತಿ ಭೂತಳ
ಕ್ಕೊಲೆಯದಂಬರದೊಳಿಹ ಸುಪ್ರಭಾಮಂಡಲವ ಕಂಡನಾ ರಘುವೀರನು |
ಒಲೆವ ಚಾಮರಗಳಂ ಪಾಂಡುರಚ್ಛತ್ರಮಂ
ಕೆಲಬಲದಿ ಪಾಡಿ ಪೊಗಳುವ ತುಂಬುರಾದಿಗಳ
ಕಳಕಳದಿ ಕಂಗೊಳಿಪ ದೀಧಿತಿಯ ಮಂಡಲವ ಕಂಡು ವಿಸ್ಮಿತನಾದನು || ೪ ||

ಕಳೆ ಖನೀಭವಿಸಿದಂತಂತರಿಕ್ಷದಲಿರಲು
ಕಳೆಯೊಳಂ ರುಷಿತತಿಗಳೆಲ್ಲ ನುತಿಗೈಯುತಿರೆ
ಪುಳಕಾಂಕುರಂಗಳಿಂ ಶರಭಂಗ ಸಲ್ಲಾಪಗೈವುತಿರುವಚ್ಚರಿಯನು |
ತಿಳಿದು ರಘುನಾಯಕಂ ಸೌಮಿತ್ರಿಯೊಡನೆಂದ
ಬೆಳಗಿನೊಬ್ಬುಳಿಯೊಮ್ಮೆ ಧರೆಗಿಳಿದ ಪಾಳ್ಕೆಯೊಳ್
ನಳಿನಾಪ್ತತೇಜಮನ್ನೊಳಕೊಂಡು ಕಂಗೊಳಿಸುವಚ್ಚರಿಯ ನಿಟ್ಟಿಸೆನುತ || ೫ ||

ಪೂರುವದೊಳಾವ್ ಪುರಾಣಾದಿಕಥೆಯೊಳು ಕೇಳ್ದ
ಚಾರುಘೋಟಕಕಲಿತರಥಮಿದೆಕೊ ಶಕ್ರನಂ
ಸಾರಿ ಕೆಲಬಲದೊಳಿಹ ಕುಂಡಲಿಗಳಪರಿಮಿತಶರಧನುಷ್ಪಾಣಿಗಳನು ।
ತೋರಭೂಷಣಮಿಟ್ಟು ಪಂಚವಿಂಶತಿವರ್ಷ
ದೋರುತಿಹ ಜವ್ವನದೊಳೆಸವುದಿದು ದೇವತಾ
ಕಾರಮೆಂದೆನ್ನ ಮನ ತಿಳಿವುತಿದೆ ಶರಭಂಗ ನಿಟ್ಟಿಸಲ್ ಬಂದನೆನುತ ॥ ೬ ॥

ಅರೆನಿಮಿಷ ವೈದೇಹಿ ಸಹಿತ ನೀನೊಂದೆಡೆಯ
ಲಿರು ಪೋಗಿ ಸಕಲವೃತ್ತಾಂತಮಂ ತಿಳಿದು ಬಂ
ದೊರೆದಪೆನೆನುತ್ತುಸಿರಿ ಶರಭಂಗನಾಶ್ರಮವನೊಳಪೊಕ್ಕ ರಘುವೀರನು ।
ನೆರೆದ ವಿಬುಧರ್ವೆರಸಿ ಸುರನಾಥ ತಮ್ಮೊಳಾ
ಪರಿಯನಾಳೋಚಿಸುತ ನರರಿಂದಗಮ್ಯ ಸುರ
ರಿರವು ಮತ್ತರೆನಿಮಿಷ ಪೆರಸಾರಿ ಮುನಿಪನಂ ಬೆಸಗೊಳಲ್ವೇಳ್ಕುಮೆನುತ ॥ ೭ ॥

ಅನಿತರೊಳು ಶರಭಂಗನೊಡನೆ ಪಾಕಾಹಿತಂ
ವಿನಯದಿಂದಿಂತೆಂದ ದೇವ ರಘುನಾಯಕಂ
ಮನದೊಲವಿನಿಂದಲೈತಹನು ಭವದೀಯಶುಭದರ್ಶನಕ್ಕೆಂದು ಮುದದಿ ।
ಘನತರಸುಕರ್ಮಗಳನೆಸಗಿ ನಿಷ್ಕಾಮನೆಯೊ
ಳನುದಿನಂ ತೋರ್ಪರೆಮ್ಮಂ ನೋಳ್ಪರಲ್ಲದೊಡೆ
ವನಧಿಮೇಖಲೆಯೊಳುಳ್ಳರಿಗೆ ಕಾಣ್ಬೊಡರಿದೆಂದುಸಿರಿರ್ಪ ಕಮಲಭವನು ॥ ೮ ॥

ಸುರಪಿರಿಯನಾಜ್ಞೆಯೊಳಗಿರವೇಳ್ಕು ಭವದೀಯ
ಚರಣಬಲದಿಂ ಪರಾತ್ಪರರಾಮನಂಘ್ರಿಗಳ
ಹರುಷದಿಂ ಕಂಡು ಸುಖಿಯಾದೆನಾದರು ಹರಿಯ ಕಟ್ಟಳೆಯನುಂ ಮೀರ್ವೊಡೆ ।
ಧರೆಯಲಾರ್ಗಳವಹುದು ಪರಿಪೂರ್ಣಮಾನಸದಿ
ಹರಿಯ ಸತ್ಕರಿಸಿ ಬೆಸಗೊಂಡು ಬರ್ಪನ್ನೆಗಂ
ಸುರರೊಡನೆ ಬೆರೆದಾನು ಮರೆಯೊಳಿಹೆನೆಂದೊರೆದು ಸುರನಾಥ ನಡೆದನೊಲಿದು ॥೯॥

ಜಂಭಾರಿ ನಿಜನಗರಿಗೈದಲಿತ್ತಲು ಮನಂ
ದಂಭಾದಿವರ್ಜಿತದ ಸಾತ್ವಿಕೋದಯವೆತ್ತು
ಶುಂಭಾಗ್ನಿಹೋತ್ರಗರ್ಜನೆಯಿಂದ ಶರಭಂಗನೊಪ್ಪಿರುವ ನಿಲಯದೆಡೆಗೆ ।
ಕುಂಭೀಂದ್ರಗಮನೆ ಜಾನಕಿಲಕ್ಷ್ಮಣರ ಸುಪ್ರಿ
ಯಂ ಭಾವುಕದಿ ಕರೆದು ಸ್ರಿಯದಿಂದಲೊಳಪೊಕ್ಕು
ಶಂಭುಸನ್ನಿಭಮಹಾಮುನಿಯ ಸಾರುತ್ತೆರಗಿ ನುತಿಸಿದಂ ಭಕ್ತಿಯಿಂದೆ ॥೧೦॥

ಅನುಜಾತಸತಿಸಹಿತಲಾ ಮುನೀಶನ ಪಾದ
ವನಜಗಳಿಗಭಿನಮಿಸೆ ಪಿಡಿದೆತ್ತಿ ಕುಳ್ಳಿರಿಸಿ
ಮನುಜಾವತಾರಮಂ ತಾಳ್ದು ಭೂಲೋಕಮಂ ಸಲಹಲೆಂದತಿಕರುಣದಿ ।
ವನಜಾಕ್ಷ ದೃಗ್ವಿಷಯಮಾಗಿರ್ಪೆಯಲ್ಲದೀ
ಮನವಚನರಚನೆಯಿಂ ಸಿಲ್ಕುವೆಯ ಪರಬೊಮ್ಮ
ಚಿನುಮಾತ್ರ ನಿಖಿಲಜೀವರ ಸೂತ್ರ ನೀನೆಂದು ತಿಳಿದಿರ್ಪೆ ಪರಮಪುರುಷ ॥೧೧॥

ಈಸುದಿನವಾನೆಸಗಿದುರುತಪಕೆ ಕರುಣದಿಂ
ಲೇಸನೀಯುವರೆಂದು ಬಂದೆಯಲ್ಲದೆ ತಮೋ
ರಾಸಿದಾನಾಧ್ಯಯನತಪದಿಂದ ಸಿಲ್ಕುವೆಯ ಪರಬೊಮ್ಮ ಪರಮಪುರುಷ |
ಏಸುಜನ್ಮದ ಸುಕೃತಫಲ ಬಂದುದೋ ಯೆನುತ
ವಾಸವಾರ್ಚಿತಚರಣಮಂ ತೊಳೆದು ಪೂಜಿಸಿ ಸು
ಖಾಸನವನಿತ್ತು ಫಲಮೂಲಗಳನರ್ಪಿಸಿದ ಮುನಿಪನತಿಭಕ್ತಿಯಿಂದ ||೧೨||

ಪ್ರೀತಿಯಿಂ ಭಾವಿಸಿದ ಪೂಜೆಯಂ ಕೊಂಡು ರಘು
ನೇತನನುಕಂಪದಿಂ ಬೆಸಗೊಂಡನೆಲೆಮುನಿಪ
ನೀ ತಪೋವನದೆಡೆಗೆ ಬಂದಿರ್ದರಾರೆಂಬುದೆನಗೆ ಬಿತ್ತರಿಪುದೆನಲು |
ತಾತ ಕೇಳಾಂ ಜೀರ್ಣತನುವುಳಿದು ಸಗ್ಗಿಗರ
ತಾತನೆಡೆಗೈದಲೆಳಸಿರಲ್ಕಿಂದ್ರ ನಿಜಬಲಸ
ಮೇತದಿಂ ಕರೆದೊಯ್ಯಲೈತಂದನನಿತರೊಳ್ಮುದದಿಂದ ಹರಿ ಕೃಪೆಯೊಳು ||೧೩||

ಧರಣಿಯೊಳಗನತರಿಸಿ ದಂಡಕಾವನದ ಖುಷಿ
ವರರ ಸಲಹಲು ಬಂದ ಪರಿಯಂ ಸಮಾಧಿಯಿಂ
ದರಿತು ಚರಣವ ನೋಡಲಾನಿರಲ್ ಸುರನಾಥನೈದಿದಂ ನಿಜನಿಲಯಕೆ |
ಪರಮೇಷ್ಠಿಯಿರವು ಪರಮಾನಂದದಿಕ್ಕೆ ಶುಭ
ಚರಣಗಳೆನುತ್ತ ಭಯಭರಿತಭಕ್ತಿಯೊಳಾನು
ಕರುಣಾಳುಗಳ ದೇವ ಮರೆವೊಕ್ಕೆ ಕಾವುದೆಂದೆರಗಿ ನುತಿಗೈದನೊಲಿದು ||೧೪||

ಆಜನನದಿಂದಾನು ಗಳಿಸಿರ್ಪ ಪುಣ್ಯದ ಸ
ಮಾಜಮಂ ಭವದೀಯಪದಕರ್ಪಿತಂಗೈವೆ
ನೀ ಜಗದ್ಭರಿತನಲೆ ಕೈಕೊಂಡು ಮತ್ಪುಣ್ಯಗಳನು ಕರುಣದಿಂ ಸುಗತಿಯ |
ಭಾಜನನೆ ಮಾಳ್ಪುದೀ ಜೀರ್ಣತನುವಂ ಬಿಸುಟು
ತೇಜೋಮಯಾನಂದಭರಿತದೇಹವ ತೊಟ್ಟು
ರಾರಾಜಿಸುವೆನರೆನಿಮಿಷ ದಯದಿಂದ ನೋಳ್ಪುದೆಂದೆರಗಿ ಪ್ರಾರ್ಥನೆಗೈದನು ||೧೫||

ಕ್ರತುಭುಜನ ಪಂಚೋಪಚಾರದಿಂ ಸತ್ಕರಿಸಿ
ಹುತವಹನ ಪೊಕ್ಕುರಗ ಪೊರೆಗಳೆದ ರೀತಿಯೊಳ್
ಶಿಥಿಲಭೌತಿಕದೇಹಮಂ ಬಿಟ್ಟು ಪೊರಮಟ್ಟು ತೇಜೋನ್ನತದ ಮೂರ್ತಿಯಿಂ |
ವಿತತಮಾಲ್ಯಾಂಬರವಿಭೂಷಣಗಳಿಂ ದಿವ್ಯ
ರಥದಿಂದಲಂಬರದಿ ನಿಂದು ರಘುನಾಯಕಂ
ಗತಿಶಯದ ಭಕ್ತಿಯಿಂದೊಡನೆ ಬಲವಂದೆರಗಿ ಮುಗುಳೆ ನುತಿಸಿದ ಮುನಿಪನು ||೧೬||

ಭಾವನಾತೀತ ಭಜಕರಿಗಿಷ್ಟಸಂದಾತ
ಭಾವನಾಮಯ ಬಹುಜಗನ್ಮಯ ಸುರೇಶಾನ
ಭಾವಭವ ಹರವಿರಿಂಚಾದಿಹೃತ್ಸರಸೀರುಹಾಂತಸ್ಥ ಚಿತ್ಸ್ವರೂಪ |
ಜೀವಸ್ವರೂಪ ಜೀವಾಧಾರ ಬಹುರೂಪ
ಪಾವನಾಕಾರ ರಘುವೀರ ಸೂತ್ರಾಧಾರ
ದೇವದೇವೇಶ ನಿಮ್ಮಡಿಯ ಡಿಂಗರಿಗನೆಂದೊಲಿದೆನ್ನ ಸಲಹು ಜೀಯ ||೧೭||

ತಾರಕಬ್ರಹ್ಮಮಯನಾನು ಮೇಘಶ್ಯಾಮ
ಚೀರಕೃಷ್ಣಾಜಿನಾಂಬರ ಚಿದಂಬರ ಜಟಾ
ಧಾರಿ ಶರಚಾಪಕರ ಧರಣಿಜಾವರ ಸುಮಿತ್ರಾತನಯಸಂಸೇವಿತ |
ಚಾರುತರಮೂರ್ತಿ ಯೆನ್ನಂತರಂಗದಿ ಶುಭಾ
ಕಾರದಿಂದನವರತವೆಡೆಬಿಡದೆ ತೋರುವಂ
ತೋರಂತೆ ಕೃಪೆಗೈಯನೇಳ್ಕು ದೀನಾರ್ತಿಹರ ರಘುವೀರ ಕಾರುಣಿಕನೆ ||೧೮||

ಹಿತವನೆಸಗುವನಗಸ್ತ್ಯನ ಶಿಷ್ಯ ಯೋಗಮಯ
ನತಿಶಾಂತನೊಪ್ಪಿಹ ಸುತೀಕ್ಷ್ಣನಾಮಕ ಮೌನಿ
ತತಿಗಳಗ್ರೇಸರಂ ನೀವಲ್ಲಿಗೈದೆ ಶುಭಮಹುದೆನುತ ಪೇಳಿ ನಯದಿ |
ಅತಿಶಯದಯೋಧ್ಯಾಧಿಪತಿ ಧರಣಿಜಾತೆ ಸಹ
ಸತತಹೃನ್ನಿಲಯದೊಳಗಿರಲೆನುತ ಬೇಡುತಂ
ಯತಿಪನೈದಿದ ಚತುರ್ಮುಖಪದವ ಗತಿವಿಡಿದದೇನೆಂಬೆನದ್ಭುತವನು ||೧೯||

ವಿಮಲಮತಿಯಿಂ ಮುನಿಪನೈತರುವುದೀಕ್ಷಿಸುತ
ಕಮಲಪೀಠಂ ಮುದದೊಳಪ್ಪಿ ಪರಿಚರಣೆಯಿಂ
ಕ್ರಮದಿಂದ ಸಂತಸಂಗೊಳಿಸಿದಂ ಬಳಿಕಿತ್ತ ಶ್ರೀರಾಮಚಂದ್ರನೆಡೆಗೆ |
ಯಮಿಗಳೈತಂದರಂಬುಜಪೀಠಪದನತಿ
ಕ್ರಮಗೈದ ವೈಖಾನಸಪ್ರಭೃತಿ ಮತ್ತವರ
ಸಮತೆಯಿಂದ ಮರೀಚಿವಾಲಖಿಲ್ಯಾದಿಗಳ್ ನೋಳ್ಪರುಜ್ಜುಗದಿ ನಯದಿ ||೨೦||

ಕೆಲರು ಪರ್ಣಾಹಾರ ಕೆಲರು ಮರುತಾಹಾರ
ಕೆಲಬರಬ್ಭಕ್ಷರ್ ಕೆಲರು ಕಂದಾಹಾರ
ಕೆಲರು ಚಾಂದ್ರಾಯಣ ನಿರಾಹಾರದಿಂದಿರುತ ನಿಜತಪೋಜೀವನಿಕರು |
ಕೆಲರು ಗಗನಾವಾಸ ಕೆಲರು ಚೀರಾವಾಸ
ಕೆಲರಗ್ನಿಮಧ್ಯಗತ ಕೆಲರು ಗಹ್ವರವಾಸ
ಚಲಘುಮತಿಗಳು ಬಂದರಂಬುಜದಳಾಕ್ಷನಂ ನಿಟ್ಟಿಪಭಿಲಾಷೆಯಿಂದೆ ||೨೧||

ವಿಮಲಮತಿಗಳ ಹಿಂಡು ತಮುಸಃಪರನ ಕಂಡು
ಕ್ರಮದಿಂದ ಮುಂಕೊಂಡು ಬಂದಾಶಿಷಗಳೆಸಗಿ
ಸುಮನಸರಿಗಿಂದ್ರನಂತೀ ಮಹೀತಳಕೆ ರಘುವಂಶಸಂಭೂತನೆನಿಪ |
ಅಮಿತವಿಕ್ರಮ ಯಶೋನಿಲಯ ಲೋಕವ ಪೊರೆಯೆ
ಮಮತೆಯಿಂದರಸೆನಿಪನಿದು ಭಾಸ್ಕರಾನ್ವಯ
ಕ್ರಮಪರಂಪರೆಯಲಾಗಿದೆಯೆಂದು ಮನದಿರವನಾಲಿಪುದು ನೃಪವರೇಣ್ಯ ||೨೨||

ಅಲಘುತಪದಿಂ ನಿರಾಹಾರ ಪರ್ಣಾಹಾರ
ಕಲನೆಯಿಂದೆಸಗಿದ ಮಹಾತಪದಿ ಪಾಲೊಂದ
ನೆಲದಾಣ್ಮನಿಂಗಿತ್ತು ಬಲಿಯ ಷಡ್ಭಾಗಮುಂ ತೆತ್ತು ಧರ್ಮವ ಪೆರ್ಚಿಸಿ |
ಸುಲಭದಿಂ ಸುಖವನೊದವಿಸುವ ಸುಬ್ರಾಹ್ಮಣ್ಯ
ಕುಲವಾವವಸ್ಥೆಯೊಳಗಿರಲಿ ಬಂದವರುಗಳ
ನಲೆವೆಡರುಗಳ ನೀಗಿ ನಿಜತನಯರೆಂಬಂತೆ ನೃಪತಿ ಪೊರೆವುದು ಸತ್ಯವು ||೨೩||

ಮನುವಂಶದರಸುಗಳ್ ಮೂಲೋಕನಾಯಕರ್
ವನಧಿಮೇಖಲೆಯ ರಕ್ಷಿಸಿ ಧರ್ಮಮಂ ಗಳಿಸಿ
ವನಜಮಿತ್ರನ ಗೋತ್ರವರ್ಧನಂಗೈವರಲೆ ಮತ್ತೊಂದನುಂ ಬಯಸದೆ |
ಜನನಾಥ ಕೇಳನಾಥರಿಗೆ ಗತಿ ನೀನಲ್ಲ
ದನಿಬರಾರುಂಟು ಮುನಿಜನರವಸ್ಥೆಯನೆಲ್ಲ
ಮನವೊಲಿದು ನೋಡಿ ಪರಿಪಾಲನಂಗೈದಪುದು ಮುನಿಗಳಂ ಮನುಜನಾಥ ||೨೪||

ರಕ್ಕಸರ ಬಾಧೆಯಿಂ ರಾಜಿಸುವ ತಪಕೆ ಮನ
ಸಿಕ್ಕದಂತಾಯ್ತು ಮುನಿಗಳನೆಲ್ಲ ಪಿಡಿಪಿಡಿದು
ಕಕ್ಕುಲಿತೆಗೊಳಿಸಿ ಭಕ್ಷಣೆಗೈದು ಬಿಸುಟಿರ್ಪ ಮಸ್ತಕಶರೀರಂಗಳ |
ದಿಕ್ಕುದಿಕ್ಕಾಗಿ ಕೆಡದಿರುವಸ್ಥಿಖಂಡಗಳ
ಸಿಕ್ಕಿರಿವ ದೇಹಗಳನಾಥರಂ ಪೊರೆಯೆ ನೀ
ದಿಕ್ಕಿಲ್ಲದುಳಿದರಾರುಂಟು ದಯದಿಂ ನೋಳ್ಪುದೆಮ್ಮವಸ್ಥೆಯ ಶರಣ್ಯ ||೨೫||

ಮಂದಾಕಿನಿಯ ಪಿಡಿದು ಪಂಪಾನದೀತಟದ
ಮಂದಸುಖವಿೂವ ಕಾವೇರಿಮೊದಲಾದೆಲ್ಲ
ಮೊಂದರೊಳು ನಿಲಲೀಯದೆಮ್ಮ ಬಹುವಿಧದಿಂದ ಬಾಧಿಸುವ ಕ್ರವ್ಯಾದರ |
ದಂದುಗವ ಪರಿಹರಿಸಿ ಪೊರೆದಪುದು ದೀನಾರ್ತ
ಬಂಧುಗತಿ ನೀನೆಂದು ಮರೆವೊಕ್ಕೆವೈ ಬಂದು
ಮಿಂದೆಮ್ಮ ಭಯವನಪಹರಿಸೆಂದು ಮುನಿಜನರ್ ಪೇಳ್ದರತ್ಯಾರ್ತಿವಿಡಿದು ||೨೬||

ಈ ಪರಿಯಲಖಿಳಮುನಿವರರಾರ್ತಿಯಂ ಪೇಳ್ದ
ಪಾಪಿರಕ್ಕಸರುರುಬನೆಲ್ಲಮಂ ಕೇಳ್ದು ಸ
ದ್ಯೋಪಚಾರಂಗೈದು ಮುನಿಜನರಿಗಭಯಕರಸುಕರತರವಾಕ್ಯಂಗಳ |
ಶ್ರೀಪ ಬೆಸಸಿದ ತಪೋರಾಶಿಗಳಿ ನೀವು ಪೇ
ಳ್ದೊಪಾದಿಯೊಳ್ ಪೊರೆಯಲೆಂದು ಪ್ರಿಯದಿಂ ವರಮ
ಹೀಪಾಲನಪ್ಪಣೆಯ ಕೊಟ್ಟು ಕಳಿಪಿದನೆನ್ನ ಧರ್ಮಮಂ ಸಲಹಲೆಂದು ||೨೭||

ಆವ ಪರಿಯಲಿ ನೀವು ಬೆಸಸಿದುದ ಕೇಳುತ್ತ
ಸೇವೆಯೊಳಗಿಹೆನೆನ್ನ ಕೃಪೆಯಿಂದ ಪಾಲಿಸುವು
ದೀ ವಸುಧೆಗತಿಬಾಧೆಗೊಳಿಪ ರಕ್ಕಸಕುಲವನೆಲ್ಲಮಂ ಸವರಿ ಕವರಿ |
ದೇವತತಿಯಂ ತೃಪ್ತಿಗೊಳಿಪೆನಾವಿತ್ತಭಯ
ಮಿೂ ವಸುಧೆಯುಳ್ಳಖಿಳಋಷಿಗಳುಂ ತಿಳಿದು ನಿಜ
ಪಾವನತಪಂಗಳಂ ಪೆರ್ಚಿಸುತ ಸುಖಮಿರ್ಪುದೆಂದು ರಘುನಾಥನೊಲಿದು ||೨೮||

ಕಂದಿರ್ಪ ಸಸ್ಯಾಳಿಗಳಿಗೆ ಮೇಘಾಳಿ ಸುಳಿ
ದಂದದಿಂದಮೃತಮಯಮೆನಿಪ ರಘುವರವಾಕ್ಯ
ದಂದಮಂ ಕೇಳಿ ಮುನಿವೃಂದಮಾನಂದಮಂ ಪೊಂದಿದರನೇಕವಿಧದಿ |
ಇಂದಿರೇಶ ಮುಕುಂದ ವೇದವೇದ್ಯಾನಂದ
ಕಂದ ಮುದದಿಂದ ಭೂದಿವಿಜಕುಲಮಂ ಪೊರೆಯ
ಲೆಂದವತರಣೆಗೈದ ಪರಿಯ ಪಿರಿಯರ ಮತದಿ ತಿಳಿದಿರ್ಪೆವಯ್ಯ ಜೀಯ ||೨೯||

ಸ್ಮರಿಸಿದೊಡೆ ಭವದೀಯನಾಮವೆರಡಕ್ಕರವ
ಪರಿಗೊಂಡು ವಿಪದ ಸಂಪದಮುಪ್ಪುದೀ ಮೂರ್ತಿ
ಪೊರೆಯಲಿರಲಾಪದದ ಪೆಸರೆಂಬುದಿನ್ನುಂಟೆ ಗೆಂಟೆ ದುಷ್ಕೃತವಿತತಿಯು |
ಪರಿಪೂರ್ಣಸುಖಮಾದುದೆಮಗೆಂದು ಪ್ರೀತಿಯಿಂ
ಪರಮರುಷಿಗಳು ನುತಿಸೆ ರಘುನಾಥ ಪ್ರಿಯದಭಯ
ಕರವಿತ್ತು ಸಂಭ್ರಮಂಗೊಳಿಸಿದಂ ನಲವೆತ್ತು ಭಕ್ತಪರತಂತ್ರವೆತ್ತು ||೩೦||

ಮುನಿತತಿಗಳೊಡಗೊಂಡು ಬನದೊಳಂ ನಡೆಗೊಂಡು
ವನಿತೆಲಕ್ಷ್ಮಣಸಹಿತಲಲ್ಲಲ್ಲಿ ತಾಪಸರ
ಮನೆಮನೆಗಳಂ ನೋಡುತಡಿಗಡಿಗೆ ಕುಸ್ತರಿಸುತತಿಶಯದ ಕರುಣದಿಂದ |
ವನಜಾಕ್ಷ ರಾಮಪುರದರಸಂ ಸುತೀಕ್ಷ್ಣಾಖ್ಯ
ಮುನಿಪನಾಶ್ರಮದೆಡೆಗೆ ಬಂದನಾನಂದದಿಂ
ತನತನಗೆ ವಿಪ್ರಕುಲ ಪರಸಿ ಮಂತ್ರಾಕ್ಷತೆಗಳಿಟ್ಟು ಜಯಜಯವೆನುತಿರೆ ||೩೧||

ಅಂತು ಸಂಧಿ ೨ಕ್ಕಂ ಪದನು ೬೧ಕ್ಕಂ

ಮಂಗಳಮಹಾ ಶ್ರೀಶ್ರೀಶ್ರೀ.

— ಮೂರನೆಯ ಸಂಧಿ —

ಸೂಚನೆ || ಶ್ಲಕ್ಷ್ಣಾನುರಾಗದಿಂದೊಡನೆ ಋಷಿತತಿ ಬರಲ
ಭೀಕ್ಷ್ಣದಿಂ ಗತಿವಿಡಿದು ಪೊಕ್ಕ ರಘುವೀರಂ ಸು
ತೀಕ್ಷ್ಣನಾಶ್ರಮುವ ಭಕ್ತಾಧೀನನೆಂದೆನಿಪ ಬಿರುದನುದ್ಧರಿಪೆನೆನುತ ||

ಪದನು|| ಹಿಮವಂತನಣುಗಿ ಕೇಳ್ ಶರಭಂಗಮುನಿ ಬೊಮ್ಮ
ಸಮುಖಕೈದಲ್ ರಾಮ ಸಕಲಋಷಿತತಿವೆರಸಿ
ವಿಮಲಮತಿ ಕಲಶಜಾಂತೇವಾಸಿಯಂ ಕಾಣ್ಬ ಕೌತುಕಿತಚಿತ್ತನೆನಿಸಿ |
ಕಮಲಮುಖಿ ಸೀತೆ ಲಕ್ಷ್ಮಣರನೊಡಗೊಂಡು ಸಂ
ಭ್ರಮದಿಂದ ನಡೆದನಂಬುಧಿಯಂತಪಾರಸಂ
ಕ್ರಮವಿತತಿಶೈಲಗಳ ನದನದಿಗಳಂ ದಾಂಟುತಲ್ಲಲ್ಲಿ ನೋಡಿ ನಿಲುತ || ೧ ||

ಜರಟಸ್ತಮೋನಿಲಯಮುಪಧಿಗಿರಿಪಾಶ್ಚಾತ್ಯ
ಧರಣಿಯಂತತುಲಭೀಕರಗಹನಮೆಂದು ದಿನ
ಕರಸುಧಾಸೂತಿಯರು ಸುಳಿಯಲನ್ಮದೆ ನಭೋಗತಿವಿಡಿದು ಪೂರ್ವೇತರ |
ಶರನಿಧಿಯ ಪೊಕ್ಕರಸುವಂದದೀ ನೆಲದಿ ಸಂ
ಚರಿಸಲಕ್ಕುಮೆ ಕ್ರೂರದಾನವಾವಾಸ ಪಿಂ
ದಿರುಗೆನುತ ಪೇಳ್ದಪಳೋ ವಿಪಿನದೇವತೆಯೆಂಬ ಮಾಳ್ಕೆಯೊಳು ಖಗರುತಗಳು || ೨ ||

ಮೊರಯುತಿರೆ ನಾಲ್ದೆಸೆಯ ಶ್ವಾಪದಂಗಳು ಚೀರ್ವ
ತರತರದ ಭೀಕರವ ಕಂಡು ಯಮಿತತಿಯಳ್ಕು
ತಿರಲವರ ಸಂತೈಸಿ ಪಥವಿಡಿದು ನಡೆತರಲ್ಕತಿಗೋಪ್ಯಕರಠಾಣದಿ |
ಮಿರುಗಿತೊಂದೆಲೆವನೆಯು ಪಂಚಜನಸಂಚಾರ
ವೆರೆದಿರಲ್ಕಂಡಿದೇ ಮುನಿಪಮಂದಿರಮೆನುತ
ಪರಮೌನಿಜನವೆರೆದು ಬಂದಾ ಸುತೀಕ್ಷ್ಣನಿಹ ತಾಣಮಂ ಕಂಡನೊಲಿದು || ೩ ||

ಬಲಿದ ಪದ್ಮಾಸನದಿ ಘೋಣಾಗ್ರದೊಳಗಿಟ್ಟು
ಚಲನೆಗೈಯದ ದೃಷ್ಟಿ ಬಲಿದ ಹೃನ್ಮಂದಿರದಿ
ನೆಲನಣುಗಿ ಸೌಮಿತ್ರಿಯುತರಾಮಮೂರ್ತಿಯಂ ನೆಲೆಗೊಳಿಸಿ ಪೀಠದೊಳಗೆ |
ಅಲೆಯಿಲ್ಲದಂಬುಧಿವೊಲಾ ಮೌನಿ ಕುಳ್ಳಿರ್ದ
ಮಲಪಂಕದುರುಜಟಾಮಂಡಲದ ಭಾರಸಂ-
ಕಲಿತಪುತ್ಥಳಿಯಂತೆ ಕಂಗೆಸೆಯೆ ನೋಡುತಚ್ಚರಿಗೊಂಡ ರಘುವೀರನು || ೪ ||

ಚಲಿಸದಿರಲುಂ ಕರಣ ತೊಲಗೆ ಮಾಯಾವರಣ
ಬಲಿದಾ ಸಮೀರಣನ ಕಲಿತಬಿಂದೂದ್ಧರಣ
ದಲಿ ಚಿದಾನಂದಾಬ್ಧಿಯೊಳಗಾಳುತೇಳುತಂ ಮರೆದೀ ಪ್ರಪಂಚಗಳನು |
ಅಲುಗದೊಪ್ಪಿರೆ ರಾಮನೈತಂದ ಪರಿಯ ಕೇಲ
ಬಲದಲಿರ್ದವರರಿಪಲೆಚ್ಚತ್ತು ನಿಜಹೃದಯ
ನಿಲಯಗತಮೂರ್ತಿಯಂ ನೆಲದಲಿಟ್ಟೆಸಿ ನಲಿದನಾನಂದಪುಳಕದಿಂದ || ೫

ಹರುಷರಸ ಮುಂಕೊಂಡು ಪರಬೊಮ್ಮನಂ ಕಂಡು
ಮುರಿಯೆ ಮರವೆಯ ದಂಡು ಮುಂಗಡೆಯ ಸುಖವಿಂಡು
ಭರಿತಮಾಗಿರೆ ನೋಡಿ ಮೌನಿಪತಿಸಂತಸಂಗೊಂಡು ತುತಿಗೈದನೊಲಿದು |
ಹರವಿರಿಂಚಾದಿಸುರರರಸಿ ಕಾಣದ ದಿವ್ಯ
ಚರಣಮಸ್ಮದ್ಭಾಗ್ಯಬಲದಿ ಗೋಚರಮಾಯ್ತು
ಪರಮಂತ್ರಜಪಸಿದ್ಧಿ ಕರತಳಕೆ ಬಂದುದೆಂದೆರಗಿದಂ ಮುನಿಪ ಭರದಿ || ೬ ||

ಕುಲಬಲಾಶ್ರಮದೇಹಮೋಹಪಾಶಂಗಳಂ
ಬಲಿದು ಭವದೀಯಮಾಯಾಶಕ್ತಿ ಬಂಧುಜನ
ಕಲಿತಸತಿಸುತರೆಂಬ ಬಲುಕಡಲ ಮಧ್ಯದೊಳು ಕೆಡಹಿದುದನೇನೆಂಬೆನು |
ಜಲಜಾಕ್ಷ ಮೂಲೋಕದರಸ ದಯದಿಂದೆನ್ನ
ನೊಲಿದುದ್ಧರಿಸವೇಳ್ಕುಮೆನುತ ಕರಗಳ ಮುಗಿದು
ಸಲಲಿತಾನಂದಕರಮೂರ್ತಿಯಂ ನುತಿಗೈದನಾ ವಿಪ್ರಕುಲವರ್ಯನು || ೭ ||

ಮೂರು ಗುಣಗಳ ಪೊಂದದಾಗುಣಗಳಂ ಪಿಡಿದು
ಮೂರುಮೂರ್ತಿಗಳೆನಿಸುತವರವರಿಗಧಿಕಾರ
ಧಾರಣಂಗೈಸಿ ಮತ್ತಮಿತರೂಪುಗಳಾಂತು ಮೂಲೋಕದೊಳಗೆ ಹೊರಗೆ |
ಬೇರೆ ಬೇರೆನಿಸಿ ತೋರುವೆ ಕರೀರ(ತರಂಗ?)ಗಳುದರ
ದಾ ರವಿಯ ಮಾಳ್ಕೆಯೊಳಗೊರ್ವನಖಿಲಾಕೃತಿಯ
ಧಾರಣಂಗೈಸಿರ್ಪ ಚಿನುಮಯ ಚಿದಾನಂದಕಂದ ವಂದಿಸುವೆ ನಿನಗೆ || ೮ ||

ಸರ್ವಭೂತಾಂತಸ್ಥನೆನಿಸಿ ಭಜಕರ ಹೃದಯ
ಗರ್ವೀಕರಣಮಾಯೆಯಿರದಂತೆ ತೊಲಗಿಸುತ
ಖರ್ವಪ್ರಧಾನ ನಿಜನೆಲೆಯೆನಿಪೆ ಭವದೀಯಮಂತ್ರವಿಮುಖಾತ್ಮತತಿಗೆ |
ಗರ್ವಾಂಧತೆಯನೊತ್ತಿ ಸತತಸನ್ನಾಮಗಳೆ
ಸರ್ವಸ್ವಮೆಂದರಿತು ಸೇವಿಸುವ ಲೋಕಕೆ ಸು
ಪರ್ವಾಣಶಾಖಿಯಂತಿಚ್ಛೆಗೈದುದನೀವೆ ಸೇವಾನುರೂಪದಿರವೆ || ೯ ||

ಅಚ್ಚರಿಯನೇನೆಂಬೆ ರೂಪಿಲ್ಲದಿಹ ವಸ್ತು
ಮುಚ್ಚಟೆಯ ಶರಚಾಪಗಳ ಪಿಡಿದು ಮರಕತಮ
ಣಿಚ್ಛವಿಯಲುರುಜಟಾಚೀರವಸನಂಗಳಂ ಧರಿಸಿ ಸ್ಮಿತವಕ್ತ್ರವೆರೆಸಿ |
ಒಚ್ಚೇರೆಗಣ್ಣ ಕೋಮಲೆ ಜಾನಕಿಯು ಸಹಿತ
ನಿಚ್ಚಳದಿ ಸೇವಿಸುವ ಲಕ್ಷ್ಮಣನ ಮನ್ನಿಸುತ
ಪೊಚ್ಚಪೊಸಜವ್ವನಿಗನಂತೆ ಗೋಚರಮಾದೆ ಮಾನುಷಾಕಾರವೆತ್ತು ||೧೦||

ದೇಶಕಾಲಾದ್ಯುಪಾಧಿಗಳಿಂದ ವಿರಚಿತಸು
ರೇಶಹರಬ್ರಹ್ಮಾದಿ ನಿಗಮದೂರಂ ಸಕಲ
ಪಾಶನಿರ್ಮುಕ್ತ ಶ್ರುತಿಮುಕುಟಮಂದಿರ ಮನೋವಾಚಾಮಗೋಚರ ಹರಂ |
ಈಶಾದಿಗಳನು ಪೆತ್ತಾತ ತ್ರಿಜಗತ್ತ್ರಾತ
ನೀ ಶರಣರಂ ಪೊರೆಯಲೆಂದು ದಯದಿಂ ಮನುಜ
ವೇಷದಿಂ ಕಂಗೊಳಿಪೆಯಲ್ಲದುಳಿದವರಿಂಗೆ ಗೋಚರಿಸೆ ವಿಮಲರೂಪ ||೧೧||

ಸತತಂ ಭವನ್ಮಂತ್ರಜಾಪಕರಿಗತಿಪ್ರಿಯದಿ
ಮತಿಯಿತ್ತು ಮಾಯೆಯಂ ಪೊಗದಂತೆ ಮಾಳ್ಪೆ ನಿ
ನ್ನತಿಶಯದ ಮನುವಿಮುಖರಿಂಗೆ ಹೃತ್ಕತ್ತಲೆಯ ನೀರಂಧ್ರದಿಂದೆಸಗುವೆ ।
ಪತಿತಪಾವನ ರಾಮನಾಮಶಕ್ತಿಯೊಳನಾ
ರತದಾಸದಾಸನೆಂದರಿದು ಮೂರ್ತಿಯ ಚಿತ್ತ
ಮತಿಗಳೆಯದಂತಿರ್ಪೊಲಭಯಮಂ ಪಾಲಿಸುವುದೆಂದು ವಂದನೆಗೈದನು ॥೧೨॥

ಪರಪರಿಯ ಭಕ್ತಿಯಿಂ ಪೊಗಳಿ ಪಾಡುತ ತನ್ನ
ಗುರುಪೇಳ್ದ ತೆರದಿಂದಮರ್ಚನಂಗೈದು ನಿಜ
ಕರದಿಂದ ಪದಗಳಂ ತೊಳೆದುದಕಮಂ ಕೊಂಡು ಶಾಶ್ವತದ ಪದವ ಪಡೆದು ।
ಹರುಷದಿಂ ಮುನಿಯೆಸಗಿದುಪಚರಣೆಯಿಂ ಜಗ
ದ್ಭರಿತ ಹರಿ ಸಂತಸದಿ ಕೆಲಕಾಲಮಲ್ಲಿರ್ದ
ನಿರತಿಶಯಸುಖಗಳಂ ನಿಜಭಜಕರಿಂಗೀವುತಾನಂದವೈಭವದಲಿ ॥೧೩॥

ದೇವ ಕಲಶಜ ಪೇಳ್ದ ರಾಮಾರ್ಚನಾವಿಧಿಯೊ
ಳೋವಿ ಪೂಜಿಸಿದಂ ಸುತೀಕ್ಷ್ಣಮುನಿವರ ಪರಮ
ಪಾವನಪದದ್ವಂದ್ವಹರಿಯನೆಂದರಿಪುವಿರಿ ಮತ್ತದಂ ವಿಸ್ತರದಲಿ ।
ನೀವೆ ದಯೆಗೈವೇಳ್ವುಮೆನುತಗಜೆ ಬೆಸಗೊಳಲ್
ಪಾವಿನತುಳಾಭರಣನತಿಹರುಷದಿಂ ಕೇಳ್ದು
ದೇವಿ ನಿನಗಿಂದಧಿಕಕರುಣದಿಂ ವಿಸ್ತರಿಸಿ ಪೇಳ್ವೆ ಪೂಜಾವಿಧಿಯನು ॥೧೪॥

ವೇದಗಳ್ ಬಹುಬಗೆಗಳಿಂದ ಪೇಳುವುವವರ
ಹಾದಿಯಂ ಪಿಡಿದು ಯಮಿವರರುಗಳನೇಕವಿಧ
ಮಾದ ಭಕ್ತಿಯೊಳು ಸಂತತಮರ್ಚನಂಗೈವರದು ಪಾರವಿಲ್ಲವನಘೇ ।
ಮೇದಿನಿಯ ಹಿತಕೆಂದು ಬೆಸಗೊಂಬೆ ಭಕ್ತಿಯೊಳ
ಗಾದರದಲೊಳಗೊಂಪರಿಯ ಸಂಕುಚಿತದಿಂ
ಬೋಧಿಸುವೆ ತಿಳಿದನುಷ್ಠಾನದಿಂ ಕೃತಿಯಪ್ಪುದೆನುತ ಹರನೊರೆದನೊಲಿದು ॥೧೫॥

ಉದಯದೊಳು ರಘುವರನ ನೆನವುತೆಚ್ಚತ್ತು ನಿಜ
ಪದಕರಾದಿಗಳನ್ನು ಶುಚಿಗೈದು ಖದಿರದಿಂ
ರದನಶುದ್ಧಿಯ ಗೈದು ಮೃಲ್ಲೇಪನಗಳಿಂದ ತನ್ನ ಶಾಖೋಚಿತಗಳ ।
ಉದಿತವಿಧಿಯಿಂ ಸ್ನಾನಸಂಧ್ಯಾದಿಗಳ ರಚಿಸಿ
ಮುದದಿಂದ ಪುಷ್ಪೋಪಚಯಗೈದು ಬಂದು ನಿಜ
ಸದನಮಂ ಪೊಕ್ಕು ಪದಗಳ ತೊಳೆದು ದೇವಾರ್ಚನಾಗೃಹವ ಪೊಗುವುದಗಜೆ ॥೧೬॥

ಅಲ್ಲಿ ವೈಯಾಘ್ರಾಜಿನಾದಿಪಾಸಿಕೆಯನುಂ
ಸಲ್ಲಲಿತದಿಂ ರಚಿಸಿ ಪೀಠದೊಳ್ ಕುಳ್ಳಿರ್ದು
ಮುಲ್ಲೋಕದೇವನಂ ನೆನೆದು ಕರಗಳ ಮುಗಿದು ಜಾನಿಪುದು ಮನದೊಳೊಲಿದು ।
ಪಲ್ಲವಾರುಣರತುನಮಯದಯೋಧ್ಯಾನಗರ
ದಲ್ಲಿ ಹರಿಚಂದನವನದರೆಡೆಯ ಪಟ್ಟವಣೆ
ಯಲ್ಲಷ್ಟದಳಕಮಲಮಧ್ಯದಧ್ಯಾಸೀನಮೂರ್ತಿಯಂ ಭಾವಿಸುವುದು ॥೧೭॥

ತಮಸಃಪರ ಪರೋರಜ ಚಿದಂಬರಚಾರು
ವಿಮಲಮರಕತಮಣಿಶ್ಯಾಮರಾಮನ ಕೆಲದ
ಲಮಿತಸೃಷ್ಟ್ಯಂತಕಾರಣರೂಪಮಾಂತೆಸೆವ ಸೀತೆಯನ್ನೆಡವಂಕದಿ |
ಸಮದರಿಪುಹರಸುಮಿತ್ರಾತನಯನಂ ಭರತ
ವಿಮತಜೈ? ಶತ್ರುಘ್ನಮರುತಾತ್ಮಜಾದಿಗಳ
ಕ್ರಮದಿಂದಲೆಡಬಲದಿ ಧ್ಯಾನಿಪುದು ಗುರುನಿರೂಪಿಸಿದಂತೆ ಮಾನಸದೊಳು ||೧೮||

ಅನಿಮಿಷಾಗಮನ ರಕ್ಕಸರ ಪ್ರಕಾರಕೆಂ
ದನುನಯದಿ ಘಂಟಾನುನಾದಂಗಳೊಡನೆಸಗಿ
ಚಿನುಮಯ ಸಮಸ್ತಪೂಜಾದ್ರವ್ಯಪ್ರಾಣಾದಿಮಯ ರಾಮಚಂದ್ರಗೆರಗಿ |
ಮನಮೊಲಿದು ದ್ವಾರದೇವತೆಗಳಂ ಪೂಜೆಗೈ
ದನುನಯದಿ ಗಣನಾಥರವಿಶಿವಪರಾಶಕ್ತಿ
ಯನುವಿಂದ ಭೈರವಂ ಸಂಪೂಜೆಗೈದಪುದು ಗಂಧಮಾಲ್ಯಾದಿಗಳಲಿ ||೧೯||

ದ್ವಾರರಮೆಗಂ ನಮಿಸಿ ದೇಹಳಿಗೆ ನುತಿಗೈದು
ಚಾರುತರದೆಡಬಲದ ತಾಣಂಗಳಿಂಗೆರಗಿ
ಪೂರುವದ್ವಾರದೊಳು ಧಾತನ ವಿಧಾತನಂ ಗಂಗೆಯಮುನೆಯರ ನೆನೆದು |
ಚಾರುತರಭದ್ರೆಯು ಸುಭದ್ರೆ ಗೋದಾವರಿಯು
ದಾರಕೃಷ್ಣೆಯ ದಕ್ಷಿಣದೊಳು ಚಂಡಾದಿನದಿ
ವೀರಪ್ರಚಂಡರಂ ಪಶ್ಚಿಮದ್ವಾರದೊಳು ಪೂಜಿಪುದು ಭಕ್ತಿಯಿಂದೆ ||೨೦||

ಪ್ರಬಲಬಲವಾಣಿವೇಣಿಗಳನುತ್ತರದಲ್ಲಿ
ಶುಭಕರದ ಶಂಖಪದ್ಮಾದಿನಿಧಿಗಳ ನೆರೆದ
ಸೊಬಗಿಂದಲಾ ಚತುರ್ದ್ವಾರದೆಡೆಯೊಳ್ ಪೂಜೆಗೈದು ಗುಹಗಣನಾಥರ |
ವಿಭವದಿಂದರ್ಚಿಸುತ ಗಂಧಮಾಲ್ಯಾದಿಗಳ
ಶುಭತರಾಕ್ಷತವಸನಭೂಷಣಾದಿಗಳನುಂ
ವಿಬುಧಸೇವಿತ ತುಲಸಿಮುಂತಾದವಸ್ತುಗಳ ಮುಂತಿಟ್ಟು ಭಕ್ತಿಯಿಂದ ||೨೧||

ನೆನೆದು ನಿಜಗುರುಪರಂಪರೆಯ ತನ್ಮಂತ್ರಂಗ
ಳನು ಸ್ಮರಿಸಿ ಪರಿವಾರಸಹಿತ ರಘುವಲ್ಲಭನ
ವಿನಯದಿಂ ಭಾವಿಸುತ ಗುರುಮಂತ್ರದೇವತೆಗಳೈಕ್ಯದಿಂದೊಂದೆಣಿಸುತ |
ವಿನಯದಿಂ ಪೂಜೆಯಂ ಮಾಳ್ಪೆನೆಂದೆನುತ ಮುಂ
ಮೊನೆಯ ಷಟ್ಕೋಣಚತುರಸ್ರಮಂಡಲಗೈದು
ತನಗೆ ಮುಂಗಡೆಯ ಕಲಶವನಿಟ್ಟು ಪೂಜಿಪುದು ಗಂಧಪ್ರಸೂನದಿಂದ ||೨೨||

ಆರಕೆ ನಿಶಂಗಳಲಿ ಜೀಮೂತಸಂಧಿಗಳೊ
ಳೋರಂತೆ ಸಕಲನದಿಗಳ್ ಸಮುದ್ರಂಗಳುಂ
ತೋರುವುವು ಕುಕ್ಷಿಯೊಳು ತೋಯಾತ್ಮನೆನಿಪವಂಗೆರಗುವೆನೆನುತ್ತ ನಮಿಸಿ |
ಚಾರುತರಶಂಖಮುಂ ಧೇನುಶಂಖಂ ಸಹ
ಸ್ರಾರಮುದ್ರೆಯೊಳುದಕಮುಂ ತುಂಬಿ ಮಂತ್ರದಿಂ
ದಾರೈವುದುಪಕರಣಮಾತ್ಮದೇವತೆಗಳಂ ಪ್ರೋಕ್ಷಣಂಗೈವುದೊಲಿದು ||೨೩||

ಕಲಶದಿಂ ಮುಂದಿಡುವುದರ್ಘ್ಯಪಾದ್ಯಾಚಮನ
ದಲಘುವೆತ್ತಾ ಚತುಷ್ಟಯವನದರೊಳು ದೂರ್ವೆ
ತಿಲಸರ್ಷಪಂ ಗಂಧಮಗುಳಕ್ಷತಾದಿಗಳನಿಟ್ಟು ಜಲವಮಂ ಪೂಜಿಸಿ ।
ಸುಲಲಿತಶುಭದ್ರವ್ಯಸಂಪಾದನಂಗೈದು
ಕಲಿತಭಕ್ತಿಯೊಳು ಗುರುಗಣಪಕ್ಷೇತ್ರಾಧಿಪರಿ
ಗೊಲಿದರ್ಚನಂಗೈದು ದೇವರಂ ಪೂಜಿಪುದು ತಿಳಿದು ತತ್ಕ್ರಮುವ ಬಿಡದೆ ॥೨೪॥

ಆಧಾರಶಕ್ತಿಯುಂ ಕೂರ್ಮನಂ ಶೇಷನಂ
ಸಾದರದಿ ಕ್ಷೀರೋದಧಿಯ ಶ್ವೇತದ್ವೀಪಮಂ
ಮೋದಕರಕಲ್ಪತರು ತನ್ಮೂಲಮಣಿಖಚಿತಮೆನಿಪ ಬದ್ಧಾಸನವನು ।
ಮೇದುರದ ಧರ್ಮವನಧರ್ಮವೈರಾಗ್ಯಮದ
ವಾದಿವಿಜ್ಞಾನಮಜ್ಞಾನಭೂತಿಯಭೂತಿ
ಭೇದಾಷ್ಟದಳವೆರದ ಕಮಲಮಂ ಜಾನಿಪುದು ಗದ್ದುಗೆಯ ಮಧ್ಯದಲ್ಲಿ ॥೨೫॥

ಆನಂದಕಂದಯುತದಷ್ಟದಳಪದ್ಮಂ ಪ್ರ
ಧಾನತತ್ವದ ಪತ್ರವಿಕೃತಿಕೇಸರವರ್ಣ
ಸಾನುರಾಗದ ಬೀಜಮಾಂತೆಸವುದರ್ಚಿಪುದು ಸೂರ್ಯೇಂದುವಹ್ನಿಗಳನು ।
ನೀನರಿತಕಾರಾದಿವರ್ಣತ್ರಯದೊಳೆಸೆವ
ಜ್ಞಾನಬೀಜವ ಗುಣತ್ರಯದಿಂದ ಪೂಜಿಸುತ
ಜ್ಞಾನಾತ್ಮಪರಮಾತ್ಮನಂತರಾತ್ಮಕರುಗಳನರ್ಚಿಪುದು ಭಕ್ತಿಯಿಂದೆ ॥೨೬॥

ಮೆರೆವಪಾಠಂ ಚಿತ್ರವಿದ್ಯಾಸುನಿರ್ಮಲಂ
ವರನಿರಂಜನನಿಷ್ಕಳಂಕತತ್ವಂಗಳಂ
ಸ್ಮರಿಸಿ ವಿಮಲೋತ್ಕರುಷಣೀಜ್ಞಾನಯೋಗಕ್ರಿಯಾಸತ್ಯಮೆಂದೆನಿಸುವ ।
ಭರದೊಳೀಶಾನನುಗ್ರಹಶಕ್ತಿಗಳ ನೆನೆದು
ತ್ವರಿತದಿಂ ಸರ್ವಭೂತಾತ್ಮಭಗವದ್ವಿಷ್ಣು
ಹರಿಯೋಗಪೀಠಾತ್ಮನೆನುತ ಪುಷ್ಪಾಂಜಳಿಯನೀವುದಾನಂದದಿಂದ ॥೨೭॥

ಜೀವರೂಪಿನೊಳೆಸವ ಚಿನ್ಮಯನ ನೆನೆದು ನಿಜ
ಭಾವನಾಮಯಪಾದುಕೆಗಳನ್ನು ಮುಂದಿಟ್ಟು
ಆವಾಹನಂಸ್ಥಾಪನಾದಿಮುದ್ರೆಗಳಿಂದ ಸಮ್ಮುಖೀಕರಣಗೈವುತ ।
ಠೀವಿಯಿಂ ಪುಷ್ಪಸುಫಲೋದಕಗಳಿಂದ ಶ್ರೀ
ದೇವೀಶಗಭಿಷೇಕಮಂ ಗೈದು ಸದ್ವಸ್ತ್ರದಿಂ
ದೇವನನಲಂಕರಿಸಿ ಭೂಷಣಾದಿಗಳಿಟ್ಟು ಮಾಲ್ಯದಿಂ ಸಿಂಗರಿಪುದು ॥೨೮॥

ಎಡವಂಕದೊಳ್ ಧರಣಿಜಾತೆಯುಂ ಬಲವಂಕ
ದೊಡನೆ ಲಕ್ಷ್ಮಣನ ವಾಮದಿ ಶಾರ್ಙ್ಗಮಂ ಬಲದೊ
ಳೆಡೆವಿಡದೆ ಶರಗಳಂ ನೆನೆದನುಜ್ಞೆಯ ಕೊಂಡು ಸ್ಮರಿಪುದಾವರಣಗಳನು ।
ಬಿಡದೆ ಪ್ರಾಗಾದಿಷಟ್ಕೋಣಂಗಳಲಿ ಭಕ್ತಿ
ವಿಡಿದು ಹೃದಯಾದ್ಯಂಗಗಳನು ಪೂಜಿಸಿ ಶಂಖ
ವಿಡಿದದರೊಳಂ ಗಂಧಪುಷ್ಪೋದಕಗಳಿಟ್ಟು ಮಗುಳರ್ಘ್ಯಮನ್ನೀವುದು ॥೨೯॥

ಪರಮಾತ್ಮ ಜ್ಞಾನಾತ್ಮನಂತರಾತ್ಮಕರುಗಳ
ಸರಿಸದಿ ನಿವೃತ್ತಿ ವಿದ್ಯಾಪ್ರತಿಷ್ಠಾಶಾಂತಿ
ಯರ ಮನದಿ ನೆನೆನೆನೆದು ವಾಸುದೇವಂ ಶ್ರೀಯ ಸಂಕರುಷಣಂ ಶಾಂತಿಯಂ |
ನಿರತಿಶಯಪ್ರದ್ಯುಮ್ನಪ್ರೀತಿಮನುತೆಯು ಮಮಲೆ
ಯರುಮನನಿರುದ್ಧಮುಖ್ಯರಪೂಜೆಯಂ ಸತತ
ವಿರಚಿಸಿ ಮರುತ್ಸುತಂ ರವಿಜಲಕ್ಷ್ಮಣಭರತಶತ್ರುಘ್ನರಂ ನೆನೆವುದು ||೩೦||

ಹರಿತನಯತನಯನಂ ಪೌಲಸ್ತ್ಯಜಾಂಬವರ
ಚರಣಕಾನತನಾಗಿ ದೃಷ್ಟರ ಜಯಂತಸಂ
ಗರವಿಜಯರಾಷ್ಟ್ರಸಂರಾಷ್ಟ್ರವರ್ಧನಜಗದ್ಭರಿತಕೀರ್ತಿಕನಕೋಪಂ?
ವರತಪೋನಿಧಿ ವಸಿಷ್ಠಂ ವಾಮದೇವಮುನಿ
ವರಗೌತಮಂ ಭರದ್ವಾಜಕೌಶಿಕನಾರ
ದರ ಸನಕನಂ ಸನಂದನಸನಾತನರುಗಳ ಬಿಡದರ್ಚನಂಗೈವುದು ||೩೧||

ನಳನೀಲಗಂಧಮಾದನಗವಾಕ್ಷಂ ಗವಯ
ಕಲಿತಶರಭಮೈಂದಾದಿಗಳ ಪೂಜೆಗೈದು ಮಣಿ
ಕಲಿತಕುಂಡಲಕಿರೀಟಂ ಕೌಸ್ತುಭಂ ಹಾರಶ್ರೀವತ್ಸಗಳ ನೆನೆವುದು |
ಚೆಲುವಶಂಖಂ ಚಕ್ರಗದೆಪದ್ಮಮುಸಲಾದಿ
ಗಳ ನೆನೆದು ಧ್ರುವಧರ್ಮಸಾಮಶ್ಶೈಲಾನಿಲೋ
ನಲರಭಾಸಪ್ರಭಾಸಗಳನರ್ಚನೆಗೈವುದನುರಾಗದಿಂದ ಬಿಡದೆ ||೩೨||

ವೀರಭದ್ರಂ ಶಂಭುಗಿರಿಶೈಕಪಾದಕನು
ದಾರಧ್ರುವನಜನಹಿರ್ಬುಧ್ನ್ಯಂ ಪಿನಾಕಿ ಮಗು
ಳೋರಂತೆ ಭುವನೇಶಸ್ಥಾಣುಕಪಾಲಿಗಳ ಮಗುಳರ್ಚನಂ ಗೈವುದು |
ಸೂರಿಯಾರುಣನ ವೇದಾಂಗ ರವಿ ಭಾನುವನು
ದಾರಂ ಗಭಸ್ತಿ ಮಿತ್ರಾದಿತ್ಯರಂ ನೆನೆದು
ಪೂರುವಾಧಿಪಮುಖ್ಯದಿಕ್ಪಾಲರಂ ಬಿಡದೆ ಪೂಜಿಪುದು ಭಕ್ತಿವಿಡಿದು ||೩೩||

ಇಂತನುದಿನಂ ದಶಾವರಣಪೂಜೆಯನು ತ-
ನ್ನಂತರಂಗದಿ ಮಾಡುತಾನಂದಮಯನೆನಿಪ
ಗಂತರಾಯಗಳಿಲ್ಲದಿಹಪರಂಗಳು ಸುಲಭದಿಂದ ಕೈಸಾರುತಿಹವು |
ಚಿಂತಿಸಲಶಕ್ತನಾದೊಡೆ ಮೂರ್ತಿಯಂ ತನ್ನ
ಮುಂತಿಟ್ಟು ಬಾಹ್ಯಪೂಜಾದಿಗಳ ರಚಿಸಿ ಮ
ತ್ತೆಂತಾದೊಡೆಯು ಭಕ್ತಿಗೈಯೆ ಪರತರಮುಕ್ತಿ ಕೈಸಾರುತಿಹುದು ಗಿರಿಜೆ ||೩೪||

ತಾನೊರ್ವನೇಕಾಂತದೊಳು ಕುಳಿತು ರಘುವರನ
ಜ್ಞಾನಾದಿಪದಿನಾರುಪೂಜೆಗಳನೆಸಗಿ ಚಿ
ತ್ತಾನುರಾಗದೊಳು ಮನುಚಿಂತನಂಗೈದಪುದು ಸಾಧ್ಯಮೆಂದೆನಿಸದಿರಲು |
ಏನಾದರೊಂದು ಮೂರ್ತಿಯನಿಟ್ಟು ಪೂಜಿಸುತ
ಲಾನಂದಗೈಯಲಿಹಪರದೊಳಗಮನವರತ
ನೂನಸೌಖ್ಯೋನ್ನತಿಯು ಕೈಸಾರ್ವುದಿದು ಸಿದ್ಧ ಕೇಳು ಶೈಲೇಂದ್ರಜಾತೆ ||೩೫||

ಪಾವನಿತಪೂಜಾವಿಧಾನಮಂ ಭಕ್ತಿಯಿಂ
ಭಾವಿಸುತಲುದಯಕಾಲದಲಿ ಪಠಿಸುವ ನವನಿ
ಗೀವ ಮತ್ಪೂಜಾಫಲಂಗಳಂ ಸಾಧಿಸುತಲನುದಿನಂ ಸೌಖ್ಯವೆತ್ತು ।
ದೇವಶ್ರೀರಾಮಪುರದರಸ ಪೊರೆದಪನು ಬಿಡ
ದಾವನಿದನೋದಿ ಕೇಳಲ್ ಭುಕ್ತಿಮುಕ್ತಿಗಳ
ನೀವ ಸುಲಭದಲಹವು ನಿಗಮಾರ್ಥಮಿದ ತಿಳಿದು ನೀ ಸುಖಿಸು ಶೈಲಜಾತೆ ॥೩೬॥

ಅಂತು ಸಂಧಿ ೩ಕ್ಕಂ ಪದನು ೧೧೭ಕ್ಕಂ

ಮಂಗಳಮಹಾ ಶ್ರೀ ಶ್ರೀ ಶ್ರೀ.

— ನಾಲ್ಕನೆಯ ಸಂಧಿ —

ಸೂಚನೆ || ಮುನಿಗಳನುಮತಿಯಿಂದ ಸೌಮಿತ್ರಿಸೀತೆಯರ
ವನಗೊಂಡು ಶ್ರೀರಾಮನೈದಿ ಕಲಶಜನಿರ್ಪ
ಬನವ ಸಾರಿದ ತಪಃಪರಿಪಾಕಫಲವನುಂ ದಯದಿಂದಲೀವರೊಲಿದು ||

ಪದನು|| ಸೀತೆ ಸಹಿತಂ ಸುತೀಕ್ಷ್ಣನಾಶ್ರಮದಿ ರಾಮು
ಜಾತಾನುಕಂಪದಿಂದಿರುತಿರ್ದನನಿಮಿಷ
ವ್ರಾತಮಾನಂದಗೊಳುವಂತದೇಂ ವಣ್ಣಿಸುವೆ ಮೌನಿಯ ತಪೋಮಹಿಮೆಯ |
ಶೀತಾಂಶುಕರಕಿರಣನೇತ್ರನ ಸಮಾಧಿಸಂ
ಜಾತಕಂ ಕಾಣ್ಬುದತಿಶಯಮೆನಲ್ ಮುಂಗಡೆಯ
ಲಾ ತತ್ವನಿಧಿ ಸುಳಿವುತಿರಲು ಸೌಭಾಗ್ಯಮಿನ್ನಿಂತೊ ತುಹಿನಾದ್ರಿಜಾತೆ || ೧ ||

ವಾರಾಸಿಶಯನ ವಸುಮತಿಯೊಳಂ ಪುರುಷತನು
ಶಾರೀರಸಂಬಂಧವೆರೆದು ಸತಿಲಕ್ಷ್ಮಣರ
ನೋರಂತೆ ಕಲೆತೊಡನೆ ಪೊರೆಗೊಳಿಸಿ ಮುನಿವನಕ್ಕೈತಂದು ಮುನಿಯ ಚರಣ |
ಸಾರಸಂಗಳಿಗೆರಗಿ ಸತತಮಾಶ್ರಮದೊಳಗು
ದಾರತೇಜೋರಾಶಿ ವಾಸಮೆಂದೆನಿಸಿರ್ದ
ನಾ ರುಷಿಯ ತಪದ ಪ್ರಭಾವಮೆಂತುಟೊ ಭಕುತಿಯೆಂತೋ ಕರಂ ಚಿತ್ರತರವು ||೨||

ತಾನಾರ್ಜಿಸಿದ ತಪಃಪರಿಪಾಕಪುಣ್ಯಮಂ
ಮಾನವಾಧಿಪ ನಿನಗೆ ಕೊಟ್ಟಪೆರ್ ನಿರ್ಭಯದೊ
ಳಾನಂದದಿಂದ ಸುಖಮಿಹುದೆಂದು ಮುನಿನಾಥ ನೇಮಿಸಲ್ಕಂದಿನಿಂದೆ |
ಸಾನುರಾಗದೊಳರಸಿವೆರಸಿ ಸಂತಸದಿಂದ
ಮಾನುಷ್ಯಲೀಲೆಯಿಂದಿರುತೊಂದು ದಿನ ಬಂದು
ಜ್ಞಾನನಿಧಿಯೆನಿಪಗಸ್ತ್ಯನ ಶಿಷ್ಯನೊಡನೆಂದ ರಘುನಾಥನೊಲವಿನಿಂದ || ೩ ||

ಶರಭಂಗಮುನಿಪುಂಗವಂ ಪೇಳ್ದ ಭವದೀಯ
ಚರಿತೆಯಂ ಕೇಳ್ದು ಬಂದುದರಿಂದವಿನಿಸು ದಿನ
ಪರಿಯಂತಲಾಕ್ರಮದಿ ಸುಖದಿಂದಲಿರ್ದೆವಾವೇನೊಂದನೆಣಿಸದನಘ |
ಚರಣಸೇವನೆ ಲಭ್ಯಮಾಯ್ತು ಪಾಪಂ ಪೋಯ್ತು
ಕರುಣದಿಂದಪ್ಪಣೆಯನೀಯಲಲ್ಲಲ್ಲಿ ಮುನಿ
ವರರಾಶ್ರಮಂಗಳಂ ನೋಡಿ ತದ್ಬಾಧಾಪ್ರಹರಗೆಯ್ಯುವೆಳ್ಕುಮೆನುತ || ೪ ||

ಪರಪರಿಯಋಷಿಗಳುಂ ತ್ವರಿತಗೈದಪರೆನುತ
ಲೊರೆಯೆ ರಘುನಾಥಂ ಸುತೀಕ್ಷ್ಣಸಂತಸದಿ ಬಂ
ಧುರಮಾದ ನಯನುಡಿಗಳಿಂದಲಿಂತೆಂದನೆಲೆ ದೇವ ಸತ್ಕರುಣದಿಂದ |
ಧರೆಯ ಪಾಲಿಸಲೆಂದು ಬಂದಿರ್ಪೆಯೆಂಬುದಾ
ನರಿತಿರ್ಪೆ ದೇವ ನೀಂ ಕೃಪೆಯಿಂದ ಬಂದೆನ್ನ
ಪೊರೆದುದಂ ಬಲ್ಲೆನಾಂ ಯೋಗಸಿದ್ಧಿಯ ಫಲವೆ ಯಾದಿವ್ಯಮೂರ್ತಿಯೆನುತ || ೫ ||

ಮುಂದಕೈದಲ್ಕೊಡನೆ ಬಂದಪೆನು ಗುರುಪದ
ದ್ವಂದ್ವಗಳ ನಿಟ್ಟಪಭಿಲಾಷೆಯಿದೆ ಭೀತಿಗಳ
ಬಂಧಕಗಳಿನಿತಿಲ್ಲ ವೀ ಬನದಿ ಮೃಗಗತತಿಗಳೈತಂದು ನಾಲ್ದೆಸೆಯೊಳಂ ।
ದಂದುಗವ ಮನಕೆ ಪುಟ್ಟಿಪುದೊಂದೆ ಯೆನುತ ಋಷಿ
ಯೆಂದರಾ ರಘುವೀರ ಶರದಿಂದಲೆಚ್ಚವಂ
ಕೊಂದಪೆನೆನುತ್ತ ಪೇಳಲ್ ಮುನಿಪ ಸಂತಸದೆ ಪೊಗಳಿದಂ ಭುಲ್ಲವಿಸುತ ॥ ೬ ॥

ವನಜಾಪ್ತನನಿತರೊಳ್ ಪರಿಯೆ ಸಂಧ್ಯಾಸಮಯ
ವೆನುತೈದಿ ವೈದಿಕವಿಧಾನದಿಂ ಕ್ರತುಭುಜನ
ಸನುಮತಂಗೊಳಿಸಲನ್ನೆಗ ಮೌನಿ ಪ್ರೀತಿಯಿಂದಾತಿಥ್ಯಮನ್ನೆಸಗಲು ।
ವನಜಾಕ್ಷ ದಯದಿಂದೆ ಕೈಕೊಂಡು ಪೂರ್ವದೊಳ್
ಮಿನುಗೆ ರವಿಬಿಂಬ ಸ್ನಾನಾಹ್ನಿಕಂಗಳನೆಸಗಿ
ಬಿನದದಿಂದಿರೆ ಸೀತೆ ಶರಚಾಪಗಳನೀಯಲಿರ್ವರುಂ ಧರಿಸಿ ಮುದದಿ ॥ ೭ ॥

ಶರಚಾಪಗಳ ಪಿಡಿದು ವರಋಷಿಗಳೊಡವೆರೆದು
ಧರಣಿಜಾಸುತೆಲಕ್ಷ್ಮಣರ ಕರೆದುಮೆಲೆವನೆಯು
ಪೊರಡಲ್ ಸುತೀಕ್ಷ್ಣಮುನಿ ಪರಸಿ ಮಂತ್ರಾಕ್ಷತೆಯನಿತ್ತು ಪಿಂದೆಡೆಯ ಬರಲು ।
ನರನಾಥಮಕುಟಮಣಿ ಧರಣಿಯಂ ಪಾಲಿಪೊಡೆ
ಕರುಣದಿಂದೈತರುತಲಿರೆ ಜನಕಜಾತೆ ಶುಭ-
ಕರದ ಮೃದುನುಡಿಗಳಿಂ ಬೆಸಗೊಂಡಳಾರ್ಯ ದಯದಿಂದ ಪಾಲಿಸುವುದೆನುತ ॥೮॥

ಮೂರುದುಃಖಗಳು ಪರಿಹರಿಸಲಳವಲ್ಲ ಪರ
ದಾರಾಭಿಗಮನ ಮಿಥ್ಯಾವಾಕ್ಯ ನಿರ್ವೈರ
ಮಾರಣಗಳೆನಿಪ ಕಾಮಜಗಳೊಂದೊಂದರಿಂದಧಿಕತರಮಾಗಿರ್ಪುವು ।
ತೋರದೆಂದಿಗು ಪುಸಿಯ ಸೊಲ್ಲೆಂಬುದಿಲ್ಲ ಪರ
ನಾರಿಯರ ದರ್ಶನಂ ಸ್ವಪ್ನದಲಿ ಸುಳಿಯದೀ
ಧಾರುಣಿಯೊಳೆಲ್ಲರುಂ ಬಲ್ಲರಿವು ಸಹಜಾತ ನಿಮಗೆನುತ ತಥ್ಯಮಾಗಿ ॥ ೯ ॥

ಸತ್ಯಶೌಚಾಚಾರಪಿತೃವಚನಪಾಲನೆಯು
ನಿತ್ಯಗೋದ್ವಿಜಭಕ್ತಿ ಧರ್ಮಶಾಸ್ತ್ರಗಳ ಪಾಂ
ಡಿತ್ಯಮೆನಿಸುವ ಗುಣಗಳೊಂದು ನಿಮಿಷಂಬಿಡದೆ ದೇವರೊಳಗೊಪ್ಪಿರುವುದು ।
ಅತ್ಯಧಿಕಧರ್ಮಿಷ್ಠರೆನಿಸುವರಿದೀಗಳನಿ
ಮಿತ್ಯದಿಂದಖಿಳಪ್ರಾಣಿಗಳ ಮರ್ದಿಸುವನೌ
ಚಿತ್ಯಮತ ಸಮನಿಸಿದುದಚ್ಚರಿ ಯಿದಾರ್ಯ ನಿಜಧರ್ಮಕೂಣೆಯ ಜನಿಪುದು ॥೧೦॥

ಮುನಿವಚನದಿಂ ಪುಣ್ಯಜನರ ವಧಿಸುವೆನೆಂದು
ಬನಕೆ ಪೋದಪುದುಚಿತಮಾಗಿರದು ಕ್ಷತ್ರಿಯರ
ಘನತೆ ಪ್ರತಿಬಂಧಿಗಳ ತರಿದಾರ್ತರಂ ಪೊರೆವುದಲ್ಲದನಿಮಿತ್ತಮಾಗಿ ।
ಕಿನಿಸಿಂದ ಪ್ರಾಣಿಗಳ ಕೊಲುವುದನುಚಿತ ಕರದಿ
ಧನುವಿರಲ್ಕಗ್ನಿಯೆಡೆಗಿರಲಿಂಧನಂ ಕಾರ್ಯ
ವನು ಗೆಯ್ಯದಿರವು ಮತ್ತದರಿಂದ ದಂಡಕಾಗಮನಮನುಚಿತಮಾಗಿದೆ ॥೧೧॥

ಮೊದಲೊರ್ವ ಮುನಿಪ ನಿಷ್ಕಾಮತಪದಿಂದಲಿರೆ
ಬೆದರಿ ಪಾಕಾರಿ ಭಟರೂಪಿಂದಲೈತಂದು
ಮುದದಿಂದ ಸೇವಕನ ರೀತಿಯಂ ತೋರುತ್ತ ಕೆಲವುದಿನಮುಪಚರಿಸುತ |
ಸದನದೊಳಗಿರ್ದು ನಿಸ್ತ್ರಿಂಶಮಂ ಯತಿವರನ
ಬದಿಯುಲಿಟ್ಟೈದಲದ ಜತನಗೈವೊಡೆ ಸಾಧು
ಹೃದಯಕರದೊಳ್‌ಪಿಡಿದು ಕೆಲವುದಿನಮಿರುತಿರ್ದನೆಡೆವಿಡದೆ ತರವಾರಿಯಂ ||೧೨||

ಕರಕಲಿತಖಡ್ಗದಿಂದಖಿಳಕರ್ಮಂಗಳಂ
ವಿರಚಿಸುತಲಾ ವಿಪ್ರನಿರಲೊಂದುದಿನಮೊರ್ವ
ನರನೊತ್ತಿಗೈತರಲ್ ತರಿದಿಟ್ಟನಾ ಮಂಡಲಾಗ್ರದಿಂದಾ ಕ್ಷಣದೊಳು |
ನರಕಭಾಜನನಾದ ಸಹವಾಸದೋಷದಿಂ
ಬರದುಳಿಯದುಪನರ್ಥಮದರಿಂದೆ ದಂಡಕಾ
ಚರಣೆ ರಕ್ಕಸರ ವಧೆಗೆಳಸುವುದು ನಿಷ್ಫಲಿತವಾಗಿ ತೋರುವುದು ಮನಕೆ ||೧೩||

ರಾಜಧರ್ಮವನುಳಿದು ರಮಣೀಯಶರತಪದಿ
ರಾಜಿಸುವ ಶಾಂತರಿಗಕಾರಣದಿ ಜೀವಿಗಳ
ರಾಜಿಯಂ ತರಿವುದಿದು ದೋಷಕರ ಪ್ರಾಣಿಗಳ ಹಿತಮೆನಿಪ ಸದ್ವೃತ್ತಿಯಂ |
ಈ ಜಗತಿ ಮೆಚ್ಚುವೊಲು ನಿರ್ಮಲದ ಸತ್ಕೀರ್ತಿ
ಭಾಜನತೆಯಿಂದಿಹುದೆ ಧರ್ಮ ತಾಪಸಜನಸ
ಮಾಜಮಿದು ಸರ್ವಜ್ಞಮೂರ್ತಿ ನಿಮ್ಮಯ ಚಿತ್ತವರಿಯದುದ ನಾಂ ಬಲ್ಲೆನೆ ||೧೪||

ಪೇಳುವರಹಿಂಸೆ ಪರತರಧರ್ಮ ವಧೆ ಪಾಪ
ದೇಳಿಗೆಯೆನುತ್ತ ಭವದೀಯ ಪದಪದ್ಮಂಗ
ಳೂಳಿಗದೊಳಿರುತಿರ್ಪ ಕತದಿಂದ ತಿಳಿದನಿತ ವಿಜ್ಞಾಪನಂಗೈವೆನು |
ಜಾಳುಬುದ್ಧಿಯುದೆನುತ ಕೋಪಿಸದೆ ಕೃಪೆಯಿಂದ
ಲಾಳಿಸೊಡೆಯನೆ ತಪ್ಪುಗಳನೊಪ್ಪಬೇಕೆಂದು
ಪೇಳಿ ಧರಣಿಜೆ ಸುಮ್ಮನಿರಲು ರಘುನಾಯಕಂ ನಸುನಗೆಯೊಳಿಂತೆಂದನು ||೧೫||

ಧರಣಿಸುತೆ ನೀನೊರೆದ ನುಡಿ ಸತ್ಯಮಾದೊಡೆಯು
ನಿರುತಾಗ್ನಿಹೋತ್ರಜಪತಪನಿತ್ಯನೇಮಗಳ
ಲಿರುವ ವಿಪ್ರರನನಾಗಸರ ಭಕ್ಷಣೆಗೈದು ಧರ್ಮಂಗಳಂ ಕೆಡಿಸುವ |
ದುರಳರಕ್ಕಸರ ಬಾಧೆಗೆ ಸಿಲ್ಕಿ ಸಂಕಟದ
ಲಿರಲಮ್ಮದೆಮ್ಮ ಪುರೆಹೊಕ್ಕರಂತಃಕರಣ
ಕರಗಿ ನಿರ್ಭಯಭಾಷೆಯಿತ್ತೆನಾ ವಿಪ್ರಕುಲಕೆಲ್ಲ ಸಮ್ಮೋದದಿಂದ ||೧೬||

ಶರಧಿ ಮೇಲ್ವರಿದರುಂ ತರಣಿಶಶಿಗಳು ಗತಿಯ
ನರಿಯದಲೆ ನಡೆದರುಂ ಹರನಿತ್ತ ವರಕೂನ
ವೆರೆದರುಂ ಸುರಶೈಲ ತಾಣಮುಂ ತಪ್ಪಿದೊಡೆ ರಾಮ ನುಡಿಯೇಂ ತಪ್ಪದೆ |
ನರಭಕ್ಷಕರನಾತತಾಯಿಗಳ ನಿಟ್ಟಿಸಲು
ತರಿವುದೆನ್ನುತಮಭ್ಯನುಜ್ಞೆ ಧರ್ಮದಿ ಶರವ
ಧರಿಸಿಹೆವು ದೊರೆಗಳ್ಗೆ ದುಷ್ಟಹರ ಶಿಷ್ಟಜನಪಾಲನಂ ನೀತಿಯಲ್ತೆ ||೧೭||

ಬಿಡುವೆ ಲಕ್ಷ್ಮಣನ ಮತ್ತೊಮ್ಮೆ ಜಾನಕಿ ನಿನ್ನ
ಬಿಡುವರೆಳಸುವೆನಲ್ಲದಾನೆರಡ ನುಡಿದಪೆನೆ
ಪೊಡವಿಯಲ್ಲನೃತದಿಂದಧಿಕಪಾತಕಮುಂಟೆ ಸತ್ಯಕಂ ಸಾಟಿಯುಂಟೆ |
ತುಡುಕಿ ಶರಚಾಪಮುಂ ಜಡಿದಸುರಕೋಪಮಂ
ಕಡಿದಸುರರೂಪಮಂ ಕೊಡಹಿ ಹೃತ್ತಾಪಮಂ
ಕೊಡುವೆನಾನಂದಮಂ ಪೊರೆದು ಮುನಿವೃಂದಮಂ ಕಡೆಯದಿದು ಸಿದ್ಧಮಬಲೆ ||೧೮||

ಎಂದು ರಘುನಂದನಂ ಪೇಳ್ದ ವಾಣಿಯ ವಿಪ್ರ
ವೃಂದಮಾಲಿಸಿ ಹರುಷದಿಂದ ಜಯಜಯಜಯತು
ಎಂದೈದುತಿರೆ ಪಿಡಿದು ಶರಚಾಪಗಳನರಸಿ ಮುದದಿ ಮುಂಗಡೆಯಲ್ಯೆದೆ |
ಬಂಧುರಸ್ನೇಹದಿಂದಖಿಳಮುನಿಗಳ ನಿಲಯ
ವೊಂದೊಂದನಿಟ್ಟಸುತಲಲ್ಲಲ್ಲಿ ಕೆಲಕಾಲ
ಮೊಂದೆರಡು ನಾಲ್ಕಾರು ಪತ್ತೆಂಟು ತಿಂಗಳೊಲಿದಿರ್ದರಾಶ್ರಮಗಳೆಡೆಯ ||೧೯||

ಬನದಿ ಸಂಚರಗೈದು ಮುನಿಗಳಂ ಬಾಧಿಸುವ
ರನು ತರಿದು ಸೌಖ್ಯದಿಂದಿರುವಂತೆ ದಯೆಗೈದು
ವಿನಯಧಿಂದಲ್ಲಲ್ಲಿ ತಿರಿಗಿ ನೋಡುತಲಿರಲ್ಕೀಪರಿಯ ಪತ್ತು ವರುಷಂ |
ದಿನಗಳೆದುದಾನಂದಗೊಳುತಿರಲ್ ಮುನಿವೃಂದ
ಪುನರಪಿ ಸುತೀಕ್ಷ್ಣನಾಶ್ರಮಕೈದಿ ಸಂತಸದಿ
ಜನಕಜಾತೆಸಮೇತ ಕೆಲಕಾಲಮಲ್ಲಿರ್ದು ಮಗುಳೊಂದು ದಿನ ವಿನಯದಿ ||೨೦||

ಯಮಿತಿಲಕನಡಿಗೆರಗಿ ಕ್ರಮದಿಂದ ಸುಖಮಿರ್ದೆ
ಗಮಕದಿಂ ಪಲಕಾಲ ಪುರದೊಳಾಳೋಚಿಗರ
ಯಮಿಶಿಖಾಮಣಿಯ ಮೈತ್ರಾವರುಣಿಯಂ ಕಾಣ್ಬರುಜ್ಜುಗದಿ ಮನಮೆಳಸಿದೆ |
ಮಮತೆಯಿಂದಪ್ಪಣೆಯನಿತ್ತರೈದುವೆನೆನುತ
ವಿಮತಮದಹರ ರಘುಜ ವಿಜ್ಞಾಪನಂಗೈದು
ನಮಿಸಲ್ ಸುತೀಕ್ಷ್ಣನಾನಂದದಿಂ ಸೆಳೆದಪ್ಪಿ ನಸುನಗುತಲಿಂತೆಂದನು ||೨೧||

ಬಲುಪುಣ್ಯಪರಿಪಾಕದಿಂದ ನೀಂ ದಯೆಗೈದು
ಒಲಿದೆಯಲ್ಲದೆ ನಿನ್ನ ಕಾಣ್ಬುದೆಂತೈ ದೇವ
ಜಲಜಪೀಠಾದಿಗಳು ತೊಳಲುತಿಹರನವರತ ಧ್ಯಾನಗೋಚರಮಿಲ್ಲದೆ |
ಸುಲಭ ಭಕ್ತರಿಗೆ ನೀನೆಂಬ ಬಿರುದುದ್ಧರಿಸಿ
ನೆಲದೊಳುಳ್ಳರ ಪೊರೆದೆ ಪ್ರಿಯದಿಂದ ಕಲಶಜನ
ನೆಲೆಗೈದವೇಳ್ದಾದರಾಂ ಬರುವೆ ದಯೆಗೈಯುವೇಳ್ಕೆಂದು ಮುನಿ ನುಡಿದನು ||೨೨||

ಮುನಿ ನುಡಿಯಲೀ ಪರಿಯಲನುಮತಿಸಿ ರಘುನಾಥ
ಜನಕಜಾತೆ ಸಮೇತಲೈದಿ ಪುಣ್ಯಾಶ್ರಮಗ
ಳನು ಕಳೆದು ಪಂಥಾನವಿಡಿದು ಮುಂದೈದುತಿರೆ ವೊಂದೆಡೆಯ ಕುತುಕಮೆನಲು|
ಜನಮನೋಹರಮೆನಲ್ ನೃತ್ಯಗೀತಾದಿ ನಿ
ಸ್ವನ ಶ್ರವಣಕಾನಂದಕರಮಾಗಿ ಕೇಳುತಿರೆ
ಜನಪನಚ್ಚರಿಗೊಂಡು ಮುನಿಧರ್ಮಭೃತನ ಬೆಸಗೊಂಡನೇಂ ಚಿತ್ರಮೆಂದು ||೨೩||

ಕೇಳು ರಘುವರ ಮಾಂಡಕರ್ಣಿಯೆನಿಸುವ ವಿಪ್ರನಾ
ಭೀಳತಪದಿಂ ತಟಾಕವನೊಂದನಿರ್ಮಿಸಿದ
ಪೇಳುವರು ಪಂಚಾಪ್ಸರೋನಾಮಮೆನುತ ಪೂರ್ವವೃತ್ತವನೊರೆವೆನು |
ಸೂಳುಗುಡದೀ ನೆಲದಿ ಪತ್ತುಸಾಸಿರವರುಷ
ತಾಳಿ ನಿಯಮದಿಂ ಮಾಂಡಕರ್ಣಿ ತಪದಿಂದಿರಲ್
ಪೇಳುವೆನದೇನ ಸುರತತಿ ನಡುಗಿ ಮರೆವೊಕ್ಕರಾ ಶಚೀಕಾಮುಕನನು ||೨೪||

ಬಿಡುಗಣ್ಣರೊಡೆಯ ತನ್ನೊಳ್ ತಾನೆ ತಿಳಿದು ಮುಂ
ಗಡೆಯಲೊಪ್ಪಿರುವಪ್ಸರಾಂಗನೆಯರೈವರ
ನ್ನೊಡಬಡಿಸಿ ಕಳಿಪೆ ಮತ್ತಲ್ಲಿ ಪದ್ಮಾಕರವ ರಚಿಸಿ ತನ್ಮಧ್ಯದೊಳಗೆ |
ಸಡಗರದ ದಿವ್ಯಭವನವನೊಂದ ನಿರ್ಮಿಸ
ಲ್ಕೊಡನಂದಿನಿಂ ಮಾಂಡಕರ್ಣಿಯುಂ ಸಂತಸದ
ಲೊಡಗೊಂಡು ಪಂಚಾಪ್ಸರಃಸ್ತ್ರೀಯರಲ್ಲಿರ್ಪರಾನಂದಸಂದೋಹದಿ ||೨೫||

ಇದುವೆ ಪಂಚಾಪ್ಸರೋನಾಮ ಪದ್ಮಾಕರಂ
ಸದಯದೇವತೆಗಳೊಡವೆರೆದನಲ್ಲಿ ಮುನಿಯಿರ್ಪ
ನದುಭುತಧ್ವನಿ ಕೇಳ್ವುದದರಿಂದ ತನ್ಮಧ್ಯದೇಶದೊಳಗಚ್ಚರಿಯೆನೆ |
ಪದುಮಾಕ್ಷ ಧರ್ಮಭೃತನೊರೆದ ವಾಣಿಯ ಕೇಳಿ
ಮುದದಿಂದ ಸಂತಸಂದಾಳಿ ಮುಂದೈದುತಿರೆ
ಸದಮಲಮಹಾಮುನಿಯಾಶ್ರಮಂ ಕಂಗೆಸೆದುದಾನಂದನಿಲಯದಂತೆ ||೨೬||

ನೋಡಿ ಪುಣ್ಯಾಶ್ರಮವ ಲಕ್ಷ್ಮಣನೊಳಿಂತೆಂದ
ಬೇಡಿದರಿಗಿಷ್ಟಮಂ ಕೊಡುವಗಸ್ತ್ಯಭ್ರಾತ
ಮೋಡಿಯಿಂದೊಪ್ಪಿರುವ ಯೋಗ ಮನುಜಾಕಾರಮಾಂತಂತೆ ಕರುಣದಿಂದ |
ರೂಢಿಯಿಂ ದೈತ್ಯವಾತಾಪಿಯಿಲ್ವಲರೊಂದು
ಗೂಡಿ ವಿಪ್ರರ ಸದೆದು ತಿನುತಿರಲ್ ಸುರಪನಿದ
ನೋಡಿ ಮೈತ್ರಾವರುಣಿಗರಿಪೆ ದಯೆಯಿಂದಾತನೊಂದುದಿನಮಿಾ ನೆಲಕ್ಕೆ ||೨೭||

ಬಂದು ನೋಡಿದ ವಿಪ್ರವೇಷದಿಂದಿಲ್ವಲಂ
ಪೊಂದಿರಲ್ ಛಾಗವೇಷವನು ವಾತಾಪಿ ಯಿಾ
ಚಂದವನು ನಿಟ್ಟಿಸುತೆ ಬೆರಗಾಗುವನಿತರೊಳ್ ಕಪಟಪಾರ್ವಂ ವಿನಯದಿ |
ಇಂದೆಮ್ಮ ಗೃಹದೊಳಾತಿಥ್ಯಮಂ ಕೊಳವೇಳ್ಕು
ಮೆಂದು ವಿಜ್ಞಾಪನಂಗೈದು ಛಾಗಾಂಗಭವ
ಮೆಂದು ಭೋಜನವಿಟ್ಟು ತಾಂಬೂಲಮಂ ಕೊಟ್ಟು ಸಂತೈಸಿದಂ ಮುನಿಪನ ||೨೮||

ದೂರದೊಳ್ ನಿಂದು ಮೊದಲಂದದಿಂ ವಾತಾಪಿ
ಬಾರೆನುತ ಕೂಗಲದನರಿತು ಋಷಿಜಠರದಾ
ಹಾರಮಂ ಗೈದಾತ ಮಗುಳೆ ಬಂದಪನೆಂತು ಮರುಳೆ ಯಮರಾಜಪುರವ |
ಸಾರಿದ ನಿಶಾಚರನೆನಲ್ಕೆ ಕೋಪಿಸುತಲತಿ
ದಾರುಣದಿ ಕೊಲುವೆನೆಂದೈತರಲ್ ಕೋಪದಂ
ಗಾರದಿಂ ದಗ್ಧನಾದಂ ಮಹಾಸುರ ನಿಮಿಷಮಾತ್ರದೊಳಗಚ್ಚರಿಯೆನೆ ||೨೯||

ಗೋವಿಪ್ರಹತಕವಾತಾಪಿಯಿಲ್ವಲರುಗಳ
ಜೀವಂಗಳಂ ತೆಗೆದು ನಿಮಿಷಮಾತ್ರದಿ ನಿಖಿಲ
ದೇವರ್ಕಳಿಷ್ಟಮಂ ಸಲಿಸಿದ ಮಹಾಮೌನಿಯಣ್ಣನೆಲೆವನೆಯೊಳಿಂದು |
ಈವಿಬುಧಸಭೆವೆರೆದು ಯಿರುಳಿರ್ದು ಬಳಿಕ ರವಿ
ದೇವನುದಯಕೆ ಪೋಗಿ ಕಲಶಸಂಭವನ ಶ್ರೀ
ಪಾವನಾಂಘ್ರಿಯ ಕಾಣ್ಬುದೆನುತೊರೆಯಲಾನಂದಗೊಂಡರಾ ಮೌನಿವರರು ||೩೦||

ನೆರೆದ ವಿದ್ವತ್ಸಮಾಜದಿ ಕೂಡಿ ರಘುವರಂ
ವರಮುನಿಪನಾಶ್ರಮವ ಪೊಕ್ಕು ವಂದನೆಗೈದು
ಪರಿಪರಿಯ ಪಕ್ವಫಲದಾತಿಥ್ಯಮಂ ಕೊಂಡು ಸುಖದಿಂದ ನಿಶೆಯ ಕಳೆದು |
ತರಣಿ ಯುದಿಸಲು ತಪೋಧನರಂಘ್ರಿಗೆರಗಿ ನಿಜ
ಕರುಣದಿಂ ಬೀಳ್ಕೊಂಡು ನಡೆದಂ ತದಗ್ರಜನ
ಪೊರೆಗಖಿಲರೊಡವೆರೆದು ಸಂಧಾನಮಂ ಬೆರೆದು ಪರಮಹರ್ಷದೊಳು ಮೆರೆದು ||೩೧||

ಎಡಬಲದೊಳಿಹ ವೃಕ್ಷಷಂಡಗಳ ಮದಕರಿಯು
ತುಡಿಕಿ ಮುರಿದಿಟ್ಟ ಶಾಖೆಗಳ ಮೃದುರವದಿಂದ
ಲೆಡಬಲದಿ ನಾದಿಸುವ ಕೋಗಿಲೆಶುಕಾಳಿಗಳ ಭೋರ್ಗರೆವ ಬಂಭರಗಳ ||
ಅಡಿಗಡಿಗೆ ಶಾರ್ದೂಲವೃಕವರಾಹಾದಿಗಳು
ತುಡುಕದಲೆ ವೈರವಂ ತಮ್ಮಿಚ್ಛೆಯೊಳಗಿರ್ಪ
ಪೊಡವಿಯಂ ನೋಡುತ್ತ ನಡೆಗೊಂಡು ಬರುತ ರಘುವೀರ ಲಕ್ಷ್ಮಣಗೆಂದನು ||೩೨||

ಶೀಲಗಜಮಂಬರವ ತುಡುಕುವಂದದಿ ಧೂಮ
ಜ್ವಾಲೆ ಕಂಗೆಸೆವುತಿದೆ ಚೀರವಸನಂಗಳುರು
ಜಾಲ ತೋರ್ಪಡಿಸುತಿದೆ ನಿಜತಪದ ಬಲದಿಂದಗಸ್ತ್ಯಾಖ್ಯಮಂ ತಾಳಿದ |
ಶೀಲನಾಶ್ರಮಮತಿಸಮೀಪವಾಗಿದೆ ಲೋಕ
ಪಾಲನಾರ್ಥಕೆನುತ್ತ ಮೃತ್ಯುವಂ ನಿಗ್ರಹಿಸಿ
ಮೂಲೋಕದಚ್ಚರಿಯ ವಿಗ್ರಹದಿ ಮುಸಿಯೆಸೆವ ದಕ್ಷಿಣಾಶೆಯೊಳು ತನಯ ||೩೩||

ತೆಂಕಲೊಳು ಮುನಿಪನಾವಾಸಗೈದಂದಿಂದ
ಸೋಂಕಲಮ್ಮರು ದನುಜರೊರ್ವ ವಿಪ್ರರ ಭಾಧೆ
ಸಂಕೋಚಮಾಯ್ತು ಪೂರ್ವದೊಳು ವಿಂಧ್ಯಾಚಲಂ ಗತಿಗೆಡಿಸೆ ರವಿಶಶಿಗಳ |
ಶಂಕರಾಜ್ಞೆಯೊಳು ಮುನಿ ಯೈತಂದು ತನ್ನ ನಿಜ
ಕಿಂಕರಗೆ ನೇಮಿಸಿದ ಮಾಳ್ಕೆಯೊಳು ಶೈಲಮಂ
ಬಿಂಕದಿಂ ತುಳಿದು ಬಿಡುಗಣ್ಣವರ ಹಿತಕೆಂದು ಬಂದ ದಕ್ಷಿಣದಿಶೆಯೊಳು ||೩೪||

ಯೋಗಬಲದಿಂದ ಚಿರಕಾಲದಾಯುಷ್ಯಮಂ
ಯಿಾ ಗರುವ ಗಳಿಸಿರ್ಪನದರಿಂದ ಮುನಿಕುಲಂ
ಭೋಗಮೋಕ್ಷಂಗಳಂ ಪಡೆಯಲೋಸುಗ ನಿರಾಹಾರಚಾಂದ್ರಾಯಣಗಳ |
ಈ ಗಹನದೆಡೆಯೊಳುಂ ತಪಮೆಸಗುತಿಹ ವಿಪ್ರ
ಪೂಗಮಂ ನೋಡನಘುದಿವಿಷದರ ತಿಂಥಿಣಿಯು
ಪೋಗುತಿದೆ ರಥವೇರಿ ಪೊಳಲ ನಾಲ್ದೆಸೆಯೊಳಂ ಪರುಠವದೊಳಿಟ್ಟೆಸಣುಗ ||೩೫||

ದೇವಗಂಧರ್ವಪತಗೋರಗದ್ವಿಜನ್ಮರುಂ
ಪಾವನಸ್ಥಳಮೆಂದು ಬಂದು ಮುನಿರಾಜಪ್ರ
ಭಾವದಿಂದಿಷ್ಟಗಳ ಪಡೆದಪರು ಪೋಗುತಿಹರಾನಂದಸಂದೋಹದಿ |
ನಾವೈದಿ ವಂದಿಸಲು ನಮಗಭೀಷ್ಟಗಳನ್ನು
ಭಾವನಾಮಾತ್ರದಿಂದೀವ ಯೋಗಿವರೇಣ್ಯ
ನೀ ವಸುಧೆಯಖಿಲಭೂತಶರಣ್ಯ ದಯೆಯಿಂದ ತಾಪಸರೊಳಗ್ರಗಣ್ಯ ||೩೬||

ಈ ಮುನಿಪನಾಶ್ರಮದೊಳಾವಾಸಗೈದು ಸು
ಪ್ರೇಮಮಂ ಪಡೆವೆವೆಮ್ಮಯಮನೋರಥಸಿದ್ಧಿ
ಯಾಮುಹಿಮನೆಡೆಗೀಗ ಪೋಗಿ ಮುನಿಪನ ಕಂಡನುಜ್ಞೆಯಿಂ ಬರ್ಪುದೆನುತ |
ರಾಮಪುರದರಸನಾಜ್ಞಾಪಿಸೆ ಸುತೀಕ್ಷ್ಣಸಹ
ಸೌಮಿತ್ರಿ ಭಕ್ತಿಯಿಂ ಪೋಗಿ ಕಂಡಂ ಧರಾ
ವಾಮದೇವಪ್ರತಿಮ ಸರ್ವಭೂತಾವಾಸನೆನಿಪ ಪಾವನಮೂರ್ತಿಯಂ ||೩೭||

ಅಂತು ಸಂಧಿ ೪ಕ್ಕಂ ಪದನು ೧೫೪ಕ್ಕಂ

ಮಂಗಳಮಹಾಶ್ರೀ.

— ಐದನೆಯ ಸಂಧಿ —

ಸೂಚನೆ || ಜಂಭಾರಿಯಿತ್ತ ಶರಚಾಪಗಳ ರಘುವರಗೆ
ದಂಭದಿಂದೊಪ್ಪಿಸುತ ಕೃತಿಯಾದನಾ ಕುಂಭ
ಸಂಭವಂ ನಿಜಪ್ರತೀಚೀದಿಟ್ಟಬಲದಿಂದ ತಿಳಿದು ಪರಬೊಮ್ಮನೆನುತ ||

ಪದನು|| ಯಮಿಗಳೊಡವೆರೆದು ಸತಿಸೋದರರ್ವೆರಸಿ ಸಂ
ಭ್ರಮದಿಂದಲೈತಂದು ಕಂಡನಾಶ್ರಮವನದು
ಕಮಲಪೀಠನ ಗೃಹವೊ ಕಾಮಜನಕನ ನೆಲೆಯೊ ಕೌಮಾರಿಯಿರುವ ಗಿರಿಯೊ |
ಅಮರಲೋಕವೊ ಧನದನಾಲಯವೊ ನಿರ್ವಾಣ
ದಮಲಮಂಟಪಮೆನಲ್ಕಂಗೊಳಿಸಿತೇನೆಂಬೆ
ಹಿಮಶೈಲಜಾತೆ ಕಲಶಜನಿಪ್ಪ ನೆಲೆಯನಭಿವರ್ಣಿಸಲ್ಕಳವಡುವುದೆ || ೧ ||

ಭೂಜಮೆಸಲಲ್ಲಲ್ಲಿ ಜಡೆಗಳಾಂತಿಹ ದ್ವಿಜಸ
ಮಾಜವೊಂದೆಡೆಯಲಷ್ಟಾಂಗಯೋಗಾಭ್ಯಾಸ
ರಾಜಮಂತ್ರಾದಿಗಳನಾರಾಧನಂಗೈವ ವಿಪ್ರಕುಲವೊಂದೆಡೆಯೊಳು |
ರಾಜೀವನೇತ್ರನ ಕಥಾಲಾಪವೇದಗಳ
ರಾಜಿಯಂ ವಿಸ್ತರಿಸಿ ಪೇಳ್ದೊಲಿದು ಕೇಳುತ್ತ
ತೇಜೋಮಯದ ಲೋಕದಂತೆಸೆದುದೇನೆಂಬೆ ಮುನಿಪತಿಯ ಮಹಿಮೆಗಳನು || ೨ ||

ಸಾಹಸದಿ ಕೃಚ್ಛ್ರಚಾಂದ್ರಾಯಣಗಳಿಂದಲಿ ನಿ
ರಾಹಾರಪಲ್ಲವದ ಭಕ್ಷಣೆಗಳಿಂದ ನಿಜ
ದೇಹಾದ್ಯುಪದ್ರವವ ಸಹಿಸಿ ಸುಖಲೋಕಗಳ ಪಡೆದಪೆವೆನುತ್ತ ಕೆಲರು |
ಮೋಹಾನುಕಾರದಿಂ ಬರಿದೆ ಬಳಲುವರೆನ್ನ
ನೀ ಹರಿಜಸೃಷ್ಟಿಯೊಳು ನೋಡಲೆನುತೆತ್ತಿರುವ
ಬಾಹುಗಳೊಳಾ ಸತ್ಯಲೋಕಮಂ ಸೆಳೆವಂತೆ ತೋರ್ಪ ಮುನಿವರನೊರ್ವನು || ೩ ||

ಶಾರೀರಸಂಕಟಂ ದ್ರವಿಣಬಹುಳತೆ ವಥಾ
ಚಾರನಿರ್ಲಜ್ಜೆಯಿಂ ನಿರ್ಮಲನಿಲಿಂಪರಾ
ಗಾರಮಂ ಸಾರಲ್ಕೆದನವರತ ತೊಳಲುವರುಪಾಯಂಗಳೊಂದರಿಯದೆ |
ಧಾರಿಣಿಯೊಳಿರ್ದಾನು ಸಗ್ಗಲೋಕದ ಸಿರಿಯ
ನೋರಂತೆ ನಿಟ್ಟಿಸುವೆನೆನುತೆನುತಲುಂಗುಟದ
ಭಾರದಿಂ ನಿಲ್ಕಿ ನೋಡುವನಂದದಿಂದೊರ್ವ ನಿಂದಿರ್ದನೊಂದೆಡೆಯೊಳು || ೪ ||

ಗುರುಶಾಪದಿಂ ಕ್ರೋಧಮುರ್ಬಿ ಬರೆ ಪೆರತೊಂದ
ಮರೆಯುತಂ ಬಿಡುಗಣ್ಣರರಮನೆಯ ನೋಡುವರೆ
ಪರಿಪರಿಯ ಯಾಗೀಯಕಾರ್ಯಂಗಳನ್ನೆಸಗಿ ಮೇಲಡರಿ ಪತಿತನೆನಿಸಿ |
ತಿರೆಯಾಗಸವನಂಟದಾದನೆಂದೆನುತ ಧಿ
ಕ್ಕರಿಸಿ ಕರತಳಮಧ್ಯದಲಿ ತೋರ್ಪ ರೂಪುಗಳ
ನರರೆ ನೋಡೆನುತಲೈಕಿಲದ ಜಲದೊಳಗಿರ್ದನೊರ್ವ ಮುನಿಯೊಂದೆಡೆಯೊಳು ||೫||

ಧರೆಜಳಾನಲನನಿಲನಾಕಾಶಮೆಂಜಿಲ್ಲ
ವೆರೆದು ಮೂರ್ತಿಯೆನಿಪ್ಪುದಜನ ಚಾತುರ್ಯಮಿದ
ನರಿಯದೆಲ್ಲರು ಚತುರ್ಮುಖ ಲೋಕಪೂಜ್ಯನೆಂದಾಡುವರು ಮೂಢಜನರು |
ನಿರತಮೊಂದಂಶದೊಳು ತನುವಿರ್ಪ ರೀತಿಯೊಳು
ವಿರಚಿಸುವೆ ನೋಡೆನುತ ಘರ್ಮದೊಳು ಪಂಚಾಗ್ನಿ
ಯುರುಬಿಂದಲರೆಯೊಳೊಪ್ಪಿರ್ದ ಮುನಿವರನೊರ್ವ ಬೆಳಗಿಗಂ ಬೆಳಗೆನಿಸುತ || ೬ ||

ಜಲದೊಳಿರ್ದೇನು ಪುತ್ತುಗ್ಗಿಯೊಡನಿರ್ದೇನು
ನೆಲದಿಂದಲೂರ್ಧ್ವಲೋಕಗಳು ಕೈಸಾರುವುವೆ
ಪೊಲಬರಿಯದಲೆ ಕಷ್ಟಬಡುವ ಮೂಢರಿಗೇನು ಪೇಳಲಹುದೆನುತೊರ್ವನು |
ಸುಲಭಗೈದಂಗಮನ್ನಂತರಿಕ್ಷದಿ ಪ್ರೋಕ್ಷ್ಯ?
ದುಲುಹಿನೊಳ್ ತೋರ್ಪನಚ್ಚರಿಯ ಮತ್ತಾವಾವ
ಫಲಗಳವನಿಗಶಕ್ಯಮೆನುತೆಲ್ಲರರಿವಂತೆ ಬಾನೆಡೆಯ ನೆಳಲಿನಂತೆ || ೭ ||

ವದನದಿಂ ಸಪ್ತಲೋಕಗಳ ನಿಟ್ಟಿಸಲಾರ
ದದುಭುತಶ್ರಮಗೊಂಬರರಿಯರಾ ಯುಕ್ತಿಯಂ
ಪದದಗ್ರದಿಂದಾನು ಸತ್ಯಲೋಕಾದಿಗಳ ಸೆಳೆದು ತಹೆನನಿತಲ್ಲದೆ |
ಚದುರಿಂದಲಾನು ಮತ್ತೊಂದು ಲೋಕವ ಮುಖದ
ಲೊದಗಿ ನೋಡುವೆನೆನುತ ಮಸ್ತಕವ ಧರಣಿಯೊಳ್
ಪದಮೆನಿಸುತೂರ್ಧ್ವಚರಣಗಳಿಂದೆ ಕಂಗೆಸದನೊಂದೆಸೆಯ ಮತ್ತೊರ್ವನು || ೮ ||

ಅಶನಾದಿಗಳ ಬಲದೊಳಿಂದ್ರಿಯಂಗಳು ಪಾರ
ವಶತೆಯಿಂ ದುರ್ವ್ಯಸನಗೊಳುತಿರ್ಪುವೈಸೆ ಸುರ
ರಶನದೂಟದಿ ಸುಖದೊಳಿರ್ಪೆನೆನುತಿಚ್ಛೈಸಿ ಮೇರುಮಸ್ತಕವನಡರಿ |
ಶಶಲಾಂಛನನ ಲಾಲನಂಗೈದು ಬರುವ ತನಿ
ರಸದಿಂದ ಸಂತುಷ್ಟಿವಡೆದು ಕಾಯಕ್ಲೇಶ
ಬೆಸನಂಗಳಿಲ್ಲದಚಲೋಪಮಿತನಿರ್ಮಲಿನನೊಂದೆಡೆಯಲಿರ್ದನೊಲಿದು || ೯ ||

ಸರ್ವಭೂತಗಳ ಕಾರಣದ ಸಾಕ್ಷಾತ್ಕಾರ
ದುರ್ವಹಮೆನುತ್ತೊರೆವರಣುಮಹತ್ತಾದಿಗಳ
ಪೂರ್ವವಸ್ತುಗಳ ನಿಜತತ್ವಮೆಸಗೀಪರಿಯುಲೆಂದುನಿಶ್ಚಯುವ ಧರೆಗೆ |
ತೋರ್ವೆನೆನುತ್ತೈಕಪಾದದಿ ನಿಂದು ಕಂಗೆಸೆಯ
ಲಿರ್ವ ವಸ್ತುವ ನಿರೀಕ್ಷಣೆಗೈದು ಪುತ್ತೊಂದು
ಖರ್ವವಿದರಿಂದಿಲ್ಲವೆನುತೊರೆವ ಮಾಳ್ಕೆಯೊಳಗೆಸದಿರ್ದನೊರ್ವ ದ್ವಿಜನು ||೧೦||

ಮರುತನಂ ಗಂಟಿಕ್ಕಿ ಮನಮುಗ್ಗಿಯೊಳು ಸಿಲ್ಕಿ
ಪೊರಸೂಸದಲೆ ಸಿಕ್ಕಿ ತರಿದು ತಮಮಂ ಮುಕ್ಕಿ
ನಿರುಪಮಾನಂದದಿಂದಲ್ಲಲ್ಲಿ ತಾಣಗೈದಿಹ ಮುನಿಗಳಂ ನೋಡುತ |
ಬರಲೊಂದೆಡೆಯ ಕುಸುಮಸಂಭಾರಸಂಭರಿತ
ಪರಿಕರದೊಳಾಗಮಾಚಾರದಿಂ ತಂತ್ರಗಳ
ಬೆರೆದು ಪೂಜಾವಿಧಿಯನೆಸಗುತಿಹ ಬಾಡಬರದೊಂದೆಸೆಯ ಕಣ್ಗೆಸೆದರು ||೧೧||

ಆಸನಗಳಂ ಬಲಿದು ವೈಷ್ಣವೀಮಾತೃಕಾ
ನ್ಯಾಸತತ್ವಂ ಮೂರ್ತಿಪಂಜರಂ ನ್ಯಾಸಗಳ
ಬೇಸರದಲನುದಿನಂಗೈದು ಕುಂಭಕವಿಡಿದು ದಿವ್ಯವಿಗ್ರಹವ ನೆನೆದು |
ಭಾಸಿಪ ಷಡಕ್ಷರಾದ್ಯಮಿತಮನುಗಳ ಚಿತ್ತ
ಮೋಸರಿಸದನುದಿನಂ ಜಪಿಸುತಿಹ ನಿರ್ಮಲಿತ
ಭೂಸುರಸಮಾಜವೊಂದೆಡೆಯ ಕಂಗೆಸದುದಾ ರಾಘವಂಗಚ್ಚರಿಯೆನೆ ||೧೨||

ಪೊರುತ ತೃಣಕುಲಭಾರಕ್ಲೇಶದಿಂ ವಚ್ಚತಂ
ತರಿಯನುಂ ಪಿಡಿದು ತಪುಗಪಕಾರಮುಂ ಗೈದ
ಪರಿಗಳಂ ಮೂದಲಿಸಿ ಪರಿಪರಿಯನಗೆಗಳಿಂದಾಲಂಬನಂಗೆಯ್ಯುವ |
ತರಳರೊಂದೆಡೆಯೊಳಂ ದರ್ಭಾಂಕುರಾದಿಗಳ
ನಿರುತಸ್ರುಕ್ಸ್ರುವಗಳಂ ಜತೆಗೈದು ಬರ್ಪಮರ
ಕರಿಗಮನೆಯರ ನಿರೀಕ್ಷಣೆಗೈವ ಜೋತಿಷಿಕರಂತೆ ಕೆಲರೆಸೆದಿರ್ದರು ||೧೩||

ಮಾಡೆ ಜೋತಿಷ್ಟೋಮವಾಜಪೇಯಾದಿಗಳ
ಮಾಡಿದುರುಸತ್ವದಿಂ ದೇವತಾಂಗನೆಯರುಂ
ಕೂಡೆ ಶೃಂಗಾರರಸಭರಿತವಿಗ್ರಹವಾದ ಮಾಳ್ಕೆಯಿಂದೈತರುತಿರೆ |
ನೋಡಿ ದರ್ಭಾಜಿನಂಕಂಬಳಾದ್ಯಾಸನವ
ಜೋಡಿಸುತ ಮತ್ತವರಿಗುಣಿಪರೆ ಪುರೋಡಾಶ
ಮಾಡಸೋದೂವಶೇಷಗಳ ಜತೆಗೊಳಿಸುತ್ತಮೆಸದಿರ್ಪರೊಂದೆಡೆಯೊಳು ||೧೪||

ಪುಂಡರೀಕಾಯತೇಕ್ಷಣೆ ರಂಭೆ ಬಂದು ಪ್ರಿಯ
ಗೊಂಡು ವಂದಿಸಿ ಸೇವೆಗೈತಂದೆನೆಂದೊರೆಯೆ
ಮುಂಡಲೀಕೃತಗೈದು ನಿಜಸಹಾಸಮುದಯದ ವ್ಯಾಘ್ರಚರ್ಮವನು ಸುತ್ತಿ |
ಕೊಂಡು ವೈಧೃತಿ ವ್ಯತೀಪಾತ ವಧ್ಯಾಷ್ಟಮಿಗ
ಳಂಡಲೆವ ಜೀವವೀ ನವಮಿ ಪೈತೃಕಗಳೆನೆ ಪೆಸ
ಗೊಂಡು ಕುಳ್ಳಿರ್ಪ ವಿಪ್ರರ ನೋಡಿ ಗಹಗಹಿಸಿ ನಗುವಮರಿಯತೋರ್ದರು ||೧೫||

ಯಾಯಜೂಕರ ಚಿತ್ತರಂಜನೆಗೆ ಬಹ ದೇವ
ತಾಯುವತಿಯರ ಕಟಾಕ್ಷಂಗಳುಂ ಪರಕಲಿಸೆ
ತೋಯಜಗಳಿಂದೆಮಗೆ ಸನ್ನಿಧಿಯುಲೊದಗಿದುವು ಪೂಜೋಪಕರಣಕೆನುತ |
ಭೂಯೋಪಚಿತಿಗೈವ ಬುಧರ ನಿಟ್ಟಿಸಿ ಕುರಂ
ಗಾಯತೇಕ್ಷಣೆಯರುಂ ನಗುತಿರಲ್ಕೈತಂದು
ಚಾಯಮೆನುತವ ಪೊಗೆದು ರುದ್ರಾಯತಮೆನುತ್ತಲಭಿಷೇಕಗೆಯ್ಯೆ ಕೆಲರು ||೧೬||

ಕುಡಿವರಿಯೆ ಬಿಂಬೋಷ್ಠರಕ್ತಿಮುಂ ಮುಂಬರಿದು
ಕುಡಿನೋಟದೊಡವೆರೆಯೆ ಪಾಟಲಿತಪಟಮೆನ್ನು
ತೊಡನೊಡನೆ ಪೀನಕರಣೋತ್ಸುಕದೊಳೆಡೆಯಾಡುತಿರಲಲ್ಲಿ ಕೆಲಕೆಲಬರು |
ತುಡುಕೆ ತನುಕಾಂತಿ ಭೂತಳವ ಪೊಂಬಸಿರೆನ್ನು
ತಡಿಗಡಿಗೆ ಸ್ನಾನಾಹ್ನಿಕಗಳೆಸಗುವವಸರದೊ
ಳೆಡೆಯಾಡುತಿಹ ಪಾರ್ವರನು ನೋಡಿ ದೇವತಾಸತಿಯರುಂ ನಗುತಿರ್ದರು ||೧೭||

ಕುಶಗಳಂ ಮರೆದೆ ಕುಂಡಲಗಳಲ್ಲಿಟ್ಟಿರ್ಪೆ
ನಸಿತಾಜಿನವ ಬಿಟ್ಟೆ ವಿಮಲಾಕ್ಷಮಾಲೆಗಳ
ಸಸಿನೆ ಮರೆದಿಹೆ ಬೇಗತರುವೆನೆನ್ನುತ ನೆನೆದು ಪಿಂದಿರುಗಿ ಬಹ ವಿಪ್ರರ |
ಪೊಸಕಕ್ಷಪಾಲಪುಸ್ತಕವ ತರಲೆಳಸುತಿಹ
ರಸೆಯದೇವರ ನೋಡಿ ದೇವತಾಂಗನೆಯರುಂ
ನಸುನಗೆಗಳಿಂದ ತಮ್ಮೊಳ್ ತಾವೆ ಹಾಸ್ಯರಸವೆರಸಿ ಸಂತಸಗೊಳುವರು ||೧೮||

ಬಲಿಯನತಿಥಿಯ ಪೂಜೆಗೆಳಸುತಿಹ ಭೂಸುರರ
ನೊಲಿದು ಪಿತೃದೇವತಾಭೂತಮಾನುಷಬ್ರಹ್ಮ
ಚೆಲುವಯಜ್ಞಂಗಳಂ ಮಾಡುವರನುಪನಿಷತ್ಪಾರಾಯಣಂಗೈವರ |
ಒಲೆಪಿಂದ ಸಂಹಿತಾಪದಕ್ರಮಗಳಂ ವರ್ಣ
ಕಲಿತದಾರಂಗಗಳ ಕಾರಣಬ್ರಾಹ್ಮಣಂಗ
ಳುಲಿವ ವಿಪ್ರರ ಸಂತೆ ತೋರ್ದುದು ಚತುರ್ಮುಖನ ಲೋಕಕಿಮ್ಮಡಿಯೆಂಬೊಲು ||

ಬಂದು ಚಮರೀಮೃಗಗಳತಿಭಕ್ತಿಯಿಂ ಬಾಲ
ದಿಂದ ಸಮ್ಮಾರ್ಜನಂಗೈವುವಾಶ್ರಮದಮರ
ಸಿಂಧುರಗಳೈತಂದು ಜಲಸೇಚನಂಗೈದು ಪೋಗಲ್ ಪಿಪೀಲಿಕೆಗಳು |
ಚಂದದಿಂ ಬನದ ಬಿತ್ತುಗಳಿಂದಲಂಕಾರ
ವೊಂದಿರ್ಪ ರಂಗವಲ್ಲಿಯ ರಚಿಸೆ ಭಲ್ಲೂಕ
ಬಂಧುರ ಪ್ರೇಮದಿಂ ಮಧುಫಲಂಗಳ ತಂದು ಕೊಡತಿರ್ದುವಾವೆಡೆಯೊಳಂ ||೨೦||

ಕುಸುಮಗಳ ತಿಂಥಿಣಿ ಕುಶಚೀರವಸನಗಳ
ಪೊಸಜಲಫಲಂಗಳಂ ಕೋಡಗಗಳುಂ ತಂದು
ಸಸಿನೆ ಮುನಿವಸರಕಂ ಕೊಡುತಿರಲ್ಕನುಗೈದು ಹುತವಹನ ಪೂಜೆಗೈದು |
ಪಸಿವುನೀರಡಕೆಗಳ ಪೋಗಾಡಿ ಸುಖದಿಂದ
ಲೆಸವ ಬಾಡಬರುಗಳ ನೋಡುತ್ತೈತರಲೊಂದು
ಪಸುಗೋಡಗಂ ಕಿರಿದು ಪಲ್ಗಳಂ ನಗಿಸುತಿಹುದೊಂದೆಡೆಯ ತಾಪಸರನು ||೨೧||

ಕಂಗಳರೆಮುಚ್ಚಿ ತೆರೆಯುತಲುಚ್ಚಭೂಜಶಿಖ
ರಂಗಳನ್ನಡರಿ ಧುಮ್ಮಿಕ್ಕಿ ದನಿಗೆಯ್ಯುತ್ತ
ಹಿಂಗದಂಗೋಪಾಂಗದಂಗಚೇಷ್ಟೆಗಳಿಂದಲಡಿಗಡಿಗೆ ಕುಣಿದರಚುತ |
ಮುಂಗಡೆಯ ಕುಂಡದೊತ್ತಿನೊಳು ಕಂಗೊಳಿಪ ಬಿಸಿ
ಯಿಂಗಳವ ಪಣ್ಣೆನುತ ಪಿಡಿದು ಕರಗಳನೊದರಿ
ಪಿಂಗಡೆಗೆ ತೊಲಗಿ ಪಲ್ಗಿರಿದು ನಗಿಸುವ ಪ್ಲವಗಪೋತಗಳ್ ನೆರೆದಿರ್ಪುವು ||೨೨||

ಇಂತು ನವರಸಭರಿತಮಾಂತಗಸ್ತ್ಯಾಶ್ರಮದ
ಮುಂತೆ ನಿಂದು ಸುತೀಕ್ಷ್ಣಮುನಿಯೊಡನೆ ಲಕ್ಷ್ಮಣನ
ಕಂತುಪಿತ ಕಳುಹಲವರೈದಿ ಮುನಿಪತಿಯಂಘ್ರಿಗೆರಗಿ ವೃತ್ತವನರಿಪಲು |
ಚಿಂತಿಸಿಹ ವಸ್ತು ಕೈಸಾರ್ದುದೆಂದೆನುತ ಮುನಿ
ಕಾಂತನತಿಹರ್ಷದಿಂ ಜನಕಜಾರಮಣನಂ
ಸಂತಸದಿ ಬಲಗೊಂಬೆನೆನುತ ನೇಮಿಸಿ ಸೌಖ್ಯಮಾಂತಂ ನಿಜಸ್ವಾಂತದಿ ||೨೩||

ಮುನಿಪನಪ್ಪಣೆವಿಡಿದು ಸೌಮಿತ್ರಿ ಬಂದುಸಿರೆ
ವನಿತಾಸಹಾಯದಿಂದೊಳಪೊಕ್ಕು ಬರೆ ಮೌನಿ
ಜನಸಮುದಯದ ನಡುವೆ ನಾಲ್ಮೊಗನದೆಂಬಂತೆ ಶ್ರೀರಾಮಚಾರಿತ್ರೆಯ |
ಮನನೋಪಯೋಗ್ಯ ಮನುಭೇದಗಳ ಬಿತ್ತರಿಸಿ
ವಿನಯದಿಂ ಬೋಧಿಸುತ ರಾಮನಾಮಾಮೃತದಿ
ಜನಿತಾನುರಾಗದಿಂದೆಸೆವ ಮೌನಿಯ ಕಂಡ ಕೋದಂಡಪಾಣಿಯೊಲಿದು ||೩೪||

ತರುಣಶಶಿರೇಖೆಯಂತಮಿತಸುಕಳಾಭರಿತ
ಧರಣಿಜಾತೆಯನೆಡದಿ ಬಲದಿ ಸೌಮಿತ್ರಿಯಂ
ಪುರುಹೂತನೀಲನಿಭಮೂರ್ತಿಯೈತರುತಿರಲ್ಕಂಡಾ ಕರೀರತನಯಂ |
ನೆರೆದಿರ್ಪ ವಿಪ್ರಸಭೆವೆರೆದೆದ್ದು ಹರುಷಸಂ
ಭರಿತಮಾನಸದಿಂದ ನುತಿಸುತವೆ ಬಿಗಿಯಪ್ಪಿ
ಪರಮಾಂತರಂಗಸುಪ್ರೇಮದಿಂ ಕರೆದೊಯ್ದು ಕುಳ್ಳಿರಿಸಿದಂ ಪ್ರಿಯದೊಳು ||೩೫||

ಹುತವಹನ ಪೂಜಿಸುತಲರ್ಘ್ಯಾದಿಗಳನಿತ್ತು
ಹಿತಕಂದಮೂಲಾದಿಫಲಗಳಂ ರಘುವರಂ
ಗತಿಪ್ರೀತಿಯಿಂದಲಾತಿಥ್ಯಮಂ ಗೈವುತ್ತ ಬಹುಧೋಪಚಾರಮೆಸಗಿ |
ಕ್ಷಿತಿಪದಕ್ಷಪ್ರಿಯಾತಿಥಿಧನ್ಯಮಾನ್ಯಸಂ
ಗತಿಯೆನ್ನ ಭಾಗ್ಯದಿಂ ಕಂಗೆಸದೆಯೆನುತ ಮುನಿ
ಪತಿ ನುತಿಸಿ ಕುಶಲಮಂ ಬೆಸಗೊಂಡು ಪ್ರಿಯದಿಂದ ರಾಮನೊಡನಿಂತೆಂದನು ||೩೬||

ಅಸುರವಧೆಗೆಯ್ಯಲೆಂದಾ ವಿಶ್ವಕರ್ಮಸಂ
ತಸದಿಂದ ನಿರ್ಮಿಸಿದ ತ್ರಿಣತವೈಷ್ಣವಬೊಮ್ಮ
ಸಸಿನಿತ್ತ ಮಿತರಹಿತಮಾರ್ಗಣವ ತೂಣೀರನಿಸ್ತ್ರಿಂಶಗಳ ಸುರಪನು |
ಬಿಸಜಾಕ್ಷರಾಮಗಿತ್ತಪುದೆಂದು ಪ್ರೀತಿಯಿಂ
ದೊಸೆದೆನ್ನಲಿಟ್ಟಿರ್ದ ಶರಚಾಪಖಡ್ಗಗಳ
ರಸೆಯರಸ ಪ್ರಿಯದಿಂದ ಕೈಕೊಳಲ್ವೇಳ್ಕೆನುತಲರ್ಪಿಸಿದ ಮುನಿಪ ಮುದದಿ ||೩೭||

ಒಲವಿಂದ ಶರಚಾಪಖಡ್ಗಗಳನಿತ್ತು ಮುನಿ
ತಿಲಕನಿಂತೆಂದ ರಘುನಾಥ ಶರಣರ ಪೊರೆವ
ರೊಲವಿನಿಂ ಜಾನಕೀಲಕ್ಷ್ಮಣರ್ಸಹವಾಗಿ ಬಂದನುಗ್ರಹಿಸಿ ಪಥದಿ |
ಬಲುತರಾಯಾಸದಿಂದಿರಲಾಯ್ತು ಸೌಖ್ಯರಸ
ತುಳುಕುತಿರುವಂತ ಸುಕುಮಾರಿ ಸುಖಿ ನೆಲದಣುಗಿ
ಕಲಿತಶರ್ಕರಕಂಟಕಾಕೀರ್ಣಪಥದೊಳು ಬಂದುದಚ್ಚರಿ ನರೇಶ ||೩೮||

ಸುಳಿಸುಳಿದು ಬೆಳಬೆಳಗಿ ಘನದೊತ್ತಿನೊಳು ಸುತ್ತಿ
ತೊಳಲುತೆಡೆವಿಡದಭೇದದಲಿ ಕಂಗೊಳಿಸುತಿರು
ವೆಳಮಿಂಚಿನಂದದಿಂ ಸಿರಿಯುಳ್ಳ ಪುರುಷನಂ ಸುತ್ತಿ ಸುಖಮುಂ ತೋರುವ |
ನಳಿನಮುಖಿಯರಿಗೆ ತಿಳದನಿತು ಕಷ್ಟದೋರ
ಲೆಳವಿಸಿಲಿನಂದದಿಂ ಜಾರುತಿಹರೀ ಲೋಕ
ದೊಳು ತಥ್ಯಜನಕಜೆಯೊಳಾ ಗುಣಗಳುಂ ಮಿಥ್ಯಮೆನಿಸಿ ರಾರಾಜಿಸುವುವು ||೩೯||

ಪಥದ ಸೀತಾಶ್ರಮಂ ವಿತತವಾಗಿದೆ ತಿಳಿಯೆ
ಶತಪತ್ರಮಿತ್ರ ಪಡುಗಡಲ ಸಾರಿದ ಶ್ರುತಿ
ಪ್ರತಿತಸಂಧ್ಯಾದಿಗಳ ರಚಿಸಿ ಸುಖದಿಂದೊಂದು ತಾಣದೊಳು ಪವಡಿಸೆನುತ |
ಯತಿಶಿರೋಮಣಿ ಪೇಳ್ದರತಿಸಂತಸದಿ ರಾಮ
ಕ್ರತುಲಿಹಾರ್ಚನೆಗೈದು ಮುನಿವಂದನಂಗೈದು
ಸತಿಸಹಿತ ಸುಖಸುಪ್ತಿಯೊಳಗಿರ್ದನಂದಿನಿರುಳಾನಂದಸಂಭ್ರಮದೊಳು ||೩೦||

ವೈದೇಹಿಸೌಮಿತ್ರಿಯೊಡಗೊಂಡು ರಾಮಃ ತಾ
ನೈದೊಂದುತಾಣದೊಳ್ ಸುಖದಿ ವಿಶ್ರಮಿಸೆ ಮೇ
ಲ್ವಾಯ್ದು ಕತ್ತಲೆ ಲೋಕದಾಂಧತೆಯ ಕಲ್ಪಿಸಲದೈದೆ ಮೂಲಪ್ರಕೃತಿಯು |
ಮೈದೋರಿ ಮೂಜಗವ ತನ್ನೊಳಿಂಬಿಟ್ಟುದೆನ
ಲೈದಾರುತತ್ವಂಗಳೊಂದೆನಿಸೆ ಮುನಿಪ ನಿಜ
ಮೈದಿ ಸೋಂಕದಲಿರ್ಪನೆಂಬಂತೆ ದಿನನಾಥ ತೋರ್ದ ಮೂಡಣ ದೆಸೆಯೊಳು ||೩೧||

ದಿನಪನುದಯಂಗೈಯಲಾಗ ಸಂಧ್ಯಾಕೃತ್ಯ
ವನು ರಚಿಸಿ ಜಾನಕೀಸೌಮಿತ್ರಿಸಹಿತ ಮುನಿ
ಪನ ಪದಾಬ್ಜಗಳಿಗಭಿನಮಿಸಿ ಸಂತಸದಿಂದ ಕುಳ್ಳಿರ್ದ ರಘುವೀರನ |
ಚಿನುಮಯಸುಮೂರ್ತಿಯಂ ನೋಡಿ ನಸುನಗೆಯಿಂದ
ಮನದೊಳಿರ್ದಾನಂದದಿರುವಿನೊಳ್ ಪೂಜಿಸಿದ
ನನಿತುತತ್ವಾರ್ಥಗಳ ನಿಜಭಾವಮಂ ಪದಕರ್ಪಿಸುವ ತೆರದೊಳು ||೩೨||

ಧಾರಿಣಿಯ ಭಾರಕನ ದಶಶಿರನ ತರಿದಿಡ
ಲ್ಕೋರಂತೆ ಹರವಿರಿಂಚಾದಿಸುರರೈತಂದು
ಕ್ಷೀರವಾರಿಧಿಯೆಡೆಯ ಸಂಪ್ರಾರ್ಥನಂಗೆಯ್ಯಲಭಯಮನ್ನಿತ್ತ ಪರಿಯ |
ಸಾರಸಾಸನನಿಂದಲಾನರಿದು ನೀ ಬರುವ
ದಾರಿಯ ನಿರೀಕ್ಷಿಸುತ ಶುಭಕಥಾಲಾಪದಿಂ
ಚಾರುತಪಮೆಸಗಿ ಜಾನಿಸುತಲಿರ್ದೆನು ನಿನ್ನ ಸನ್ಮೂರ್ತಿಯನ್ನು ಬಿಡದೆ ||೩೩||

ಸೃಷ್ಟಿಗಿಂ ಮೊದಲು ನಿರ್ಗುಣನೊರ್ವ ನೀನೆ ಜಗ
ದಿಷ್ಟೆಮಾಯಾಶಕ್ತಿ ನಿನ್ನಾಶ್ರಯದಲಿರುತ
ಚೇಷ್ಟಿಪುದು ನಿಕ್ಷೇಪ ಮಗುಳಾವರಣಮೆಂಬ ನಾಮವೆರಡಾಂತು ಮುದದಿ |
ತುಷ್ಟಿಮೂಲಪ್ರಕೃತಿ ಮಾಯೆ ಸಂಸೃತಿಬಂಧ
ದೃಷ್ಟಿತರದಾವಿಧ್ಯಮೆಂದು ನಾಮಗಳ ಸಂ
ದಷ್ಟಗೈದೆಲ್ಲರುಂ ಪೇಳುವರು ಭವದೀಯಮಾಯೆಯಂ ಪರಿಪರಿಯೊಳು ||೩೪||

ಅವ್ಯಾಕೃತಮದಲ್ತೆ ಮತ್ತೇಂ ಮಹಾತತ್ವ
ಸೇವ್ಯಹಂಕಾರತ್ರಿವಿಧಂ ಗುಣಾಕೃತಿಯೆನಿಸಿ
ನವ್ಯಚಿತ್ರಂಗಳಾಗಾರಮಾಗೊಪ್ಪಿರಲ್ಕಾಗ ತಾಮಸದ ಗುಣದೆ |
ಭೂವ್ಯೋಮಪಾತಾಳಲೋಕಂಗಳೆಂಬ ಸಂ
ಭಾವ್ಯಂಗಳೇನಿಲ್ಲದಂತೆ ಗಂಭೀರಸು
ಶ್ರಾವ್ಯದಿಂದೊಪ್ಪಿರ್ದುದಮಲತರ ಸದ್ಬ್ರಹ್ಮವೊಂದೆಸೆಯಲಾನಂದದಿ ||೩೫||

ಸನ್ನಿಧಿಯಲಿರುವುದೆವ್ಯಾಕೃತಮಹಾತತ್ವ
ವನ್ನು ಪೆತ್ತುಪುದಹಂಕಾರಮದರಿಂದಹುದು
ನನ್ನಿಯಿಂ ಸಾತ್ವಿಕಂ ರಾಜಸಂ ತಾಮಸಗಳೆನಿಪ ಗುಣಗಳ್ ಜನಿಪುವು ।
ತನ್ನೊಳಗೆ ತನ್ಮಾತ್ರೆಗಳ ಸೂಕ್ಷ್ಮರೂಪಿನಿಂ
ಚೆನ್ನೆಸೆಯಲಾಂತಿಹುದು ತಾಮಸಂ ನೋಡಲು
ತ್ವನ್ನಮಾದಪುದು ಸರ್ವಗಲಿಂಗಮುದಯಿಪುದು ಸರ್ವಬೀಜಾತ್ಮಮೆನಿಸಿ ॥೩೬॥

ಸ್ಥೂಲಭೂತಕದಂಬದಿಂ ವಿರಾಟ್ಪುರುಷನಿಂ
ಕಾಲಕರ್ಮಕ್ರಮದಿ ಸಕಲಭೂತಂಗಳುರು
ಜಾಲಮುದಯಿಪುದಲ್ಲಿ ಸಾತ್ವಿಕದೊಳಂ ವಿಧಿಗೆ ತಾಮಸದೊಳಂ ರುದ್ರನು ।
ಮೇಲೆ ರಾರಾಜಿಸಲ್ ಬಿದಿಯುದಿಪ ಜಗ
ಜ್ಜಾಲೆ ತೋರುವುದು ಜಾಗ್ರ[ತ್ಸುಷ್ಪಿ] ಸ್ವಪ್ನಗಳಿ
ಗಾಲಯಂ ಬುದ್ಧಿಮತ್ತವಕೆ ಸಾತ್ವಿಕನೆನಿಸಿ ತೋರ್ಪೆ ನೀ ರಘುವರೇಣ್ಯ ॥೩೭॥

ನಿರುಪಮ ನಿಜಾನಂದ ನಿರ್ಗುಣ ನಿರಾವರಣ
ಪರಿಪೂರ್ಣ ನೀಂ ಸೃಷ್ಟಿಗೈಯಲಿಚ್ಛೆಯು ಪುಟ್ಟ
ಲುರುತರದ ಮಾಯೆಯೊಳು ಗುಣಕಲಿತಮಾದಂತೆ ತೋರ್ಪೆ ಭವದೀಯಮಾಯೆ ।
ಎರಡು ರೂಪಿನಲಿ ವಿದ್ಯಾವಿದ್ಯೆಯೆಂದೆನಿಸಿ
ನೆರೆಯ ನಿರ್ವಾಣಗಳನಖಿಳಪ್ರಾಣಿಗಳಿಂಗೆ
ಕರುಣಿಸುವುದೇವೇಳ್ವೆ ಮಾಯಾವಿಚಿತ್ರಮಂ ಕಳೆದುಳಿಯಲಳವಪ್ಪುದೆ ॥೩೮॥

ತಿಳಿದು ಗುರುಮುಖದಿಂದ ವೇದಾಂತದರ್ಥಮಂ
ಪಳಿದವಿದ್ಯಾಗುಣವ ಪರಬೊಮ್ಮ ನಿಮ್ಮಪದ
ನಳಿನಭಕ್ತಿಯ ಪಿಡಿದನನ್ಯಮಾನಸನೆನಿಸಿ ತ್ವನ್ಮಹಾಮಂತ್ರಜಪದಿ ।
ಬೆಳಗುತಿರೆ ವಿದ್ಯೆ ಸಂಭವಮುಪ್ಪುದಾತಂಗೆ
ಕಳೆದು ಭವಬಂಧಗಳ ಸುಖದ ಸುಗ್ಗಿಯೊಳಿರ್ಪ
ಜಳಜಾಕ್ಷಭಕ್ತಿಯದೆ ಮುಕ್ತಿಯೆಂದರಿತರಿತು ಚರಣಸೇವನೆ ಗೈವೆನು ॥೩೯॥

ಬಲುಪರಿಯ ವಿಜ್ಞಾಪನಂಗೈವುದೇನಿನ್ನು
ಸುಲಭಸುಖಸಾರಮಂ ಸೂಚಿಸುವೆನರಸ ಪದ
ಜಲಜಾತಭಕ್ತಿಯೇ ಮುಕ್ತಿಕಾರಣಮದಕೆ ಬೀಜ ಸತ್ಸಂಗಮಲ್ತೆ ।
ಗೆಲಿದು ಮಾನಸಜಾತವೃತ್ತಿಗಳ ಶಾಂತಿಸಂ
ಕಲಿತಮತಿಯಿಂ ಯಮಾದ್ಯಖಿಲಸಂಪತ್ತಿನಿಂ
ದಲಘುತುಷ್ಟಿಯನಾಂತು ನಾಮಸಂಕೀರ್ತನೆಯೊಳಿಹರೆ ಸಾಧುಗಳೆನಿಪರು ॥೪೦॥

ಪರಿಪರಿಯ ತಪದಿಂದಲಗಣಿತಶರೀರಗಳ
ಧರಿಸಿ ಸಾಧಿಸಲೊಂದುಜನ್ಮಮೊಳ್ ಸಾಧುಗಳ
ಕರುಣ ಸಿಕ್ಕುಪದಲ್ತೆ ಸತ್ಸಮಾಗಮದಿಂದ ಶಮೆದಮೆಗಳುದುಭವಿಪುವು ।
ಪರಮವೈರಾಗ್ಯದಿ ಭವನ್ಮಂತ್ರದೊಳು ಚಿತ್ತ
ನಿರುಗೆಯಹುವದರಿಂದ ಭಕ್ತಿ ಸಂಭವಿಸಿ ನಿಜ
ಕರತಳಾಮಳಕಮೆನೆ ಮುಕ್ತಿ ಕೈಸಾರುವದು ಚತುರಪಥ ಮುನಿಸೇವಿತಂ ॥೪೧॥

ಇಂತನಂತಾನಂತಜನ್ಮಂಗಳೊಳ್ ನಿಜ
ಸ್ವಾಂತವಂದನಗೈದು ತಪಮೆಸಗಿದುದಕೆ ಶ್ರೀ
ಕಾಂತರಾಮಾಪುರನಿತಾಂತದಯದಿಂದೊಲಿದು ಬಂದೆನ್ನನುದ್ಧರಿಸಿದೆ ।
ಚಿಂತಿಸಿದ ಫಲ ಸಫಲಮಾದುದಾನೇನನುಂ
ಪಿಂತೆಸಗಿದುದು ಪೋದುದಾನಂದನೀರಧಿಯ
ಪಂತಿ ಕೈವಶಮಾದುದೆನುತಲಾ ಮುನಿವರನು ನುತಿಗೈದ ರಘುವೀರನ ॥೪೨॥

ಅಂತು ಸಂಧಿ ೫ಕ್ಕಂ ಪದನು ೧೯೬ಕ್ಕಂ

ಮಂಗಳಮಹಾ ಶ್ರೀ ಶ್ರೀ ಶ್ರೀ.

— ಆ ರ ನೆ ಯ ಸ ಂ ಧಿ —

ಸೂಚನೆ || ಕಲಶಭವನೆಲಿವನೆಯ ಕಳೆದು ಗೋದಾವರಿಯ
ನೆಲದೊಳಿಹ ಪಂಚವಟಿಗೈದುತ ಜಟಾಯುವಂ
ಪಲಬಗೆಯಲುಪಚರಿಸಿ ಪದುಳದಿಂ ಧರಣಿಸುತೆವೆರೆದು ಸುಖದಿಂದಿರ್ದನು ||

ಪದನು|| ಹಿಮಗಿರಿತನೂಜೆ ಕೇಳ್ ಮೌನಿ ಸನ್ನುತಿಗೆಯ್ಯ
ಲಮಿತಹರುಷದಿ ಬೇಡಿದಿಷ್ಟಮಂ ಕೊಟ್ಟಪೆಂ
ಯಮಿತಿಲಕ ಕೇಳ್ವುದೆನಲಡಿಗೆರಗಿ ಸಂತಸದಿ ವಿಜ್ಞಾಪನಂಗೈದನು |
ಕಮಲಾಮನೋಹರನೆ ಕಾಂತೆ ಲಕ್ಷ್ಮಣವೆರಸಿ
ದ್ಯುಮಣಿಶತಸಂಕಾಶದಿಂ ತೋರುವೀ ಮೂರ್ತಿ
ಮಮತೆಯಿಂದೆನ್ನ ಮಾನಸವನಗಲದೆ ಮುದದಲಿರ್ಪಂತೆ ಮಾಳ್ಪುದೆನುತ || ೧ ||

ಎನುತ ಯಾಚಿಸಿ ಮುನಿಪನನುನಯದಿ ರಘುವೀರ
ಮನದೊಲವಿನಿಂದಿಷ್ಟವಿತ್ತು ಲೋಕಾಚಾರ
ದನುವರ್ತನಂಗೈದು ಭುವನಮಂ ಮೋಹಿಸುವ ಮನುಜಲೀಲೆಯನು ತಾಳ್ದು |
ವಿನಯದಿಂ ಸಂಯಮಿಯೊಳೆಂದಂ ರಘೂತ್ತಮಂ
ಜನರಹಿತರಮ್ಯಕಾನನಮೊಂದ ತೋರ್ದೊಡಾ
ನನುವಿಂದಸುಖದೊಳಿಹೆನೆನಲಗಸ್ತ್ಯಂ ನಗುತ ಮಾರುತ್ತರಂಗೊಟ್ಟನು || ೨ ||

ದೇವ ನೀಂ ಬೆಸೆಗೊಂಬೊಡಿದು ಚೋದ್ಯಮಿಾ ಜಗ
ಜ್ಜೀವರಾಲಯಕಾಲಯುವ ತೋರ್ಪರಾರುಂಟು
ನೀವತಿಪ್ರಿಯದಿಂದ ಜನರಂತೆ ಬೆಸಗೊಂಬುದುಚಿತ ಲೋಕಾನುಮತದಿ |
ಈ ವಸುಧೆಗೆರಡುಯೋಜನದಿ ಗೋದಾವರೀ
ಪಾವನತರಂಗಿಣಿಯ ತಟ ಪಂಚವಟಿಯೆಂಬ
ಠಾವನೇಕವಿಲಾಸಕರಮಾ ವಸತಿಯೋಗ್ಯಮಾಗಿದೆ ಜಗದ್ವಿದಿತದಿ || ೩ ||

ಅಲ್ಲಿರ್ದು ಕೆಲಕಾಲ ದೇವತಾಕಾರ್ಯಂಗ
ಳೆಲ್ಲಮಂ ಸಾಧಿಸುವುದೆನುತ ಬೀಳ್ಕೊಡೆ ವಟುಕ
ರಲ್ಲಲ್ಲಿ ಮಾರ್ಗಪ್ರದರ್ಶನಂಗೈದು ಬರೆ ಸೀತಾತೃತೀಯನೆನಿಸಿ |
ಸಲ್ಲಲಿತಗಹನಮಂ ನೋಡುತ್ತೈತರೆ ಬಿಸಿಲ್
ಮೆಲ್ಲಮೆಲ್ಲನೆ ಪೆರ್ಚಿ ಬರುತಿರೆ ತರುಚ್ಛಾಯೆ
ಯಲ್ಲಿ ತಣ್ಪೆನಿಸದುಷ್ಣಾಧ್ಯತೆಯು ಬಲಿದು ಬರುತಿರ್ದುದಾ ಸಮಯದೊಳಗೆ || ೪ ||

ವನರೋಮರಾಜಿ ಭೂಭೃತ್ಪಯೋಧರೆ ಚೈತ್ರ
ಮನದನ್ನನಂ ಬಯಸಿದನುತಾಪದೂಷ್ಮತೆಯು
ಘನವೆನಿಸೆ ಶರಧಿ ಶಿಶಿರೋಪಚಾರಗಳೆಸಗೆ ಶಶಿಯಿಂದ ತಣ್ಪೆನಿಸದೆ |
ಬಿನದಮೆನೆ ವಿರಹಾಗ್ನಿ ಪೆರ್ಚೆ ಬರ್ಪುದೊ ಧರಾ
ವನಿತೆಗೆನೆ ಲೋಕಮುಷ್ಣಾಳುಗಳ ಮಾಳ್ಕೆವೊಲು
ತನತನಗೆ ನೆಳಲುಗಳನರಸಿ ಬಾಯಾರುವೋಲ್ ಬೇಸಗೆಯು ವೈದೋರ್ದುದು ||೫||

ಕರ್ಪುರರಸುಗಂಧಿರಂಭಾಪರೀರಂಭದಿಂ
ದೊಪ್ಪಿದಂ ಹರಿ ಯಗ್ಗಿ ಪುಂಡರೀಕಾಶಯದೊ
ಳಿಪ್ಪುದಂ ನೆನೆದ ಭಾಸ್ಕರತನಯಪುಣ್ಯಜನನೊತ್ತವೊತ್ತಂ ಬಯಸದೆ |
ಇಪ್ಪ ನೆಲೆಗೈದಸುರ ಶರಧಿಯಂ ವರುಣನುಪ
ಸರ್ಪಣಂಗೈದ ಪವಮಾನಧನದಾದಿಗಳ್
ನೇರ್ಪಿದರ್ ಹಿಮಶೈಲತಪ್ಪಲಂ ಸಾರಿರ್ದರಾ ಕಪರ್ದಿಯನು ಕೂಡಿ || ೬ ||

ದೆಸೆವೆಣ್ಗಳಾ ಬಿಸಿಲ ಜಳಕಳ್ಕಿ ಬಳ್ಕುತಂ
ಬಸವಳಿದು ಬಾಯಾರಿ ಭವನನುಗ್ರಹದಿಂದ
ಬಿಸಿಲದೊರೆಯಂ ಪಡೆದು ಕುಡಿದು ನೀರಡಿಕೆಯಂ ತೀರದಿರೆ ಬಳಲಿ ತೊಳಲಿ |
ಬಿಸುಸುಯ್ಯಲುದುರೆ ತನಿಗೆಂಡ ತತ್ಸಂಪರ್ಕ
ದೆಸಕದಿಂ ಬೀಸುತಿಹ ನಸುಗಾಳಿಯಂ ನೆಲಂ
ಬೆಸೆಯೊಡೆದುದೋ ಯೆನಲ್ ತೋರಿದುದು ಬೇಸಗೆಯ ಬಿಸಿವಿಸಿಲ ಪೊಸತೇಳ್ಗೆಯುಂ

ಮೊರೆದು ಮೇಲ್ವಾಯ್ದು ಬಹ ಮಂದೇಹರುಪಟಳಕೆ
ತರಹರಿಸದಳವಲ್ಲದರ್ಕ ಕಡುಗೋಪದಿಂ
ಕರಕಲಿತಖಡ್ಗವನ್ನೊರೆಯಿಂದ ಪೆರದೆಗೆದು ತರಿವೊಡರಿಗಳ ಕುಲವನು |
ಬಿರುಸಿಂದ ಪೊಡೆಯೆ ತರವಾರಿಧಾರೆಗಳಿಂದ
ಳುರಿತ ತನಿಗೆಂಡ ಮುಂಬರಿದು ಬರುವುದೋ ಯೆನ
ಲ್ಕರರೆ ಗಿರಿಶಿಖರಗಳ್ ಚಿಣಿಚಿಟಲುಚಿಟಲೆನುತಲೊಡೆಬುವಾ ಬೇಸಗೆಯೊಳು || ೮ ||

ಜಳದಿ ನೀರ್ದೆಗೆಯಲುಂ ನೆಲನು ಕಾಯ್ದೇರಿ ಬರೆ
ಜಳದಿಂದ ದಿಗನೀಕಗಳು ಬಾಯ್ಬಿಡುತಲಿರೆ
ಕಳವಳಿಸಿ ಹರಿದೀಶರೆಲ್ಲ ನಿಟ್ಟುಸಿರ್ವಿಡಲ್ಕುರಿ ಮಸಗಿತೆಂಬಂದದಿ |
ಬೆಳಗುತಿರಲಲ್ಲಲ್ಲಿ ಕಾಳ್ಗಿಚ್ಚಿನುಪಟಳದಿ
ತೊಳಲುತಿಹ ಕಾಡ್ಗೋಣ ಕರಿತರಕ್ಷುಗಳ ಶಿರ
ಛಿಳಿಛಿಳಿಲೆನುತ್ತ ಬಿಚ್ಚುತ್ತ ಬರೆ ಕಂಗೆಟ್ಟು ಮೊರೆವುವಾ ಬೇಸಗೆಯೊಳು || ೯ ||

ಪರಿಯುತಿಹ ಮರುಮರೀಚಿಕೆಗಳಂ ಜಲಮೆಂದು
ಕರದಿಂದ ಕಲಕಿ ಪುಷ್ಕರದಿಂದ ಪಿಡಿದು ಕೆಲ
ಕರುಗಿ ಕೆಂಡಮನಂಟದಂತೆ ಕರಮಂ ಬಾಯೊಳಿಟ್ಟು ಛೀಳಿಡುತ ಕೂಗಿ |
ಅರುಗುತಿಹ ಕುಂಜರದ ಸೋವಿ ದಂತಾಳಿಗಳ
ಶಿರ ಬಿರಿದೊಗುವ ಮುತ್ತಿನಿಂದೊಂದು ಕರಿಯು ಬಂ
ದುರುತಪಾದಪದಿಂದ ಸಂತಸದಲ್ಲೈದಿ ತಾಂ ಮರುಗುತಿಹುದೇವೇಳ್ವೆನು ||೧೦||

ನೆಳಲರಸಿ ಬಹ ಗಜದ ಮಸ್ತಕಂ ಕಾಯ್ದು ಚಿಳಿ
ಚಿಳಿಲೆನುತ ಪೊರಬೀಳ್ವ ಮುತ್ತ ಜಲಕಣಮೆಂದು
ತೊಳಲಿ ಕಲಕಂಠ ತ್ರೋಟೀಪುಟದೊಳಂ ಪಿಡಿಯೆ ಚಂಚು ಚುರ್ರೆನುತಂಟಲು |
ಬಳಲುತೊಂದೆಡೆಯ ನಿಂದಿರೆ ಗಂಧಹಸ್ತಿಗಳು
ನೆಳಲುಷ್ಣಮಾಗಸದ ಘರ್ಮದಿಂದೊಂದಿ
ಬಳಸಿ ನಿಲೆ ಹರಿಗಳಾ ನೆಳಲೊಳಗೆ ವಿಶ್ರಮಿಸಿ ಬಾಯ್ಬಿಡುವುವೇನೆಂಬೆನು ||೧೧||

ಕೊಡೆವಿಡಿದು ಪೆಡೆಯುನದರಡಿಯು ಮರಿಯನ್ನಿಟ್ಟು
ನಿಡುತರದ ಪೇರುಸಿರ ಗಾಳಿಯಿಂ ತಣ್ಪೆನಿಸು
ತೊಡನಂದು ಮರುಗುತಿರಲುರಗಿ ಮತ್ತೊಂದೆಡೆಯ ಬಲುತರದ ಬಿಸಿಲಿನಿಂದ |
ಪೆಡೆಗಾಯ್ದು ರನ್ನದುಪಟಳಕೆ ತಲೆಯಂ ಕೊಡವು
ತಡಿಗಡಿಗೆ ನೀಲಕಂಠನ ಗರಿಯ ಮರೆಗೊಂಡು
ಮಿಡುಕುತಿಹ ಕುಂಭೀನಸಂಗಳೆಡೆಯಾಟಮೇಂ ಚಿತ್ರತರಮೆಂದೆನಿಪುದೊ ||೧೨||

ಮೇಲಣುಪಟಳ ಧರಾಜ್ವಾಲೆಯಿಂ ಸಾರಗಗ
ಳೇಳದಲ್ಲಲ್ಲಿ ಗುಮಿಗೂಡಿ ಮರಿಗಳ ತಂದು
ಭಾಳದಿಂ ಮರೆಗೈದು ನಾಲಗೆಗಳಂ ಪರಪಿ ತುದಿಯಲೊಸರುವ ಕಣಗಳ |
ಜಾಳದಿಂ ತರ್ಣಕಗಳುಪಚರಿಸಿ ಮರುಗುತೆಳ
ವಾಳೆಯಂದದಿ ಕಂದಿ ಕುಂದಿ ಬಳಲ್ದುಂ ಜೋಲ್ದು
ತಾಳಲಾರದೆ ನಡುಗಿ ಮಿಡುಕುವ ಕುರಂಗಗಳ ತಂಡಂಗಳೆಸದಿರ್ದುವು ||೧೩||

ಗರಿ ಸುಡಲ್ ಪಾರಲಮ್ಮದೆ ನಿಂದ ಪಕ್ಕಿಗಳ
ಚಿರಿಚಿರಿನೆ ಪೊಗೆಸುತ್ತುತುರಿವ ಭಲ್ಲೂಕಗಳ
ನೆರೆಬಿರಿದ ದಂತಾಗ್ರದಿಂದ ಚಿಟಚಿಟಲೆನುತ ಮುತ್ತುಗುಳ್ವ ಕುಂಭಿಗಳನು |
ಶಿರದ ಮಣಿಗಾಯ್ಪಿಂದ ಪೊರಳುತಿಹ ಫಣಿಗಳಂ
ತರಹರಿಸದಲೆ ಕೇಸರಗಳುರಿಗೆ ನಡುಗುತಿಹ
ಹರಿಗಳಲಸಿಕೆಗಳಿನ್ನೇನೆಂಬೆನುಗ್ರತರಬೇಸಗೆಯ ವೈಭವವನು ||೧೪||

ಏಲಾಲವಂಗಕರ್ಪುರಕಲಿತವೀಟಿಕಾ
ಲೀಲಾಧರದೆ ಹೈಮಚಂದನೋತ್ಕಲಿತಹೃದ
ಯಾಲಯಂ ಸುರಭಿಳಿತಕುಸುಮನಿಕರಗಳಾಂತು ಚೂರ್ಣಕುಂತಳಗಳಿಂದೆ |
ತಾಳವೃಂತಾಕಾಂಕ್ಷೆಯಿಂದ ಶೀತಳದ ನೆಲ
ನಾಲಿಂಗನಂಗೈದ ಲಲನಾಸಮಾಜಮಾ
ಕಾಲದೊಳು ಕರಮೆಸೆದುದಲ್ಲಲ್ಲಿ ಯುವಚಿತ್ತನವರಸಾಮೋದಗೊಳಲು ||೧೫||

ತನ್ನಭ್ಯುದಯದಿಂದ ತಾಪಕೀಡಂಮಾಡಿ
ಗನ್ನಗತಕದಿ ಶೋಷಣಂಗೈದ ನಿವ ಮಿತ್ರ
ನೆನ್ನುವಭಿಧಾನದಿಂದಿದು ಕಾಲಗುಣಮಲ್ತೆ ನೇಹಮೇನೆನುತ ಬಂದು |
ಚೆನ್ನಜಾವ್ವನೆಯ ಮುಖ ಚಂದ್ರನಾಶ್ರಯಗೈದು
ವನ್ನೆಗಂ ಕಮಲಂಗಳೊಡಲೊಳಂಟಿದ ರೋಗ
ತನ್ನ ಬಾಧಿಪುದರಣ್ಯಾನೀಕತರುಗಳತಿಹಿತಮೆಂಬುದುಸಿರ್ವಂದದಿ ||೧೬||

ಲಲನಾಜನೋತ್ತುಂಗಪೀನವಕ್ಷೋಜಂಗ
ಳಲಿ ಕರ್ಪುರೋತ್ಕಲಿತವೀಟೀಕದಂಬಕಗ
ಳಲಿ ವಟಚ್ಛಾಯೆಯಲಿ ಶೀತಳಜಲಾಶಯಾಂತರ್ವರ್ತಿತಾಣಗಳಲಿ |
ನೆಲೆಗೈದು ಮರುತ ಪಗೆಯೆಂದರಿತು ಲೋಕಕಂ
ತಲೆದೋರದಲೆ ಶೀತಮಡಗಿರ್ದುದಾಕಾಲ
ದಲಘುಶೌರ್ಯೋನ್ನತಿಯ ಮತ್ತದೇಂ ಬಣ್ಣಿಸುವೆ ಬೇಸಗೆಯ ಪೋರಟೆಯನು||೧೭||

ಇಂದೂಪಲಂಗಳೊತ್ತಂ ತಾಲವೃಂತಂಗ
ಳಿಂದೊಗೆವ ತೆಂಬೆಲರ ತಣ್ಪಿನ ತರುಚ್ಛಾಯು
ದಂದಮಾಂತಿಹ ಶೀತಕದಳಿಗಳ್ ಸೌಧಾಗ್ರಜಾಲಸ್ಥಳಗಳೊಳಿರುವ |
ಕುಂದರದನೆಯರು ಬಯಸುತ್ತ ಬರೆ ಮನಸಿಜನ
ಕುಂದೆನಿಸದಪ್ರತಿಮಶೌರ್ಯ ಬಂಧುವಿಯೋಗಿ
ಸಂದೋಹಮಂ ಕಾಡಲಿಚ್ಛೈಸಿದುದೋ ಯೆನೆ ಬಿಸಿಲ್ ತಲೆದೋರ್ದುದು ||೧೮||

ಪ್ರಳಯರುದ್ರನ ನಿಟಾಲಾಕ್ಷಿ ಸಂಭವಜ್ವಲೋ
ಜ್ವಳವೀತಿಹೋತ್ರಸ್ಫುಲಿಂಗಪಾತನದಿಂದ
ಚಿಳಿಚಿಳಿಲೆನುತ ಬ್ರಹ್ಮಾಂಡಂಗಳೊಡೆವಂತೆ ಖರಕಿರಣನುಪಟಲದೊಳು |
ಕುಲಶೈಲಗಂಡೋಪಲಂಗಳುಂ ಸಿಡಿದು ಬಂ
ದಳಲಿಸುತ್ತಿರೆ ಖಗಮೃಗಂಗಳುಂ ಭೀತಿಯಿಂ
ಚಲಿಸಲಮ್ಮದೆ ಪ್ರತಿಧ್ವನಿಗೊಡುವೊಲಂಬರಂ ಮೊರೆದುವಾ ಬೇಸಗೆಯೊಳು ||೧೯||

ಸತಿಸಹಿತ ಖರಕರಾಘಾತಗೈದಪುವು ಕರಿ
ತತಿಗಳಿದ ಮರ್ದಿಸಲ್ವೇಳ್ಕೆನುತ ಕರಖಡ್ಗ
ಹತಿಯಿಂದ ಮಸ್ತಕವ ಹೊಳಚುವನೊ ಭಾಸ್ಕರನೆನಲ್ಕೆ ಖರಕಿರಣದಿಂದೆ |
ವಿತತಮದದಂತಿದಂತಾಗ್ರಮುಕ್ತಾಫಲಗ
ಳತಿಶಯದೊಳುದುರುತಿರಲುಡುತತಿಗಳಂ ಕಿಳ್ತು
ಕ್ಷಿತಿಯೊಳಂ ನಿಜಸತಿಗೆ ಕೊಟ್ಟನೋ ರವಿಯೆನಲ್ ತೋರ್ದುವಾ ಸಮಯದೊಳಗೆ ||

ಇಂತೆಸೆವ ಕಟುಕಬೇಸಗೆಯೊಳಗೆ ಧರಣಿಜಾ
ಕಾಂತ ತರುನೆಲಳನಾಶ್ರೈಸಿ ಬರುತಲಿರೆ
ದಂತಿಗಪಕೃತಿಯನೆಸಗಿದ ಸೂರಶೌರ್ಯಮಂ ತೊಲಗಿಸುವ ಕಾಲಮೇಘಂ |
ಪಂತಿಗೊಂಡೈತರುವುವೋ ಯೆನಲ್ ಮಂದರಗ
ಳಂತೆಸೆವ ನಿಡುಶರೀರಗಳಿಂದ ಕಳ್ತಲೆಯ
ಸಂತೆಯಂದದಿ ಕಿರಾತರ್ ಬಂದರತಿರಭಸದಿಂದ ತತ್ಕಾಲದೊಳಗೆ ||೨೧||

ತೆಗೆದುಟ್ಟ ಚಲ್ಲಣದ ಬಿಗಿದ ಮದವಾರುಗಳ
ಮೊಗದ ಭಸಿತದ ಮೇಲೆ ಸೊಗಯಿಸುವ ಕಾಡಿಗೆಯ
ಚಿಗುರಿನೊಳ್ ಮೆರವ ಪಾಗುಗಳಲ್ಲಿ ಸಿಕ್ಕಿರುವ ಬಗೆಬಗೆಯ ಚಿಗುರೆಲೆಗಳ |
ಜಿಗಿವ ಪಸುರಂಗಿಗಳ ಗುರುಗುಂಜಿದಂಡೆಗಳ
ನಿಗುರಿಸಿಹ ಮೀಸೆಗಳ ಕೆಂಗಣ್ಣ ಕರ್ಕಶದ
ಸೆಗಳಿಕೆಯ ಕರಹಾಸ ಕುನ್ನಿಗಳ ಕಳಕಳದ ಬೇಡಪಡೆ ನಡೆತಂದುದು ||೨೨||

ಬಿಡುವಲೆಯು ಕಡುವಲೆಯು ಕಣ್ಣಿವಲೆ ಕರ್ತರಿಯ
ತೊಡರುವಲೆ ಬೀಸುವಲೆ ಸೊಕ್ಕು ಜಿಗುರಿಕ್ಕುಗಳ
ತುಡುಕಿರುವ ಗಾಳ ಮತ್ತೇಣಗಿಡುಗಾದಿಗಳ ಪರಿಪರಿಯ ಸಾಧನಗಳ |
ಸಡಗರಿಸಿ ತಮತಮಗೆ ಸಿಡಿಲೇಳ್ಗೆ ರಭಸದಿಂ
ಘುಡುಘುಡಿಸುತೆಡೆಗೆಡೆಗೆ ನೋಟಕರ ಕಣ್ಗುಡ್ಡೆ
ಸಿಡಿವಂತೆ ಧಡಧಡಿಸಿ ಬಂದುದು ಕಿರಾತಪಡೆ ಕರ್ಬೊನ್ನ ಬೊಂಬೆಗಳೆನೆ ||೨೩||

ಮುಂದೆಸೆದುದೊಂದು ಮಹದಾರಣ್ಯಗಜಯೂಥ
ದಿಂದ ಘೀಳಿನಿಪ ರವ ಕಾಡ್ಕೋಣ ನಿಚಯಗಳ
ಬಂಧುರಧ್ವನಿಗಳಡಿಗಡಿಗೆಸೆಯೆ ಶಾರ್ದೂಲಜೃಂಭಣಂ ದಂಭಯುತದ |
ಸಿಂಧುರಮದಾಪಹ ವೃಕಂಗಳಿಂದಲ್ಲಲ್ಲಿ
ಮುಂದುವರಿವರಿವರಿವ ಶ್ಯೇನಗೃಧ್ರಾದಿಗಳ
ವೃಂದದಿಂ ಭೈರವನ ಮಂದಿರಮದೆಂಬಂತೆ ತೋರಿತತಿಭೀಷಣಮೆನೆ ||೨೪||

ಜಂಭಾರಿದಂಭೋಳಿಸಂಕಾಶ ಪಂಚಾಸ್ಯ
ಡಿಂಬೋರುನಖದಳಿತಮದಕಲಿತಕುಂಭೀಂದ್ರ
ಕುಂಭಸ್ಥಳೋದ್ಗಳಿತ ಮುಕ್ತಾಫಲಶ್ರೇಣಿ ಕಂಗೆಸೆದುದೊಂದೆಡೆಯೊಳು |
ಜಂಭದುದ್ದಂಭದಾರ್ಭಟೆಯ ಶಬರರ ಘೋರ
ದಾಂಭೀಕಭೀಕರಕ್ಕಳ್ಳಿ ಬಳ್ಕುತಲಲ್ಲಿ
ಸ್ತಂಭಿಸಿಹ ಶಾರ್ದೂಲಯುತಕಾನನಂ ಕಣ್ಗೆ ಕಾಣಿಸಿದುದೇನೆಂಬೆನು ||೨೫||

ಗಂಡಕಂಡೂತಿ[ವಾರಣ]ವಾರಣೋತ್ಕಿರ
ತ್ಪುಂಡರೀಕದಿ ರೀಣಸುಮನೋರಜಃಪುಂಜ
ಪಾಂಡಿತ್ಯಮದಮಿಳಿಂದಗಳ ಸುಸ್ವನವೊಂದು ದೆಸೆಯ ಪಾಡುತ್ತ ಬರುವ |
ಗಂಡುಡೆಯ ಕೈರಾತಕನ್ನಿಕಾಕಬರಿಯು
ದ್ದಂಡಸುಮ ಸೌರಭ್ಯಮೇದುರಮರುತ್ತರುಣ
ತಂಡಂಗಳಿಂದಲಾ ಕಾನನಂ ಶೃಂಗಾರಕಾನನಂ ಕಣ್ಗೆಸೆದುದು ||೨೬||

ಕಳಿತು ಭೂತಳಕುದುರಿಯೊಡೆದ ತಾಳಾಫಲದ
ಲಿಳಿದ ರಸಮುಂ ಕೊಂಡು ಮದವೇರಿ ಮುಂಗಡೆಯು
ತೊಳಪ ಬೆಳ್ಗಲ್ಲುಗಳ ಪೆಣ್ಗಳಿಂದಪ್ಪುತಂ ಕೆಲಬಲದ ನೋಡುತೆಸೆವ |
ಪಳುಕಿನುಪಲಂಗಳೊಳು ತೋರ್ಪ ನಿಜಬಿಂಬಗಳ
ಸೆಳೆದು ಪ್ರತಿಭಟನೆಂದು ಪಲ್ಗಿರಿದು ಚೀರುತಿಹ
ಪಲವಗೆಯ ಕೋಡಗಗಳೊಂದೆಸೆಯಲೆಸೆದಿಹುವು ಪುರ್ಬುಗಳ ಗಂಟಿಕ್ಕುತ ||೨೭||

ಸುತ್ತಿ ಮಸ್ತಕಕೆ ಪೆರ್ಬಳ್ಳಿಗಳ ಮುಂದುವರಿ
ದೊತ್ತಿ ಕತ್ತಲೆಯಂತೆ ಮುತ್ತಿ ಬಹ ಕೈರಾತ
ಮೊತ್ತಮುಂ ಕಂಡಳ್ಕಿ ಬಳ್ಕಿ ಕಾಲ್ಗುಂದುತುಂ ಕಂದುತಂ ಮುಂದರಿಯದೆ |
ತತ್ತರಂಗೊಳುತ ಬಾಯ್ಬಿಡುತ ನೆಲನಂಟಿರ್ಪ
ಕುತ್ತಿಗೆಯನಿಟ್ಟುಸಿರ ಬೇಳೆನುತ ಮೊರೆವ ಮಿಗ
ಮೆತ್ತನೋಡಿದರಮಿತಮಾಗಿ ಕಂಗೊಳಿಸುತಿಹುದು ವಚ್ಚರಿಯನೇನೆಂಬೆನು ||೨೮||

ಕುಂಭೀನಸಂಗಳಂ ಪಿಡಿದು ವಲಯಾಕೃತಿಯ
ಡಂಬರಂಗೈದು ನಿಜಕರದಿಂದ ಪಿಡಿದಿರುವ
ಕುಂಭೀಂದ್ರಗಳ ಪಿಡಿದು ಮತ್ತಾಗಸಕ್ಕಡರ್ದ ಶರಭಂಗಳೊಂದೆಡೆಯೊಳು |
ಶುಂಭತ್ಪದಾಹತಿಯುಲೆಡೆಯಾಡದತಿಮೌನ
ಗುಂಭಿತದ ಶರಭಗಳ ಸಿಡಿದೆತ್ತಿಕೊಂಡೊಯ್ಯು
ತಂಬರದಿ ಚರಿಪ ಭೇರುಂಡಗಳ ತಿಂಥಿಣಿಗಳೊಂದೆಸೆಯ ಕಂಗೊಳಿಪುವು ||೨೯||

ಮಲೆತು ವ್ಯೆಮುರಿದು ಮೇಲ್ವರಿದು ಖುರಶೃಂಗಗಳಿ
ನಲೆಯೆ ಖಣಿಖಟಿಲೆಂಬ ಕಠಿಣ ಖುರಪದಹತಿಗೆ
ನೆಲನಳುಕೆ ಪೆಣಗುತಿಹ ಕಾಡ್ಕೋಣಗಳ ಪಿಂತೆ ಕಾಡುತಿಹ ಸೂಕರಗಳ |
ಚಲಿಸದಂತೆಡೆಬಲದಿ ಸುತ್ತಿ ವೃಷಣಂಗಳಂ
ಬಲಿದು ಕೀಳುವ ರಿಕ್ಷ ಮಧ್ಯಪ್ರದೇಶದೊಳ್
ಸಿಲುಕಿ ಪಲ್ಗಿರಿದರಚಿ ಚೀರ್ವ್ವವಂಚಕಗಳೊಂದೆಡೆಯೆ ಕಣ್ಗೆಸೆಯತಿರಲು ||೩೦||

ಸಿಡಿಲರವಕಿಮ್ಮಡಿಸಿ ಘುಡುಘುಡಿಸುತಾರ್ಭಟಿಸಿ
ತುಡುಕಿ ಮದಹಸ್ತಿಗಳ ಕುಂಭಸ್ಥಳಂಗಳಂ
ಪೊಡೆಯಲುದುರುವ ರಕ್ತತನಿಗಂಡಮುತ್ತುಗಳ ತಂಡ ನೆಲಕುದುರುತಿರಲು |
ತಡೆಯದಾ ಸಿಂಗಗಳ ಭಂಗಿಸುವರವ್ವಳಿಸಿ
ನಡೆದು ಬಹ ಶರಭಗಳ ನೋಡಿ ಚೀರಲ್ ಕಂಡು
ನಡುಗಿ ನೆಲಕೊರಗುತಿಹ ಶಾರ್ದೂಲವಿಂಡುಗಳದೊಂದೆಸೆಯೆ ಕಣ್ಗೆಸೆದುದು ||೩೧||

ಮರಬಿಲ್ಗಳಿಂದ ಕೂರ್ಗಣೆಗಳಂ ತೆಗೆದೆಚ್ಚು
ಕರಿಗಳಂ ಕೆಡೆವುತಿರಲೊರ್ವ ಶಬರಂ ತನ್ನ
ಕರದಿಂದ ನೇವರಿಸಿ ಬಿಡಲು ಬಾಲವನೊದರಿ ಕೂರ್ಗಣೆಯ ಪಿಂದಿಕ್ಕುತ |
ಮರುತ ವೇಗದೊಳ್ಯೆದಿ ಪುಲಿಯೆರಳೆ ಕಾಡ್ಕೋಣ
ಕರಡಿಸೂಕರಗಳಂ ಮೇಲ್ವಾಯ್ದು ವಿಕ್ರಮದಿ
ತುರುಗುತಿಹ ಸಾರಮೇಯಗಳ ಭೀಕರರುತಗಳೊಂದೆಡೆಯೆ ತೋರುತಿಹುವು ||೩೨||

ರುರು ವೃಕಂ ಜಂಬುಕಂ ಶಶಕ ಮಾರ್ಜಾಲ ಕಪಿ
ಕರಿ ಗವಯ ಭೇರುಂಡ ಸ್ಯೆರಿಭಂ ಪುಲಿ ಯೆರಳೆ
ಹರಿಯು ಭಲ್ಲೂಕಮುಂ ಶರಭಂಗಳೆನಿಪ ಮೃಗವಗಣಿತದಿ ಕಂಗೊಳಿಸಿರೆ |
ಗರುಡ ಗೀಜಗ ನಂಜೆ ಕೊಂಚೆ ಪಾರಾವತಂ
ಪರಪುಟ್ಟ ಕಬ್ಬಕ್ಕಿ ಶಕುನಿ ತಿತ್ತಿರಿ ಕಂಕ
ಚರಣಾಯುಧಂ ಕೋಕ ಪೆರ್ಬಕ್ಕಿ ಶಿಖಿಗಳುಂ ತೋರ್ದುವಾ ಕಾನನದೊಳು ||೩೩||

ಜರಠದ್ಭುಜಂಗಮದ ಫೂತ್ಕೃತಿಯದೊಂದೆಡೆಯೆ
ಭರದಿ ಹರ್ಯಕ್ಷ ಭಾತ್ಕೃತಿಯು ಮತ್ತೊಂದೆಡೆಯೆ
ಕರಿಸಮುದಯೋದಗ್ರಘೀತ್ಕೃತಿಯದೊಂದೆಡೆಯಲೆಡೆಯಾಡುತಲ್ಲಲ್ಲಿಗೆ |
ಚರಿಸುತಿಹ ಮರ್ಕಟದ ಚೀತ್ಕೃತಿಗಳೊಂದೆಡೆಯ
ಲುರುತರಶಕುಂತಚೀತ್ಕೃತಿಗಳಿಂದಾ ವನಂ
ಪರಿಪರಿಯಲಂಕೃತಂ ಭೀಂಕೃತವ ತಾಳ್ತೆಸೆವುದೇನೆಂಬುದಚ್ಚರಿಯನು ||೩೪||

ಇಂತಮಿತ ಗಹನಮಂ ನೋಡುತ್ತ ಕೈರಾತ
ಸಂತೆ ಸಂತಸ ಪೆರ್ಚಿ ಮುಂಗಾರ ಮೇಘಗಳ
ಪಂತಿಯಂದದಿ ಮೊರೆಯಲೆಣ್ದೆಸೆಯು ತಲ್ಲಣಿಸೆ ಬೆದರಿ ಮೃಗಪಕ್ಷಿಕುಲವು |
ಪಿಂತೆಗದು ನಾಲ್ದೆಸೆಗೆ ಪೆರಸಾರಲಲ್ಲಲ್ಲಿ
ನಿಂತು ನಿಂತೀಕ್ಷಿಸುತ ಸಿಳ್ಳಿಕ್ಕಿ ಕೂಗಿಡುತ
ಮುಂತೈದುತಿಹ ಸಾರಮೇಯಗಳ ತಿಂಥಿಣಿಗಳತಿಭೀಕರಂಬೆತ್ತುವು ||೩೫||

ಇದೆ ಮೃಗೇಂದ್ರಂ ಪೋದ ಹಾದಿ ನೋಡೆಲವೊ ಮ
ತ್ತಿದೆ ಕರಿಗ್ರಾಮಣಿಗಳೈದಿರುವ ಪಂಥಾನ
ಮಿದೆ ತರಕ್ಷುಗಳೋಡಿ ನಿಲ್ತ ಪಜ್ಜೆಯ ಕುರುಪು ಮತ್ತೀಕಡೆಯ ದಾರಿಯು।
ಇದೆಕೊ ನೋಡೆಲಗೆ ಚಮರೀಮೃಗಂಗಳ ಪದಗ
ಳಿದೆ ಮೃಗಾದನನಿರ್ದ ತಾಣ ನೋಡೆಲವೊ ಮಗು
ಳಿದೆ ಘೃಷ್ಟಿ ಮಂಡಿಸಿದ ನೆಲನೆನುತ ಪುಡುಕುತಂ ಶಬರಪಡೆ ನಡೆತಂದುದು ||೩೬||

ಮರನೇರಿ ಯೊರ್ವ ನಿಟ್ಟಿಸೆ ಮಿಗದ ಪಜ್ಜೆಗಳ
ನರಿತೊರ್ವ ಮೆಳೆಗಳಂ ನುಸುಳುತಿರೆ ಮತ್ತೊರ್ವ
ಕರಿ ಮುರಿದ ಸಲ್ಲಕೀಪಲ್ಲವಗಳಂ ನೋಡಿ ಕುರುಪಿಡಿದು ನಡೆಯುತಿರಲು।
ತ್ವರಿತದಿಂದೊರ್ವ ಮುಂಬರಿದು ಮರದುದಿಯಡರಿ
ಕರೆದು ನಾಯ್ಗಳ ಸವರಿ ಸರಿಸದೊಳ್ ಪಾರುತಿಹ
ಯೆರಳೆಯಂ ಬೆಂಬತ್ತಿ ಬೆರೆಮದೊಳ್ಪಕ್ಕಿಗಳು ದಿಕ್ಕುದಿಕ್ಕಡರ್ವಂದದಿ ||೩೭||

ತೆರಳುತಿಹ ಪತ್ರಿಗಳ ನೋಡುತಿಹ ಹಸ್ತಿಗಳ
ನರಳುತಿಹ ಕರಡಿಗಳ ನಡುಗುವ ತರಕ್ಷುಗಳ
ಮರೆಗೊಂಬ ಶಶಕಗಳ ಪಾರ್ವ ಪಕ್ಕಿಗಳ ನೆಲಕೊರಗುತಿಹ ಖಡ್ಗಿಗಳನು।
ತರಹರಿಸದುಲ್ಲಂಘಿಸುವ ಕೇಸರಿಗಳ ಮುಂ
ಬರಿದು ಮೆಳೆಯೊಳ್ ಪೊಳ್ಳೊಗುವ ಸೂಕಾರಾದಿಗಳ ತಲೆ
ಬಿರಿವಂತೆ ಕೂಗುವಾರ್ಭಟೆಯ ಬೇಡರ ರವಂ ತೀವಿದುದು ದಿಕ್ತಟವನು ||೩೮||

ನಡೆಯೆಲವೊ ತೊಡು ಸರಲ ಬಿಡು ನಾಯ್ಗಳಂ ಕಂಗ
ಳೊಡೆಯೆಚ್ಚು ಕೆಡಪು ಬೊಬ್ಬಿಡುವನೇಕಪಗಳಂ
ಕೊಡಹಿ ಪುಲ್ಲೆಗಳ ಪಿಡಿ ಮೊಲನ ಮುಂಬರಿದಟ್ಟು ಮೃಗದ ಪಜ್ಜೆಯನು ಮೆಟ್ಟು।
ಕಡಿ ಪುಲಿಯ ಖಡ್ಗಿಗಳ ತುಡುಕು ಭಲ್ಲೆಯದಿಂದ
ಲಿಡು ಚಮರಿಯಂ ಚಿಕ್ಕಗಿಡವನಡರುವ ನರಿಯ
ನಿಡಿ ಯೆನುತಲಲ್ಲಲ್ಲಿ ಕೂಗುವಾರ್ಭಟಿ ಕವಿದುದಾ ಕಾನನಾಂತರದೊಳು ||೩೯||

ನಿಡುಗುರುಳ ಚಮರಿಗಳಿಗೊಡನೆ ಶುಂಡಾಲಗಳ
ಪಡೆಗೆ ಕರಮಂ ಪೆಂಪುವಡೆದ ಮೃಗಸಂತತಿಗೆ
ಮಿಡಿವೆರಳ ಪುಲಿಗೆ ರಸನೆಯ ಪುಲ್ಲೆಗಂ ಕಣ್ಣ ಸನ್ನೆಗಳ ತೋರುತಿರುವ।
ಕೊಡಮೊಲೆಯ ನಾರಿಯರ ಪಂದಿಗಂ ಮೊಳಕೈಯ
ಬಿಡದೆ ಸೂಚನೆಗೆಯ್ಯೆ ಪೊಂಜಮತ್ತಲುಕದುರೆ
ನಿಡುಸರಲನೆಚ್ಚು ಕೆಡಪುವರೊಂದು ತಾಣದೊಳ್ ಬೇಡರಾ ಬೇಂಟೆಯೊಳಗೆ ||೪೦||

ಚಿಟಕಿಟ್ಟು ಮೈದಡಹಿ ಹಾಸಗಳ ಕಳಚುತ್ತೆ
ಪಟುಭೀಕರದೊಳಿರುವ ಶಾರ್ದೂಲಮಂ ತೋರೆ
ತುಟಿಗಳಂ ಸವರುತ್ತೆ ಬೆಟ್ಟುಗಂಗಳ್ ಬೆದರ್ವ ಮನದಿಂದ ಕಿವಿಯ ನಿಮಿರಿ।
ತಟತಟನೆ ಬಾಲಮಂ ಕೊಡಹಿ ನಿಟ್ಟುಸಿರ್ವಿಡುತ
ಕುಟಜಗಳ್ ಪುನೆಗೆಯು ತಾಗಾರ್ದು ಕೋಪದಾ
ಭಟೆಯಿಂದ ಬೆಂಬತ್ತಿ ಪಿಡಿದರ್ಪ ಸೊಣಕಗಳ ಸಂತೆಗಳ್ ಕಂಗೊಳಿಪುವು ||೪೧||

ಮುಂಗಾಲ್ಗಳಿಂ ಧರೆಯನರೆದು ಕಡುಗೋಪದಿಂ
ಹಿಂಗಡೆಯು ಕುಡಿವಾಲಗಳನೊದರಿ ಕಿವಿಗಳಂ
ಸಂತಸಂಗೊಳಿಸಿ ನಡನಡುಗಿ ಕೂಗಿಡುತಲುಂ ಬೆದರಿ ನಾಲ್ದೆಸೆಗೋಡುವ |
ಸಿಂಗಮಂ ಬೆಂಬತ್ತಿ ಪುಲಿಯ ಮಸ್ತಕಕಡರಿ
ತುಂಗಘೃಷ್ಟಿಯನಂಟೆ ಶಶಕಗಳ ಮುರಿದಡಸಿ
ಮುಂಗಡೆಯ ಪುಲ್ಲೆಗಳ ಕಾಲ್ವಿಡಿದು ಕೆಡೆಪುತಿಹ ಸಾರಮೇಯಗಳೆಸೆದುವು ||೪೨||

ಕಿವಿಯಿಡುವ ದಾಡೆಗಳ ನರೆದು ಕಣ್ಗಳ ಬಿಟ್ಟು
ಪೊಡೆದು ಪೊಡವಿಯನು ತುದಿವದನದಿಂ ಪಲ್ಗಳಂ
ಕಡಿದು ತನುವಂ ತೂಗಿ ರೋಮಗಳ ನಿಗುರಿಸುತ ಹೂಂಕರಿಸಿ ನಾಲ್ದೆಸೆಯನು |
ಬಿಡದೆ ನೋಡುತಲೆ ಬಾಯ್ದುಪ್ಪರಿದು ಮುಂಬರಿದು
ಕಡುಗೋಪದಿಂ ತೂರಿ ಬರುವ ನಾಯ್ಗಳ ಕೊಡಪಿ
ಕೆಡಪುತಿಹ ಪಂದಿಯಂ ಶಿರ ಬಿರಿವೊಲೆಚ್ಚು ಮತ್ತೊಂದೆಡೆಯೊಳಂ ಶಬರನು ||೪೩||

ಪೋಗದಿರು ನಿಲ್ಲೆಲೆಗೆ ಪಿಂದಿರುಗೆನುತ್ತಲುಂ
ಕೂಗಿದಾ ದನಿಗೇಳುತನ್ನೆಗಂ ಪಿಂದಿರಿಗಿ
ತೂಗಿ ಚರಣವ ದಾಡೆಗಳ ನರೆದು ಕಂಗಳಿಂದಿಂಗಳವ ಮುಕ್ಕುಳಿಸುತ |
ಲಾಗುವೇಗದಿ ಯಮುನ ಸೈರಿಭದ ಮೆಯ್ವೋಲೆ
ತಾಗಲ್ಕೆ ಬಹ ವರಾಹವ ವನೇಚರನೊರ್ವ
ಬೇಗ ಕೂರ್ಗಣೆಯಿಂದಲೆಚ್ಚು ಕೆಡೆಪಿದನೇನ ಪೇಳ್ವೆ ಕರಲಾಘವವನು ||೪೪||

ಕಂಗಳಿರೆ ಕೆಂಡದೋಲ್ ಮಗುಳೆ ಮಗುಳಾಕಳಿಸಿ
ಮುಂಗಾಲ್ಗಳಂ ಚಾಚಿ ಮತ್ತಪರಪದಗಳಂ
ಹಿಂಗಡೆಗೆ ಪರೆಪಿ ನಾಲಗೆಯೊಳುದುರುವ ಪನಿಯ ಘೋರತರ ದಂಷ್ಟ್ರಂಗಳ |
ಇಂಗಾಲಚಯಚಿಮ್ಮುತಾಂಗದಿಂದ ತರಕ್ಷು
ಸಂಗಡಿತಬಹುಳಮಶುಕಸಮಾವೃತ? ಶಮನ
ಡಿಂಗರಿಗನಂತೊಂದು ಮೆಳೆಯೊಳಂ ಕಂಗೆಸೆದುದೇನೆಂಬೆ ಘುಡುಘುಡಿಸುತ ||೪೫||

ಮೊರೆವುತೈತಹ ಶುನಿಗಳಾರ್ಭಟೆಗೆ ಕೋಪದಿಂ
ಘುರಿಘುರಿನೆ ಪಲ್ಮೊರೆದು ಪೊರಬಿರ್ದು ಘರ್ಜಿಸುತೆ
ಧರಣಿಯೊಳಿಗೆಳೆವ ಲಾಂಗೂಲಮಂ ಮಸ್ತಕದಿ ಕುಂಡಲಿತಮೆನಿಸಿ ಬರುವ |
ಬರವ ನಿಟ್ಟಿಸುತಾರ್ದು ತರವಾರಿಯಂ ಸೆಳೆದು
ಸರಿಸದೊಳ್ಮನಗೊಳದದನು ಪೊಡೆಯಲ್ಕವನ
ಹರುಷದಿಂ ಕೈರಾತಿ ಯಪ್ಪಿದಳ್ ಜಯಲಕುಮಿ ಭುಜವನಪ್ಪುವ ತೆರದೊಳು ||೪೬||

ಕುತ್ತಿ ಕೊರಳಂ ಕಿವಿಗಳೆತ್ತೆತ್ತಲಲುಗಿಸದೆ
ಮತ್ತೆ ಬಾಲವ ನೆಲದೊಳೊತ್ತೆಳೆವುತಂ ಪದವ
ಮೆತ್ತಮಿಡುತುಸಿರ್ವಿಡದೆ ಪೊಂಜಿನೊಳ್ ಶಾರ್ದೂಲಮೊಂದು ಮುಂಗಡೆಯ ಮೆಳೆಯ|
ಒತ್ತಿನೊಳು ಮೇವ ಮೃಗಕವ್ವಳಿಸುತಾರ್ದು ಮಗು
ಳೊತ್ತಿ ಪಿಡಿದುಂ ಕೊಡಪಿ ಪಿಂಗಡೆಗೆ ಬೀಸೆಚ್ಚು
ಮತ್ತರುಣಜಲವ ಪೀರಿದುದೊಂದುತಾಣದೊಳ್ ಶಬರ ಕಂಡೆಚ್ಚಾರ್ದನು ||೪೭||

ಇದಿರೊಳಗೆ ನಿಂದು ಘರ್ಜಿಪ ತರಕ್ಷುವ ಕಂಡು
ಕದಳಿಯಂದದಿ ನಡುಗಿ ಕಂಗೆಟ್ಟು ಬಾಯ್ಬಿಡುವ
ಸುದತಿಯಂ ಬಿಗಿದಪ್ಪಿ ಸಂತೈಸಿ ಖಡುಗಮಂ ಝಡಿತೆಯೊಳ್ ಪೊರೆಯಿನುಗಿದು |
ಪದಗಳೇಳೆಂಟರೊಳ್ ಪಂಥಾನಮಧ್ಯದೊಳ್
ಸದೆದು ಕೆಡಪಿರ್ದ ಪೆರ್ಬುಲಿಯನರೆನಿಮಿಷದೊಳ್
ಕದನಮುಪಶಾಮ್ಯಗಳು ಕಾಂತಾಪ್ರಸಾದಮೆಂದಿಳೆಗೆ ತೋರ್ಪಂತೊರ್ವನು ||೪೮||

ಮುನಿದು ಮೊಗಮಂ ನೋಡದನುನಯಕ್ಕೊಳಗಾಗ
ದನುದಿನಂ ಬಳಲಿಸುವ ಬೇಡಿತಿ ಮೃಗಾದನದ
ಘನರವಕ್ಕಳುಕಿ ಬಂದಪ್ಪೆ ಶಬರಂ ಮನೋರಥದೇಳ್ಗೆ ಸಾರಿತೆನುತ |
ಮನದ ಹರ್ಷದಿ ಪೀನಕುಚದ ಪ್ರತಿಮಲ್ಲಂಗ
ಳನು ತಾಳ್ದ ಕುಂಭಿಯಂ ಕೋಲಿಂದ ಕೆಡೆಪುತಾ
ವನಿತೆಯುಪಕಾರಕುಪಕಾರಮನ್ನೆಸಗಿದಂ ಭಯ ಸುಖದ ಬೀಜಮೆನಲು ||೪೯||

ಪಿಂದುಳಿದ ದಕ್ಷಿಣದ ಪ್ರಪದ ಮುಂಗಡೆಯೊಳಂ
ಪೊಂದಿಸಿದ ಚರಣ ಕೊಂಕಿದ ಕೊರಲ್ ನಡುಗೆ ನಡು
ಮುಂದೆಸೆವ ದ್ವೀಪಿಯಂ ಕುರುಪಿಟ್ಟು ನಿಟ್ಟಿಸುತಲಾರ್ದು ಬಿಲ್ಗೊಂಡು ಜವದಿ |
ಚೆಂದದ ಕಟಾಕ್ಷದಗ್ರದೊಳು ನಿಜಕೂರ್ಗಣೆಗ
ಳಿಂದ ಕೆಡೆಪಿದಳೊ ಕಣ್ಗೂಡದೆನೆ ಪುಲಿಯನುಂ
ಕುಂದಿಸಿದ ಶಬರಿಯಂ ಕಂಡಪ್ಪಿದಂ ಭಿಲ್ಲ ಬಿಲ್ಲ ಕೆಲಸಾರ್ಚಿ ನಗುತೆ ||೫೦||

ಮೆಳೆಯಿಂದ ಪೊರಬಿರ್ದು ಗರ್ಜಿಸುತ ಮುಂಬರಿದು
ಕಳಕಳಿಪ ಪುಲಿಯನುಂ ಕಂಡು ಕಡುಗೋಪದಿಂ
ಚಳಕದಿಂ ಕಂಬಳಿಯನೆಡಗೈಗೆ ಸುತ್ತುತಂ ಬಲಗೈಲಿ ಪರಶುವಿಡಿದು |
ಮೊಳಕಾಲನೂರಿ ಮಂಡಿಯ ಬಲಿದು ಮೇಲ್ವರಿದು
ತಲೆಗೆ ಲಂಘಿಸಿ ಬರ್ಪ ಪುಲಿಯ ಮಸ್ತಕವನ್ನು
ಹೊಳಚಿದಂ ಮುರಿಗೆಯಂ ಬಾಯ್ಗಿಡಿದು ಮತ್ತೊರ್ವ ಭಳಿರೆನ್ನೆ ಮನದನ್ನಳು ||೫೧||

ತರುಣಿಯೂರುಗಳಿಗುಪಮಿತಮಾದ ಕರಮೊಲೆದು
ಬರುವ ಕರಿಗಳನರ್ಧಚಂದ್ರಶರದಿಂದಿಡಲ್
ಬರಿಯೆ ಮಸ್ತಕ ಧರೆಗುರುಳ್ವ ರೋಹಿತಕಲಿತ ಮುಕ್ತಾಫಲಂಗಳಿಂದೆ |
ಧರಣಿ ಕಂಗೊಳಿಸಿತ್ತು ಪಿತೃಪ್ರಸೂರಾಗದಿಂ
ಮೆರವ ತಾರಕೆಗಳಾಂತೆಸೆವ ವಾರುಣಿಯಂತೆ
ಕರಿಯಟ್ಟಿ ಕರ್ಗತ್ತಲೆಯೊಳಲ್ಲಿ ಕುಡಿವರುಣಜಲಜಂತುಗಳ ಮಾಳ್ಕೆಯೊಳ್ ||೫೨||

ಕುಟಜದೆಡೆಯೊಳ್ ಕ್ರೀಡೆಗೈತಂದು ಘರ್ಜಿಸುತೆ
ಪುಟನೆಗೆದು ಪುಷ್ಕರದಿ ಪುಷ್ಪಶಾಖೆಗಳ ಸಂ
ಘಟಿತಗೈವಂತಿರಲದೊರ್ವ ಭಿಲ್ಲಂ ಬಿಲ್ಲನೆತ್ತಿ ಕೂರ್ಗಣೆಯೊಳಿಡಲು |
ತಟಹಾಯದಲೆ ಸಿಲ್ಕಿ ನಿಲೆ ಕೆಂಗರಿಯುದರ
ಕಟತಟಪ್ರಸರಮಾಂತೆಸೆಯೆ ಪಕ್ಕಗಳಾಂತ
ಪಟುನೀಲಗಿರಿಯಣುಗನಂತೊಂದು ತಾಣದೊಳ್ ಕಂಗೊಳಿಸಿತಚ್ಚರಿಯೆನೆ ||೫೩||

ನೀಲಗಿರಿ ತಳೆದು ವಿಶ್ವಾಕಾರಮಂ ಧರೆಗೆ
ಲೀಲೆಯಿಂದ್ಯೆದಿ ಶತವೃಷ್ಟಿಯುಂಬಿಡೆ ದಂತಿ
ಜಾಲ ಕಟತಟದೆಡೆಯ್ಯುಲ್ಲರುಣನಿರ್ಝರ ಪರಿಯೆ ಮುಕ್ತೆ ಪನಿಯಂತೆಸೆಯಲು |
ಮೇಲೆ ಪುಟನೆಗೆದಾರ್ದು ನೆಗೆವ ಪುಲ್ಲಿಯನೊರ್ವ
ಕೋಲಿಂದಲಿಡಲದುವೆ ಪಿಂದಿರುಗಿ ಮಸ್ತಕದ
ಮೇಲೆ ಕುಪ್ಪಳಿಸೆ ಕೆಡೆದಂ ಬೇಡ ಪೆರರ ಕೊಲೆಯಾತ್ಮನಾಶನಮುದಲ್ತೆ ||೫೪||

ಪಸಲೆಯೆಡೆಗೈತಂದ ಪಸುಪುಲ್ಲೆಯಕ್ಷಿಗಳ
ಪೊಸಬೇಟಮಂ ಕಂಡು ಪಾರ್ದು ತನ್ನಯ ಕಂಗ
ಳೆಸಕಮಂ ತಾಳ್ದಿರುವುದೆನುತ ಕಿನಿಸಿಂದಿಟ್ಟು ಕೆಡೆಪುತಿರೆ ಕೈರಾತಿಯು |
ವಸುಧೆಗಂ ಕೆಡೆಯಲದು ಕರಚಿತ್ರಮಾದುದೇಂ
ಬೆಸುಗೆಯಿಂದೆಚ್ಚು ಕೆಡೆಪಿದಳೊ ಚಟುಲಾಪಾಂಗ
ಗಸಣಿಯಿಂ ಕೆಡಪಿದಳೊ ಕಾಣಲಸದಳಮೆನಲ್ ಮತ್ತೊಂದು ತಾಣದೊಳಗೆ ||೫೫||

ಇರದೊಂದನೊಂದಡರಿ ಪರಿಪರಿಯ ಲೀಲೆಯಿಂ
ಸ್ಮರಸಂಗರಂಗೈವ ಪುಲ್ಲೆಗಳ ಶಬರ ಕಂ
ಡಿರದೆಸೆಯಲ್ಕೆತರುತಲಿರೆ ಮದನ ಕೋಪದಿಂದೆಸೆಯಲ್ ಶಿಲೀಮುಖಗಳು |
ಭರದಿಂದಲೆದೆ ನಡುಗಿ ಬಂದೊಂದು ಪಸುರ್ವೆಳೆಯ
ಮರೆಗೊಂಡು ಮಾನಿನಿಯ ಚರಣಕೆರಗುತ ಮುದದಿ
ನೆರೆದ ಮನ್ಮಥನ ಸಂಗರವ ಜಯಿಸಲ್ಕೊರ್ವಗಾದೊಡಂ ಸಾಧ್ಯಮಹುದೆ ||೫೬||

ಕಾನನದ ಪೂಗೊಂಚಲಿಟ್ಟು ಸೋರ್ಮುಡಿಗೆ ಮ
ತ್ತಾನನಕೆ ಮೃಗಮದದ ತಿಲಕವನ್ನೊಸೆದಿಟ್ಟು
ಸಾನಂದದಿಂ ಪಲ್ಲವಂಗಳಂ ಕಿವಿಯೆಡೆಗೆ ಸಾರ್ಚಿ ಮತ್ತೇಭಗಳಿತಾ |
ನೂನಮುಕ್ತಾಹಾರಗಳನಲಂಕೃತಿಗೆಯ್ದು
ಜೇನನುಣಲಿತ್ತು ತಕ್ಕೈಸಿ ಸಂತಸದಿಂದ
ಮಾನಿನಿಯ ಕುಸ್ತರಿಸಿ ಮತ್ತೊಂದು ತಾಣದೊಳ್ ಭಿಲ್ಲನುಲ್ಲಸವೆರೆದನು ||೫೭||

ದಂತದೋಲೆಗಳ ಸುಲಿಪಲ್ಲ ಸೋರ್ಮುಡಿಯ ಕರಿ
ದಂತಾಗ್ರಮುತ್ತಿನೇಕಾವಳಿಯ ಕಪ್ಪುರವ
ನಾಂತೆಸವ ನುಣ್ಬಾಣೆಯ ಶ್ರವಣಭೂಷಣಮೆನಿಪ ಕುವಲಯದ ಕುಸುಮಗಳನು |
ಪಂತಿಗೈದೆಸೆವ ಗುರುಗುಂಜಿಗಳ ತೊಡವುಗಳ
ನಾಂತೆಸೆವ ದಂಡೆಗಳ ಪುಲ್ಕಂಕಣಂಗಳಿಂ
ಮುಂತೊಂದೆಡೆಯೆ ತೋರ್ದಳಾ ಪುಳಿಂದಿಯು ಬನದ ದಾದಿಯಹುದೆಂಬಂದದಿ ||೫೮||

ಗಂಡಮಂಡಲದಿ ಬೆಳಗುವ ದಂತದೋಲೆಗಳ
ಮಿಂಡೆದ್ದು ಕುಚದೆಡೆಯ ನಟಿಸುತಿಹ ದಂಡೆಗಳ
ನಂಡಲೆಯುತಡಿಗಡಿಗೆ ಮುಣಮುಣರೆನುತ್ತುಲಿವ ಸಂಕುವಳೆಗಳ ರಭಸದಿ |
ಕೊಂಡೊನಕೆಗಳ ಸುಪ್ಪಿಸುಪ್ಪೆನುತ್ತಂದು ಮುಖ
ಗಂಡತಲಗಳೊಳೊರೆವ ಬೆಮರ ತೆಗೆದಿಡುತಲು
ದ್ದಂಡದಿಂದೆಲೆಗಳಂ ತಳಿಸುತಿಹ ಕೈರಾತಿ ಕರಮೆಸೆದಳೊಂದೆಡೆಯೊಳು ||೫೯||

ತಳಿರುಡೆಯನುಟ್ಟು ಕಬರಿಯೊಳು ಮಲ್ಲಿಗೆಯಿಟ್ಟು
ತೊಳಪ ಗುಂಜೆಯ ತೊಡವನಾಂತು ಕಸ್ತೂರಿಯಂ
ತಳೆದು ಕುಚಕುಂಭದೊಳ್ ಪಚ್ಚೋಲೆಗಳ ಧರಿಸಿ ಮುತ್ತುಗಳ ದಂಡೆಯಿಂದ |
ಸುಳಿಗುರುಳಿನಬಲೆಯರ್ ಸಂಧ್ಯಾನುರಾಗಮುಂ
ತಳೆದು ತಾರಗೆಗಳಂ ಮುಡಿದುಮುಂಬರಲಲನೆ
ಪೊಳೆದಪಳೊ ಯೆನಲೊಂದು ದೆಸೆಯೊಳ್ ವಿಲಾಸಕರಮಾಗಿ ತೋರುತಲಿರ್ದರು ||

ಪೊಡೆದು ಪಂಚಾಸ್ಯಮಂ ಬಡಿದು ಬಲ್ಕರಿಯನುಂ
ಪೊಡೆದುಂ ಮೃಗಾದಿಯಂ ಕಡಿದು ಸೈರಿಭಮನುಂ
ತುಡುಕಿ ತುಂಡಂಮಾಡಿ ವೃಕಪಂದಿಮೊಲಗಳಂ ಕತ್ತುರಿಯ ಮೃಗಗಳನ್ನು |
ಪಿಡಿಪಿಡಿದು ಕಲ್ಲಿಗಳೊಳಾಂತು ಪಕ್ಕಿಗಳ ಪಿಡಿ
ದೊಡನೆ ಪಂಜರಕಿಕ್ಕಿ ಸಿಕ್ಕಿದ ಸೃಗಾಲಗಳ
ಕೆಡೆಪಿ ಕಾಲ್ವಿಡಿದೆಳೆದು ಬಲೆಗಳಂ ಬೀಸುತ್ತ ಬೇಡಪಡೆ ನಡೆತಂದುದು ||೬೧||

ಒಂದೆಡೆಯ ಕಿಡಿಯಿಡುವ ಕಡುಗೋಪ ನಖರಂಗ
ಳಿಂದ ಮದಸಿಂಧುರದ ಮಸ್ತಕವ ಸೀಳ್ದು ಭೋ-
ರೆಂದು ಬಹ ಶೋಣಿತದ ಮಧುರರಸವನು ಪೀರ್ದು ಘರ್ಜಿಸುತಲಿದಿರೊಳೆಸೆವ |
ಬಂಧುರಪರಾಕ್ರಮದ ಕೇಸರಿಯ ಮಾರ್ಗಣೆಗ
ಳಿಂದಿಡುತಲಿಬ್ಬಗಿಯ ಮಾಡಿ ತರಸಾಂತ್ರಗಳ
ಗೊಂದಣವ ಕಿಳ್ತಿಟ್ಟನೊರ್ವ ಶಬರಂ ನಿಜಪರಾಕ್ರಮಂ ಬೆಳಗಲೆನುತ ||೬೨||

ನೆಗದಾರ್ದು ಮುಂಬರಿದು ಪಾಯ್ದು ಪೊಯ್ದುಳವಳಿಸಿ
ತೆಗದು ನಿರಿನಿರಿಲು ನಿಟಲೆನೆ ವಸಾಮಾಂಸಗಳ
ಮಿಗೆ ಚೆಲ್ಲಿ ಭುಲ್ಲೈಸಿ ಪುಟನೆಗೆವ ಹರಿಯ ಬೆಂಬೊತ್ತುತಾಡೊತ್ತಿ ಜವದಿ |
ತೆಗೆದು ಕೆಂಗರಿಗೋಲ ಮಿಗೆ ಪರಾಕ್ರಮಜಾಲ
ಬಗಿದದರ ಮಸ್ತಕವ ಭೂತಳಕೆ ಕೆಡೆಪುತಂ
ನಗುತ ಮುಗುಳೊಂದು ಪುಲಿಯನ್ನಟ್ಟಿದನದೊರ್ವ ಶಾಬರಂ ತದ್ವನದೊಳು ||೬೩||

ಉಡಿದಸ್ಥಿತಂಡದಿಂ ಸುರಿವರುಣಜಲಗಳಿಂ
ಕಡಿವಡೆದ ಕಾಲ್ಗಳಿಂ ಮಿಡುಕುತಿಹ ತೋಳ್ಗಳಿಂ
ದಡಿಗಡಿಗೆ ಪೊರವೀಳ್ವ ಪೆರ್ಗರುಳ್ಗಳಿಂದುರುಳ್ವ ಮಾಂಸಖಂಡಂಗಳಿಂದೆ |
ಕಡೆಯ ಕಾಲದ ತೆರದೊಳೊರ್ವರೊರ್ವರ ಸೋಂಕ
ದೊಡನೊಡನೆ ಘರ್ಜಿಸುವ ಮೂದಲಿಕೆಸನ್ನೆಗಳ
ಕಡೆಗಣ್ಣ ನೀಟುಗಳ ಬೇಡಪಡೆ ತಾಂ ತೋರ್ದುದಾ ವಿಪಿನಭೂತಳದೊಳು ||೬೪||

ಪುದುಗುತಿಹ ಹರಿಣಗಳ ನಡುಗುತಿಹ ಕರಿಣಿಗಳ
ಚದರುತಿಹ ಚಮರಿಗಳನೊದರುತಿಹ ಸೃಮರಗಳ
ಕದಕದಿಪ ಶಾರ್ದೂಲವೃಕವರಾಹಾದಿಗಳ ವೇತಂಡತಂಡಂಗಳ |
ಸದೆದು ಬಟ್ಟೆಯೊಳಟ್ಟೆಗಳ ಮೆಟ್ಟೆ ಮಾಂಸಗಳ
ಮಿದುಳ ರಕ್ತವ ಚೆಲ್ಲಿ ಕರುಳ್ಗಳಂ ಕಿಳ್ತಿಟ್ಟು
ಬೆದರಿಸಿದರೇನೆಂಬೆ ಮೂಜಗದ ಜಂತುಗಳು ನಡುಗುವಂತಾ ಶಬರರು ||೬೫||

ಇಂತು ಭೀಕರಬೇಂಟೆಯಂ ನೋಡುತ್ತೈತರಲ್
ಮುಂತೆ ಸರಿ ದರಿ ಜರಿಗಳಿಂದ ಕಂಗೊಳಿಸಿತೋ
ರಂತೆ ಯರಸರ ನೆರವಿ ನಿಂದ ವೃಗಸಂಕುಳದ ಘೋರತರರವಗಳಿಂದೆ |
ತೊಂತಿ ಬಹ ಲುಬ್ಧಕಪ್ರಕರಜರ ಪರಿದಿಂಪ
ನಾಂತ ನರಿಕರಿಕಿರಿಗಳಿಂದಲಾ ಕಾನನಂ
ಚಿಂತಿಪರಶಕ್ಯ ಶಿಖಿಶಿಖಿದಾವಶಿಖಿಗಳಿಂ ಕರವೆಸೆದುದಚ್ಚರಿಯೆನೆ ||೧೬||

ಘನಕದಂಬೋನ್ಮೇಷ ಮುಕ್ತಾವಿಲಾಸದಿಂ
ಘನಸಮುಯದಂದದಿಂದನಿರುದ್ಧಬಲಕೃಷ್ಣ
ಘನಸಾರದಿಂದ ವಸುದೇವಮಂದಿರದಂತೆ ಪುಂಡರೀಕಾಗ್ರನಖದಿಂ |
ಬಿನದಕರದಾನಧಾರೆಯ ತೆರದಿ ಮಾಯೂರ
ನಿನದಕೌತೂಹಲದಿ ಗುಹನಂತೆ ನಕುಲಸಂ
ಹನನಾರ್ಜುನವೃಕೋದರಾದಿಗಳ ಗಡಣದಿಂ ಗಜನಗರಮೆನಲೆಸೆದುದು ||೧೭||

ವಿತತಂ ಕುಜಾತಮುಯಮಾಗಿ ದ್ವಿಜಪೋಷಕಂ
ಸತತ ಕೇಸರಕಲಿತಮಾಗಿ ಗಜರಕ್ಷಕಂ
ಪತಿತಾಂಶುವರ್ಕಸಮುದಯದಿಂದ ಸೋಮಾಜಿವೃದ್ಧಿಕರಮಿನಿಸಲ್ಲದೆ |
ಕಿತವಖಡ್ಗಿಪ್ರಕರಮಾಗಿ ಭುವನೋಲ್ಲಾಸ
ಹಿತಮೆನಿಸಿ ಸುಜನರಂತಖಿಲಗುಣಗಣಮಾಂತು
ಜೊತೆಯೊಳಾ ಕಾನನಂ ಶೃಂಗಾರಬೀಭತ್ಸರಸದಂತೆ ಕಂಗೊಳಿಸಿತು ||೧೮||

ಹರನಂತನಂತಮಣಿಸೋಮಶಿಖಿನೇತ್ರಂಗ
ಳೆರಕದಿಂದರಿಶಂಖಪದ್ಮಾನುಮೋದದಿಂ
ಹರಿಯಂತೆ ಸಾರಸ್ವತೋಲ್ಲಾಸಕರದಿಂದ ಸರಸಿಜೋದ್ಭೂತನಂತೆ |
ಕರಿಧೇನುತುರಗಮುಕ್ತಾಸಮೃದ್ಧಿಗಳಿಂದ
ಶರನಿಧಿಯದೆಂಬಂತೆ ಕಂಗೊಳಿಸಿತಾ ರಾಮ
ಧರಣೀಶನಿದಿರಿನೊಳಗಮಿತಸಂಭ್ರಮವೆತ್ತ ವಲ್ಗುಭಾಷಣಗಳಿಂದ ||೧೯||

ನವನೀರದಶ್ಯಾಮನಾಕಾನನದ ವೈಭ
ವವ ಲಕ್ಷ್ಮಣಂ ಸೀತೆ ಸಹವೆರಸಿ ನೋಡುತ್ತ
ವಿವಿಧತರುಗುಲ್ಮನದನದಿಗಳಂ ಕಳೆಕಳೆದು ವೈನಗತಿವಿಡಿದು ನಡೆದು |
ಜವದಿಂದ ಪಂಚವಟಿಗೈದಿ ನ್ಯಗ್ರೋಧಾಗ್ರ
ದವಲಂಬಮೆನಿಪ ಗೃಧ್ರಾಧಿಪನ ಕಂಡು ಮುನಿ
ನಿವಹದೊಡೆವೆರೆದಲ್ಲಿ ಸಂತಸದಿ ರಾಮುಪುರದರಸನೊಪ್ಪಿರ್ದನೊಲಿದು ||೨೦||

ಅಂತು ಸಂಧಿ ೬ಕ್ಕಂ ಪದನು ೨೬೬ ಕ್ಕಂ
ಮಂಗಳಮಹಾ ಶ್ರೀ.

— ಏಳನೆಯ ಸಂಧಿ —

ಸೂಚನೆ || ಕೇಳ್ದಾ ಜಟಾಯುಷನ ವಾಣಿಯಂ ಹರುಷಮಂ
ತಾಳ್ದು ಸೌಮಿತ್ರಿವಿರಚಿತಪರ್ಣಮಂದಿರದೊ
ಳೊಲ್ದಾ ರಘೋತ್ತಮಂ ಧರಣಿಜಾತೆಸಮೇತ ಸಂತಸದೊಳಿರ್ದನೊಲಿದು ||

ಪದನು|| ಭೀಮವಿಕ್ರಮಮಹಾಕಾಯಂ ಜಟಾಯುವಾ
ತಾಮಸದ ಕಲಿಯಂತೆ ವಟವಿಟಪಿಯೊಳಗಿರ
ಲ್ಕಾ ಮಹಾಗೃದ್ಧ್ರೇಶನಂ ಕಂಡು ದನುಜನಿವನೆಂಬ ಶಂಕೆಯನು ತಾಳ್ದು |
ರಾಮಚಂದ್ರಂ ಕೇಳ್ದನತಿವಿನಯವಾಕ್ಯದಿಂ
ದೀ ಮಹಾರಣ್ಯದೊಳಗೆಸೆವ ನೀನಾವ ನಿಜ
ನಾಮಮಂ ಬೆಸಸೆಂದು ಕೇಳಿದಂ ಕರುಣದಿಂ ಹೈಮಾದ್ರಿತನುಸಂಭವೆ || ೧ ||

ಬೆಸಗೊಳೆ ಜಟಾಯುಷಂ ನಸುನಗುತಲಿಂತೆಂದ
ಶಶಿನಿಭಾನನ ಭವತ್ಪಿತೃವಯಸ್ಯನೆನುತ್ತ
ಸಸಿನೆ ತಿಳಿ ಯೆನಲು ರಘುವೀರ ಸಂತಸಗೊಂಡ ತಂದೆಗಿಮ್ಮಡಿಯೆನುತ್ತ |
ರಸವದುಪಚಾರಗಳ ಮಾಡಿ ಕುಲಶೀಲಮಂ
ಪೆಸರ ಬೆಸಗೊಳೆ ಗೃಧ್ರನತಿಮನೋಹರಕಥೆಯ
ನುಸಿರಿದಂ ದಾಶರಥಿ ಕೇಳೆನುತ ನಿಜವಂಶವೃತ್ತಾಂತಸಂಗತಿಯನು || ೨ ||

ಆದಿಯೊಳ್ ಕರ್ದಮಂ ಜನಿಸಿದನನಂತರಾ
ಮೋದಕರವಿಕ್ರೇಶಶೇಷಸಂಶ್ರಯಸ್ಥಾಣು
ವೇದವಿದ್ಬಹುಪುತ್ರಕನು ಮರೀಚಿಯು ಕ್ರತುವು ಮತ್ತತ್ರಿ ಪುಲಹ ದಕ್ಷಂ |
ಸಾಧುಸಜ್ಜನ ಪುಲಸ್ತ್ಯಂ ಕಾಶ್ಯಪಾಂಗಿರಸ
ಬೋಧರೂಪಂ ವಿವಸ್ವನ್ನೃಚೇತಾದಿಗಳ್
ಭೂದಿವಿಜಸಂಕುಲೋತ್ತಮರುದಿಸೆ ಮತ್ತವರೊಳಾ ದಕ್ಷನಾಮಕಂಗೆ || ೩ ||

ಅರುವತ್ತು ಪೆಣ್ಮಕ್ಕಳಾಗಲವರೊಳಗೆಂಟ
ವರಿಸಿದಂ ಕಾಶ್ಯಪಂ ದಿತಿಯದಿತಿ ದನು ಕಾಳಿ
ವರತಾಮ್ರೆಕ್ರೋಧವಶೆ ಮನು ವನಲೆಯರ ನೋಡಿ ಮುನಿನಾಥನೊಂದು ದಿವಸಂ |
ಕರುಣದಿಂ ಕರೆದೊರೆದ ಧರಿಣಿಯೊಳು ಮತ್ಸಮಂ
ಪರಮತೇಜೋಭರಿತಪುತ್ರರಂ ಪಡೆವುದೆನೆ
ಹರುಷದಿಂ ವಸುರುದ್ರರಾದಿಯಂ ಪಡೆದಳದಿತಿ ಸಂತೋಷದಿಂದ || ೪ ||

ತೆತ್ತೀಸಕೋಟಿದೇವರ್ಕಳನ್ನು ದಿತಿಯುಂ
ಪೆತ್ತಳಾ ದೈತ್ಯರಂ ಧರಣಿಸಂಭರಿತಮೆನೆ
ಮತ್ತೆ ದಿತಿಯಶ್ವಮುಖರಂ ಪೆತ್ತಳಾ ಕಾಳಿ ನರಕಕಾಳಕರ ಪಡೆಯೆ |
ಬಿತ್ತರದ ಧೃತರಾಷ್ಟ್ರಿ ಶ್ಯೇನಿ ಕ್ರೌಂಚಿಯು ಭಾಸಿ
ಯುತ್ತಮದ ಶುಕಿಯು ಪೆತ್ತಳ್ ತಾಮ್ರೆ ಕ್ರೌಂಚಿ ಸ
ನ್ಮತ್ತುಮಾತರಪಡೆದಳುಂ ಭಾಸಿ ಸಂತಸದಿ ಭಾಸಗಳನುಂ ಪೆತ್ತಳು || ೫ ||

ಶ್ಯೇನಿಯುಂ ಶ್ಯೇನಗೃಧ್ರಗಳ ಪೆರೆ ಧೃತರಾಷ್ಟ್ರಿ
ತಾನು ಕಲಹಂಸಹಂಸಂ ಚಕ್ರವಾಕಗಳ
ಮಾನಿನಿಯು ಶುಕಿ ನತೆಯ ಮತ್ತವಳು ವಿನತೆಯುಂ ಪಡೆಯಲಾ ವಿನತೆ ದಯದಿ |
ಮಾನಕಂ [ಮೃಗಿಯು] ಮೃಗಮಂದೆಯುಂ ಹರಿಭೆ ಪ್ರ
ದಾನ ಮಾತಂಗಿ ಶ್ವೇತೆಯು ಸುರಭಿಯುಂ ಮಹಾ
ಮಾನಿರೋಹಿಣಿ ಸುರಸೆ ಕದ್ರುನಾಮಕರೆನಿಪ ಪತ್ತು ಜನರಂ ಪಡೆದಳು ||೬||

ಮೃಗಿಯು ಮೃಗಗಳ ಪೆರಲ್ ಮೃಗಮಂದೆ ಸೃಮರಗಳ
ಬಗೆಬಗೆಯ ಚಮರಿಗಳ ಭಲ್ಲೂಕಗಳ ಪೆತ್ತ
ಳಗಣಿತದೊಳೈರಾವತವಪಡೆದಳಿರೆಯೆಂಬ ನಾರಿ ಹರಿಯೆಂಬಳಿಂದೆ |
ಜಗತಿಯೊಳು ಹರಿಯು ಗೋಲಾಂಗೂಲವಾನರಗ
ಳೊಗೆದುವಲ್ಲಿಂದ ಶಾರ್ದೂಲವ್ಯಾಘ್ರಂಗಳಂ
ಸುಗುಣೆ ಮಾತಾಂಗಿಯು ಮತಂಗಗಳ ದಿಗ್ಗಜಗಳೆಂಟ ಪೆತ್ತಳ್ ಶ್ವೇತೆಯು ||೭||

ಮತ್ತೆ ಸುರಭಿಗೆ ಮಕ್ಕಳಿರ್ವರಾದರು ಜಗದೊ
ಳುತ್ತಮನಗೋಕುಲವ ಪೆತ್ತಳಾ ರೋಹಿಣಿಯು
ಮತ್ತೆ ಗಂಧರ್ವಿ ವಾಜಿಗಳ ಪೆರೆ ನಾಗಗಳ ಸುರಸೆ ಪಡೆದಳ್ ಬೇಗದಿ |
ಬಿತ್ತರದಿ ಕದ್ರು ಪೆತ್ತಳ್ ಪನ್ನಗಾದಿಗಳ
ನುತ್ತಮದ ವಿಪ್ರಕ್ಷತ್ರಿಯವೈಶ್ಯಪಾದಜರ
ಮೊತ್ತಮಂ ಮನು ಪಡೆದಳಮಿತವೃಕ್ಷಂಗಳಂ ಬೆಸಲಾದಳನಲೆ ನಯದಿ ||೮||

ಪಡೆದಳು ಸಹಸ್ರಪೆಡೆಯುಳ್ಳ ಧರಣೀಧರನ
ಪೊಡೆಯೊಳಗೆ ಕದ್ರು ವಿನತೆಯು ಗರುಡನರುಣರಂ
ದೃಢವಿಕ್ರಮರ ಪೆತ್ತಳರುಣಂಗೆ ಸಂಪಾತಿಯಾನು ಸಂಭವರಾದೆವು |
ಪೊಡೆವೀಶ ರಾಮ ಮಂಗಳನಾಮ ನಿನ್ನ ಪಿತ
ನೊಡನಾನು ನೇಹದಿಂ ಬಹುಕಾಲಮಿರ್ದೆ ಪೇ
ಳಡವಿಯೊಳು ಸೀತೆಯಂ ಕಾವೂಗಳಿಗಂಗೆಯ್ವೆನಿದು ಸತ್ಯಮೆಂದರಿವುದು ||೯||

ಎನುತಾ ಜಟಾಯುಷಂ ಪೇಳಲತಿಸಂಭ್ರಮದಿ
ವಿನಯದಿಂದುಪಚರಿಸಿ ಪಂಚವಟಿಯೆಡೆಗೈದಿ
ಜನನಾಥ ಲಕ್ಷ್ಮಣನೊಳಿಂತೆಂದ ಮುನಿ ಪೇಳ್ದ ತಾಣವಿದು ಸತ್ಯಮಹುದು |
ಬನದ ಮಧ್ಯದಿ ಮನೋಹರದೇಶದೆಡೆಯೊಳಿಲೆ
ವನೆಗೈವುದೈ ಸಫಲ ಪುಷ್ಪಕುಶನಿರ್ಮಲದೆ
ಸನಿಹದೊಳು ಜಲಮಿರ್ಪ ನೆಲವನಾರೈವುದೆನೆ ಸೌಮಿತ್ರಿಯಿಂತೆಂದನು ||೧೦||

ದೇವರಾವುದ ಬೆಸಸಲಸಿತ ಮಾಳ್ಪುದೆ ನೇಮ
ಠಾವ ನಾನೆಂತರಿವೆ ಚಿತ್ತಕತಿರಮ್ಯತರ
ಮಾವ ನೆಲಮದ ಸೂಚನಂಗೈಯೆ ಕೃತಕೃತ್ಯಮಾನಸದೊಳಾಂ ನಡೆವೆನು |
ಸಾವಧಾನದೊಳರಿಪವೇಳ್ಕೆನಲ್ ನಸುನಗುತ
ಪಾವನಸುಹಸ್ತದಿಂ ಲಕ್ಷ್ಮಣನ ಕರವಿಡಿದು
ತಾ ವನದೊಳಾಶ್ರಮಸ್ಥಾನಮತಿರಮ್ಯಕರ ನೆಲನ ನಿಟ್ಟಿಸುತ ಬರಲು ||೧೧||

ಧ್ವನಿಗೈವ ಕೋಗಿಲೆಗಳನುಸರಿಪ ಕಲಕಂಠ
ಬಿನದ ಶುಕಕಲಕಲಾರವ ಜೊನ್ನವಕ್ಕಿಗಳ
ನಿನದ ಪಂಡಿತವಕ್ಕಿಯಾರ್ಭಟಿಯ ಕಾದಂಬಕಾಂತಾನುರಾಗದಿರವ |
ತನತನಗೆ ಮುಂಕೊಳುವಶೋಕಂ ರಸಾಲಗಳ
ಕೊನೆ ಚಿಗುರು ಮಲ್ಲಿಕಾನೀಲೋತ್ಪಲಾಂಬುಜಗ
ಳನುವಿಂದ ಕಾಂತಾರಕಾಂತಾರಮನದಿಂದಲತಿಮನೋಹರಮಾದುದು ||೧೨||

ಪರಿಮಳವ ಬೀರುತಿಹ ಕುಸುಮಗಳ ಸಾನ್ನಿಧ್ಯ
ವರಸಮಿತ್ಕುಶಪುಷ್ಪಫಲಜಲಕ್ಕಂ ಸನಿಹ
ಪರಮರಮಣೀಯಕರಗೋದಾವರೀತಟಂ ಮೃಗಪಕ್ಷಿಗಳ ಮಂಡಲಂ |
ಇರುವಿಡಿದು ಸುಖಕರದ ನಿರಿಗೆಯಾಗಿದೆ ಮನೆಯ
ವಿರಚಿಸುವುದೆಂದೊರೆಯೆ ಪರಮನೊರೆದಂತು ಸುರು
ಚಿರಪರ್ಣಶಾಲೆಯಂ ರಚಿಸಲುಜ್ಜುಗಗೊಂಡ ಸೌಮಿತ್ರಿ ಸಂಭ್ರಮದೊಳು ||೧೩||

ದೃಢತರೋನ್ನತದ ನುಣ್ಗಂಬಗಳ ಮತ್ತದರ
ಪೆಡೆಯೊಳಂ ಬಲತರದ ವಂಶಂಗಳಿಟ್ಟು ಮುಂ
ಗಡೆಯೊಳಂ ಶಮಿಯುಗಳಗಳನಿಟ್ಟು ಬಂಧಿಸುತ ಕುಶಕಾಶದಳಗಳಿಂದೆ |
ಬಿಡದೆ ಪೊದ್ದಿಸಿ ನೆಲನ ಸಮಗೈದು ನದಿಗೆ ನಡೆ
ದೊಡನೆ ಮಜ್ಜನಗೈದು ಕಮಲಕುಮುದಂಗಳಂ
ಪಿಡಿದು ಬಂದೆಲೆವನೆಗೆ ಬಲಿಕರ್ಮಗಳ ರಚಿಸಿ ಬಿನ್ನಪಂಗೈದನೊಲಿದು ||೧೪||

ಮನೆಗೈದಿ ರಘುವೀರ ನಾಲ್ದೆಸೆಗಳಂ ನೋಡಿ
ಮನದ ಹರುಷದಿ ಸುಮಿತ್ರಾತನಯನೊಡನೆಂದ
ವಿನತವಿಕ್ರಮಶೌರ್ಯಭಕ್ತಿಶಕ್ತಿಗಳೊಂದು ವಿಗ್ರಹವ ತಾಳ್ದಂದದಿ |
ಮನುರೂಪದಿಂ ತೋರ್ಪ ಧರ್ಮಮಂ ನರನಾಥ
ಮನದೊಲವಿನಿಂ ಪಡೆವ ನಿನಗದೇನಿತ್ತಪೆಂ
ಮನುಜೇಶನೆನುತ ಬಿಗಿಯಪ್ಪಿ ಸಂತೈಸಿದಂ ಚಿತ್ತದನುರಾಗದಿಂದ ||೧೫||

ಅರಿನಿಕೃಂತನ ರಾಮ ಧರಣಿಜಾತೆ ಸಮೇತ
ಪರಮಹರುಷದಿ ಪರ್ಣಮಂದಿರದೊಳೊಪ್ಪಿರ್ದ
ನೆರೆದ ಋಷಿಗಣ ಪೇಳ್ವ ಚಿತ್ರಕರಸತ್ಕಥೆಗಳುಚಿತದಿಂ ಲಾಲಿಸುತಲಿ |
ಇರಲೊಂದು ದಿನ ಸುಮಿತ್ರಾತನಯ ಚರಣಗಳಿ
ಗೆರಗಿ ಭಕ್ತಿಯೊಳ್ ಕರಗಳಂ ಮುಗಿದು ನಿಂದು ಬಂ
ಧುರವಚನರಚನೆಯಿಂ ವಿಜ್ಞಾಪನಂಗೈದ ನಿಜಚಿತ್ತದನುಮತವನು ||೧೬||

ಮನದ ಕೋಟಲೆಯಿಂದ ಜನನಮರಣದ ಭೀತಿ
ಘನಮಾಗಿ ತೋರುತಿದೆ ಯಿದಕುಪಾಯವನೊಂದ
ನೆನಗೊರೆದು ಕೃತಿಯೆನಿಸವೇಳ್ಕೆಂದು ಬಿನ್ನಪಂಗೈಯೆ ರಘುನಾಥ ದಯದಿ |
ತನಯ ನೀಂ ಧನ್ಯ ನೀಋಷಿಗಣದ ಮಧ್ಯದೊಳ್
ಘನಪದವ ಬೆಸಗೊಂಬೆಯಾದೊಡೆಯು ಪ್ರಿಯದಿಂದ
ಜನನಾದಿಕೃತ್ಯಸಂಭವಮಾಗದಂತೊರೆವೆ ಸಾವಧಾನದೊಳಾಲಿಸು ||೧೭||

ತಿಳಿವುದಷ್ಟಪ್ರಕೃತಿವೈಕಾರವಿಾರೆಂಟ
ಬೆಳಗುತಿಹ ಪೂರುಷಂ ಗುಣಮೂರಸಂಚರಂ
ತೊಳಪ್ರತಿಸಂಚರಂ ದುಃಖತ್ರಯಂಗಳಂ ಪಂಚಾಭಿಬುದ್ಧಿಗಳನು ।
ನಳಪಂಚಕರ್ಮಯೋಗಿಗಳ ಪಂಚಾವಯವ
ವಳಪಂಚಕರ್ಮತ್ರೈಪಂಚಪರ್ವಾದಿವ್ಯ
ಕಳಿತಮಿಪ್ಪತ್ತೆಂಟು ಶಕ್ತಿ ನವತುಷ್ಟಿಗಳದಷ್ಟಧಾ ಸಿದ್ಧಿಗಳನು ||೧೮||

ದಶಮೂಲಕಾರ್ಥಗಳ ಮಂತ್ರನುಗ್ರಹಸರ್ಗ
ವೆಸರ ಪದಿನಾಲ್ಕುವಿಧಭೂತಸರ್ಗಂಗಳಂ
ಪೊಸತೆನಿಪ ಬಂಧತ್ರಯಮೂರುವಿಧಮೋಕ್ಷಸ್ವರೂಪಗಳನು ।
ಸಸಿನೆ ಪೇಳುವ ಪ್ರಮಾಣತ್ರಯಂಗಳಂ ತಿಳಿಯೆ
ಮಿಸುಪಗೆಂದಿಗು ದುಃಖ ತಲೆದೋರದತಿಸುಖಂ
ವೆಸರೊಪ್ಪುದೆನಲು ಸೌಮಿತ್ರಿ ಭಕ್ತಿಯೊಳೆರಗಿ ಬಿನ್ನಪಂಗೈದನೊಲಿದು ||೧೯||

ದೇವ ನೀಂ ದಯದಿಂದಲುಪದೇಶಗೈದರ್ಥ
ಭಾವನೆಯನೆಂತರಿವೆ ತತ್ವಪರಿನಿಷ್ಠೆಯೆನ
ಗಾವವಿಧದಿಂದಪ್ಪುದದನೆ ವಿಸ್ತರಗೈದು ಪೇಳ್ವುದೆನೆ ರಘುನಾಯಕಂ ।
ಈ ವಸುಧೆಗುಪಕಾರಮೆನಲು ಪೇಳುವೆ ನಯದಿ
ಸಾವಧಾನದೊಳರಿತು ಕೃತಕೃತ್ಯನಹುದೆಂದು
ಭಾವನಿತತತ್ವಮಂ ಬಿತ್ತರದಿ ಪೇಳಿದಂ ಮುಕ್ತಿಸೋಪಾನದಿರವ ||೨೦||

ಆದಿಮಧ್ಯಾಂತಂಗಳುಳಿದ ರಸಗಂಧಸ್ಪ
ರ್ಶಾದಿಗಳ ಪೊದ್ದದವ್ಯಕ್ತಮಕ್ಷರಬೊಮ್ಮ
ಮಾದಿಪ್ರಧಾನಕ್ಷೇತ್ರಂ ಪ್ರಸವಧರ್ಮಿ ತಮನೆಂಬಪೆಸರಾಂತು ತೋರ್ಪ ।
ಪಾದೋಪಯೋಗ್ಯಂ ಪ್ರಧಾನಮುದರಿಂ ಬುದ್ಧಿ
ಮೋದದೊಳಹಂಕಾರಪಂಚತನ್ಮಾತ್ರೆಗಳ
ಭೇದದಿಂದೆಂಟುವಿಧ ಪ್ರಕೃತಿಯೆಂದೊರೆದಪರು ಗೋಚರಿಸದವ್ಯಕ್ತಮಂ ||೨೧||

ಮರನಿದುವೆ ನರನಲ್ಲಕರಿಯಿದಲ್ಲಶ್ವಮೆಂ
ದರಿವುದಧ್ಯವಸಾಯಮದೆ ಬುದ್ಧಿಯೆಂಟುವಿಧ
ವರಧರ್ಮ ವಿಜ್ಞಾನ ವೈರಾಗ್ಯಮೈಶ್ವರ್ಯ ಸಾತ್ವಿಕಂ ನಾಲ್ಕೆನಿಪುವು ।
ತರುಣಿ ತಿಳಿವುದಧರ್ಮಮಜ್ಞಾನದಾರಿದ್ರ್ಯ
ಪರಿಕರದವೈರಾಗ್ಯತಾಮಸಂ ಪರಿಯಾಯ
ವರಬುದ್ಧಿ ಮತಿ ಮಹದ್ಬ್ರಹ್ಮ ಧೃತಿ ಸುಜ್ಞಾನ ಸ್ಮೃತಿ ಮಾನ ಸೌಖ್ಯಮೆನುತ ||

ಕೇಳುವೆಂ ಪಿಡಿವೆ ನೋಡುವೆನುಂಬೆ ಪರಿಮಳವ
ತಾಳುವೆಂ ಮಾಳ್ಪೆ ಪವಳಿ(ಡಿ?)ಸುವೆನೆನ್ನಿಂದರಿಯು
ಜಾಳಾದನಾ ನೃಪತಿ ಸುಖಿಯೆನ್ನುತಭಿಮಾನವದೆ ಹಮ್ಮು ಪರಿಯಾಯಮಂ ।
ಪೇಳುವೆನಹಂಕಾರ ವೈಕಾರಿ ತೈಜಸಂ
ಮೇಳೆಭೂತಾದಿ ಮತ್ತರಿ ಸಾನುಮಾನಮೆಂ
ದಾಳಿದನಿರನುಮಾನವೆನಿಪ ಪೆಸರಾಂತೆಸೆವುದದುವಹಂಕಾರಮನಘ ||೨೩||

ಅರಿ ಶಬ್ದತನ್ಮಾತ್ರ ಸ್ಪರುಶತನ್ಮಾತ್ರ ಮ
ತ್ತುರುರೂಪತನ್ಮಾತ್ರ ಮಗುಳೆ ರಸತನ್ಮಾತ್ರ
ಸಿರಿಗಂಧತನ್ಮಾತ್ರಮೆಂದೈದುವಿಧಮುದರಮುದರ ಪರಿಯಾಯಗಳನು ।
ಕರಶಾಂತಘೋರಮೂಢಂ ಭೋಗ್ಯಮಣಿಪ್ರಕೃತಿ
ಪರಮಹಾಭೂತಾದಿಯೆನಿಪ ಪೆಸರಾಂತೈದು
ಪರಿಯ ತನ್ಮಾತ್ರೆಗಳ್ ತೋರುವುವು ಮುಂದೊರೆವೆ ಷೋಡಶವಿಕಾರಗಳನು ॥೨೪॥

ಜ್ಞಾನೇಂದ್ರಿಯಗಳೈದು ಕರ್ಮೇಂದ್ರಿಯಗಳೈದ
ನೂನಭೂತಗಳೈದು ಮನಮೊಂದು ಕೂಡಲವು
ತಾನೆ ಷೋಡಶವಿಕಾರಗಳೆಂಬ ಪೆಸರಾಂತು ತೋರುವುವು ಪರ್ಯಾಯವು ।
ನೂನಮಿಂದ್ರಿಯಕರಣವೈಕಾರಪಾದಗಳ್
ಮಾನಿನಿಯ ಕಂಗಳತಿಯಕ್ಷಾದಿಪೆಸರಿಂದ
ಜ್ಞಾನಿಗಳು ಕರೆವರೀ ಷೋಡಶವಿಕಾರದ(ಗ?)ಳ ತಿಳಿ ಪಂಚಭೂತದಿರವ ॥೨೫॥

ಗಗನಮರುದಗ್ನಿ ಜಲನೆಲನೆಂಬ ನಾಮದಿಂ
ಮಗುಳದಾಕಾಶಮವಕಾಶದಾನದಿ ನಾಲ್ಕು
ಬಗೆಯನುಪಚರಿಪುದೈ ವಾಯುವಹನಾತ್ಮತೆಯಲುಪಕರಿಪುದೈ ನಾಲ್ಕನು ।
ನಗುವ ಪಾಚಕಭಾವ ತೇಜದಿಂ ನಾಲ್ಕನುಂ
ಸೊಗಸಿಂದಲುಪಚರಿಪುದಷ್ಟು ಸಂಗ್ರಹಭಾವ
ಪೊಗೆ ಧರಣಿ ಧಾರಣದೆ ನಾಲ್ಕನುಪಚರಿಪುದಿದು ತಥ್ಯ ತತ್ವಜ್ಞಮತವು ॥೨೬॥

ದನಿಯೊಂದೆ ಗುಣ ನಭಕೆ ಶಬ್ದಸ್ಪರುಶ ಮರುತ
ಗೆನಿಸೆ ರೂಪಂ ಸ್ಪರ್ಶ ಶಬ್ದ ಮೂರಗ್ನಿಗಂ
ವನಕೆ ಶಬ್ದಸ್ಪರ್ಶರೂಪು ರಸ ನಾಲ್ಕೆನಿಪುವವನಿಗಂ ಪಂಚಗುಣವು ।
ಬಿನದಪರ್ಯಾಯನಾಮಗಳು ಭೂತಿಗಳೆಂದು
ಘನಶಾಂತಘೋರವಿಗ್ರಹಮೂಢತಮಗಳೆಂ
ದನುನಯವಿಶೇಷಮಾಕೃತಿಗಳು ವಿಕಾರಮೆಂದೆನಿಪುವೀ ಪರಿಯಲಣುಗ ॥೨೭॥

ಚೇತನಂ ಸರ್ವಗತ ನಿತ್ಯ ನಿರ್ಗುಣ ಸೂಕ್ಷ್ಮ
ಜೋತಿಭೋಕ್ತೃನು ಕರ್ತೃ ಕ್ಷೇತ್ರವಿದ್ದ್ರಷ್ಟನಜ
ನೀತಜ್ಞ ನಿರ್ಮಲನನಾದಿಯೆಂದಿನಿಸುವನೆ ಪುರುಷ ಪುರಿಯೆಸಕದಿಂದ ।
ಪ್ರೀತಿಯ ಪುರೋವರ್ತಮಾನನಾದುದರಿಂದ
ಜಾತುಚಲಿಸದ ಪೂರ್ಣನಾದಕತದಿಂ ಪುರುಷ
ನೀತನೆಂಬಭಿಧಾನಮಿಾ ಶಾಸ್ತ್ರಸಮ್ಮತದೊಳಖಿಳಾನುಮತವಿದನಘ ॥೨೮॥

ಸುಖದುಃಖಮೋಹೋಪಲಬ್ಧಿಯಿಂ ಚೇತನಂ
ವಿತಲಗಮನಾದಿಶೂನ್ಯತೆಯಿಂದ ಸರ್ವಗತ
ನಕೃತದಿಂ ನಿತ್ಯ ಗುಣಮೂರ ತನ್ನೊಳಗಿಟ್ಟ ಕತದಿ ನಿರ್ಗುಣನಪ್ಪನು ।
ಚಕಿತೇಂದ್ರಿಯಗ್ರಹಣನಲ್ಲದುದರಿಂ ಸೂಕ್ಷ್ಮ
ಸುಖವರಿವಚೇತನದೆ ಭೋಕ್ತನೊಂದಂ ಬಯಸ
ನಕಲಂಕನದರಿಂದ ಕರ್ತೃಕ್ಷೇತ್ರವ ತಿಳಿಪನದರಿಂದೆ ಕ್ಷೇತ್ರವಿದನು ॥೨೯॥

ಪಿಡಿಯನಕ್ಷರವಿಕಾರಗಳನದರಿಂ ದ್ರಷ್ಟ
ನೊಡನಶುಭಶುಭಲೇಪವಿಲ್ಲದುದರಿಂದಮಲ
ತುಡುಕನಂತ್ಯವನದರ ಕತದೊಳಜವೊಂದನುಂ ಸೃಜಿಸನಪ್ರಸವಧರ್ಮಿ ।
ಪೊಡೆಯೊಳೀತನ ಪುಮಾನಾತ್ಮಪೂರುಷಬಹುಳ
ನೊಡನೆ ಜೀವನನಂತ ಕವಿ ಯಕ್ಷರಂ ಬ್ರಹ್ಮ
ಸಡಗರದ ಪ್ರಾಣನಜನನಕಾಹನೆಂಬನಾಮುಂಗಳಿಂ ಕರೆವರಲ್ತೆ ॥೩೦॥

ಪುರುಷನೀ ಕೃತ್ಯಕರ್ತೃತ್ವಮಾಂತೊಡೆ ಬೇಗ
ವಿರಚಿಪ ಶುಭಾಶುಭಗಳೆರಡ ಸಾತ್ವಿಕಸಾಕ್ಷಿ
ವರೆಯನದರಿಂ ಗುಣತ್ರಯಯುಕ್ತಹಂಕಾರಕಹುದು ಕರ್ತೃತ್ವಮುದರ ।
ಪರಿಯು ಬಿತ್ತರಿಪೆ ಧರ್ಮಾಖ್ಯಸಾತ್ವಿಕಮುದರ
ನಿರಿಗೆ ಯಮನಿಯಮಸೇವನೆ ಪ್ರಸಂಖ್ಯಾನಪರ
ಪರತರೈಶ್ವರ್ಯವೈರಾಗ್ಯಗಳೆ ಸಾತ್ವಿಕದ ವೃತ್ತಿಯೆಂದೆನಿಪುದೈಸೆ ॥೩೧॥

ರಾಗ ಕ್ರೋಧಂ ಲೋಭ ರೌದ್ರತಾ ಪಾರುಷ್ಯ
ಭೋಗ ವಿಕೃತಾಕೃತಿಯು ವರಪರೀವಾದಗುಣ
ಪೂಗರಾಜಸವೃತ್ತಿಯುನ್ಮಾದಮದವಿಷಾದಾದಿನಾಸ್ತಿಕ್ಯನಿದ್ರೆ ।
ರೋಗ ಸ್ತ್ರೀವ್ಯಸನಮಾಲಸ್ಯನಿದ್ರೆಯೆ ಯಶುಚಿ
ಯೋಗತಾಮಸವೃತ್ತಿ ಮತ್ತೀ ಗುಣತ್ರಯಗ
ಳಾಗುಹೋಗೆಲ್ಲಹವ್ಮಿಂಗಲ್ಲದಿನಿಸಿಲ್ಲ ನೋಳ್ಪರಾ ಪುರುಷರನಘ ॥೩೨॥

ಮೂಲಪ್ರಕೃತಿಗೈದು ಗುಣಕರ್ಮಗಳ ತನ್ನ
ಮೇಲಾಂತಹಂಕಾರವಶತೆಯಿಂದರಿಯದಲೆ
ಬಾಲಿಶತನಾದಿತೆರದಿಂದಲಾಂ ಗೈದೆನೆಂದರಿವನಲ್ಲಾತ್ಮನಿಲ್ಲಾ ।
ಮೇಲೆ ಗುಣರಹಿತಪರಮಾತ್ಮನನ್ವಯ ಸಕಲ
ಮೂಲವಾಗಿರಲೆಸಗ ಕರ್ತೃಕರ್ಮಕ್ರಿಯೆಯ
ಶೀಲನಂಗೈಯ ದುಸ್ಸಹವಾಸದಿಂದಾತ್ಮದೌಷ್ಟ್ಯನೆಂದೆನಿಪನಣುಗ ॥೩೩॥

ಎಸಗುವುದನೆಸಗಿದುದನೆಸಗುವಿಚ್ಛೈಸುವೀ
ಪೊಸಪರಿಯ ಪ್ರಕೃತಿಕೃತಮೆಂದರಿದೊಡಾಗ ನಿಜ
ದೆಸಕಮುಂ ತಿಳಿದನಿದು ಸಿದ್ಧ ತಾದೃಶಪುರುಷರಪರಮಿತರೆಂದರಿಪುದು ।
ಬೆಸಲಾದರೆಲ್ಲರುಂ ಪುಟ್ಟವೇಳ್ಕೊರ್ವನುಂ
ನಸಿಯಲೆಲ್ಲರ್ ನಸಿಯವೇಳ್ಕುಮದರಿಂ ಪುರುಷ
ರೆಸೆವರ್ಬೈ ಬಹುವಿಧದೊಳಮಲರನಘಕರ್ತರನುಮಾನದಿಂದರಿವುದು ॥೩೪॥

ಮೂರು ಗುಣಗಳ ಪೇಳ್ವೆ ಶಾಂತಂ ತಿತಿಕ್ಷೆಯುವು
ದಾರಪ್ರಸಾದಸಂಪ್ರೀತಿಸಾತ್ವಿಕಗುಣವಿ
ಕಾರ ಶೋಕಂ ತಾಪ ರೋಷ ಮಾನ ಸ್ತಂಭ ಸ್ವೇದಂ ರಜೋಗುಣಮದು ।
ತೋರ ನಿದ್ರಾಲಸ್ಯದೈನ್ಯಗೌರವಪರೀ
ವಾರಪ್ರಮಾದಲಕ್ಷಣವು ತಾಮಸ ಸತ್ವ
ತೋರುವದು ಸುಜ್ಞಾನತಾಮಸಂರಾಜಸಮುದೆರಡರಿಂದೇ ಸಂತತಂ ॥೩೫॥

ತರುಣ ತಿಳಿ ಸಂಚರ ಪ್ರತಿಸಂಚರಗಳೆಂಬ
ವೆರಡು ಜಗದುತ್ಪತ್ತಿಯದುವೆ ಸಂಚರ ಪ್ರಳಯ
ಮರಿಯ ಪ್ರತಿಸಂಚರಂ ಮತ್ತೊರೆವೆನುದಯಮುಂ ಸಂವರ್ತಗಳ ಪರಿಯನುಂ ।
ಮೆರೆವುದವ್ಯಕ್ತದಿ ಮಹಾತತ್ವಮದರಿಂದ
ಉರುಗುಣಾತ್ಮಕಮಹಂಕಾರಮದರಿಂ ಜನಿಸಿ
ಬರುವುವೇಕಾದಶೇಂದ್ರಿಯಪಂಚಭೂತಗಳ ಪರಿಕರದಿ ಲೋಕಮಹುದು ||೩೬||

ಭೂತಗಳ್ ತನ್ಮಾತ್ರೆಮಾತ್ರಂಗಳಿಂದ್ರಿಯದೆ
ಪ್ರೀತಿಯಿಂದಕ್ಷ ಹಂಕಾರದೊಳು ಹಮ್ಮು ಬಿಡ
ದಾ ತತ್ವದಾದಿಯೊಳು ಬುದ್ಧಿಮೂಲಪ್ರಕೃತಿಯೊದಗಲದು ಪ್ರತಿಸಂಚರಂ ।
ಈತೆರದ ಸಂಚರಪ್ರತಿಸಂಚರಂಗಳಂ
ತಾ ತಿಳಿದುಮಾತುರದೊಳಖಿಳಬಂಧವ(ನ?)ಮುಕ್ತ
ಜಾತಮಹುದಧ್ಯಾತ್ಮಮಧಿಭೂತಮಧಿದೈವಗಳ ಪೇಳ್ವೆ ಕೇಳ್ವುದಣುಗ ||೩೭||

ಬುದ್ಧಿರಧ್ಯಾತ್ಮಬೋದ್ಧವ್ಯಮಧಿಭೂತಮದ
ಪೊದ್ದಿರ್ಪಬ್ರಹ್ಮನಧಿದೈವ ದರ್ಪಾಧ್ಯಾತ್ಮ
ಮುದ್ಧತಮುದಾದಹಂಕಾರ್ತವ್ಯಮಧಿಭೂತ ರುದ್ರನವಕಧಿದೈವಮುಂ ।
ಸಿದ್ಧಿಯು ಮನೋಧ್ಯಾತ್ಮ ಸಂಕಲ್ಪವೈಕಲ್ಪ
ಬುದ್ಧಿಯಧಿಭೂತಮದು ಚಂದ್ರಾಧಿದೈವತಂ
ಶುದ್ಧಶ್ರೋತ್ರಾಧ್ಯಾತ್ಮಶ್ರೋತವ್ಯಮಧಿಭೂತ ಸುರವರ್ತ್ಮನಧಿದೈವವು ||೩೮||

ತ್ವಕ್ಕದಧ್ಯಾತ್ಮಸ್ಪರ್ಶಯಿತವ್ಯಮಧಿಭೂತ
ವೆಕ್ಕತುಳದಾತನಧಿದೈವನೇತ್ರಾಧ್ಯಾತ್ಮ
ಚೊಕ್ಕದ್ರಷ್ಟವ್ಯಮಧಿಭೂತಂ ದಿವಾಕರಂ ಮತ್ತಧಿದೈವಮಲ್ತೆ ।
ಸೊಕ್ಕುಜಿಹ್ವಾಧ್ಯಾತ್ಮ ರಸಯಿತವ್ಯಂ ನೋಡ
ತಕ್ಕುದಧಿಭೂತಂ ಪ್ರಚೇತಮಧಿದೈವಮುಂ
ಮಿಕ್ಕು ಘ್ರಾಣಾಧ್ಯಾತ್ಮಘ್ರಾತವ್ಯಮಧಿಭೂತಮಶ್ವಿನಿಗಳಧಿದೈವಮುಂ ||೩೯||

ವಾಗದಧ್ಯಾತ್ಮ ವಕ್ತವ್ಯಮಧಿಭೂತ ಮದ
ರಾಗುಹೋಗಗ್ನಿ ಯಧಿದೇವತೆಯು ಪಾಣಿಗಳ್
ರಾಗದಧ್ಯಾತ್ಮ ಮಾದಾತವ್ಯ ಮಧಿಭೂತ ಮಿಂದ್ರತತ್ವಾಧಿದೈವಂ ।
ಬೇಗಪಾದಾಧ್ಯಾತ್ಮ ಗಂತವ್ಯ ಮಧಿಭೂತ
ಶ್ರೀಗುರುವನಧಿದೈವ ಪಾಯು ವಧ್ಯಾತ್ಮ ಮದ
ನೀಗಲುತ್ಸೃಷ್ಟವ್ಯಮಧಿಭೂತ ಮೃತ್ಯು ತತ್ವಾಧಿದೇವತೆ ಬಾಲಕ ||೪೦||

ತಿಳಿ ಗುಹ್ಯ ಮಧ್ಯಾತ್ಮ ಮಾನಂದ ಮಧಿಭೂತ
ಕಳೆ ಪ್ರಜಾಧಿಪ ದೈವಮೀ ವಿಧದ ಕರಣಂಗ
ಳುಲಿದೆ ಮತ್ತೀ ವಿಧವನರಿದಾತನೆಂದಿಗುಂ ಗುಣಲೇಪ ವೊಂದಿಲ್ಲದೆ ।
ಕಳೆದಖಿಳಪಾಪಗಳ ಸರ್ವಸಾಕ್ಷಿಕನೆನಿಸಿ
ಪೊಳೆವ ನಭಿಬುದ್ಧಿ ಯಭಿಮಾನಮಿಚ್ಛಾಕ್ರಿಯೆಯು
ಪೊಳೆವ ಕರ್ತವ್ಯತಾಪಂಚಾಭಿಬುದ್ಧಿಗಳ ಬಿತ್ತರವಲೊರೆವೆನಣುಗ ||೪೧||

ಇದು ಮಾಳ್ಪುದಹುದೆನ್ನುತರಿವುದಧ್ಯವಸಾಯ
ಮದು ಮತಿಯ ಕಾರ್ಯಮಾಂ ಗೈವೆನೆಂಬುದೆ ಗರ್ವ
ಮಿದು ಯೆನ್ನದಹುದಲ್ಲವೆಂಬ ಸಂದೇಹವೇ ಮಾನಸವ್ಯಾಪಾರವು |
ವಿದಿತಶಬ್ದಾದಿಬುದ್ಧೀಂದ್ರಿಯಂ ವ್ಯಾಪಾರ
ಮೊದಗಿ ವಚನಾದಾನಮಾನಂದಕ್ರಿಯೆಗಳಿಂ
ಬುದನರಿದು ಜ್ಞಾನಕರ್ಮೇಂದ್ರಿಯಮನೋಬುದ್ಧಿಹಮ್ಮುಗಳ ತಿಳಿವುದಣುಗ ||೪೨||

ಧೃತಿಯು ಶ್ರದ್ಧಾ ಸುಖವಿವಿದಿಷಾವಿವಿದಿಷಮೆಂ
ಬತಿಶಯಗಳೈದುವಿಧಮರಿತು ಮತ್ತದ ತಿಳಿದು
ಮತಿಯಿಂದ ಮತ್ತುಸಿರಿ ಕೊನೆಗಾಣಲೆಸಗುವುದೆ ಧೃತಿ ಯಜನಯಾಜನಗಳ |
ಸತತದಾನಂ ಪ್ರತಿಗ್ರಹ ಹೋಮ ಮನಸೂಯೆ
ಯತಿಶಯದ ಬ್ರಹ್ಮಚರ್ಯಂ ತಪೋವಿದ್ಯಾದಿ
ಕತಿಪಯಾಭ್ಯಾಸ ಸುಖಮೆಂಬರೊಂದರಿಯದವಿವೇಕವಿವಿದಿಷಮೆಂಬರು ||೪೩||

ಜ್ಞಾನಿಗಳ ಸದ್ಬೀಜ ವಿವಿದಿಷೆಯೆನಿಕ್ಕು ಬಂ
ಧಾನುಕರಣಂ ನಾಲ್ಕದೊಂದೆ ಮುಕ್ತಿಪರಯೋಗ್ಯ
ಸಾನಂದಕರಪಂಚಕರ್ಮಯೋನಿಗಳೆಂದು ತಿಳಿ ವಾಯುಪಂಚಕಗಳ |
ತಾನವಂ ಮುಖಘ್ರಾಣಗಳಲಿಟ್ಟು ಪ್ರಾಣಾ
ವ್ಯಾನವೋದಾನಸಮಾನಮೆಂದೈದು
ನಾನಾವಿಧದ ಚೇಷ್ಟೆಗೊಳಿಸಿ ನಡೆಸುವುದೆನುತಲರಿವುದೈ ಮರುತಂಗಳ ||೪೪||

ಐದು ಕರ್ಮಾತ್ಮಾನಮೆಂದೊರೆವರವ ತಿಳಿವು
ದೈದೆ ವೈಕಾರಿಕಂ ತೈಜಸಂ ಭೂತಾದಿ
ವೈಧುರ್ಯಸಾನುಮಾನಂ ನಿರನುಮಾನಂಗಳವರ ಕಜ್ಜವನೊರೆವೆನು |
ಐದರೊಳು ವೈಕಾರ ಶುಭ ತೈಜಸಂ ಮೋದ
ಲೈದಿತರಭೂತಾದಿ ಮೂಢ ಮನುಮಾನ ಸಂ
ಪಾದಿಪುದು ಶುಭಕರ್ಮಗಳ ಮೂಢಶುಭಕಾರ್ಯನಿರನುಮಾನದೊಳಪ್ಪುದು ||೪೫||

ತಿಳಿವುದೈ ಪಂಚಪರ್ವಾವಿದ್ಯಗಳ ತಮಃ
ಕಲಿತಮೋಹಂ ಮಹಾಮೋಹಮುರುತಾಮಿಸ್ರ
ಬಳಿಕಂಧತಾಮಿಸ್ರಮೆಂದೈದುವಿಧಮದರೊಳೆಸೆವ ತಮವೆಂಟುವಿಧವು |
ಪೊಳೆಯುತ್ತಮಿರ್ಪುದು ದಶಾತ್ಮಕಮಹಾಮೋಹ
ಮಲಘುತಾಮಿಸ್ರಾಂಧತಾಮಿಸ್ರಪದಿನೆಂಟು
ಬೆಳಗುವುವು ಮತ್ತವರ ಪರಿಯ ಬಿತ್ತರಗೈವೆ ಸೂಕ್ಷ್ಮದಿಂದಾಲಿಸಣುಗ ||೪೬||

ಅರಿಯದಷ್ಟಪ್ರಕೃತಿಗಳಲಿ ಪಿಡಿದಭಿಮಾನ
ತರಳ ತಮಮೆಂಬರಣಿಮಾದಿಸಿದ್ಧಿಗಳಾಂತು
ಮೆರೆವುದೇ ಮೋಹ ಮಾನುಷ್ಯವಿಕ........ಮೊದಲಾದ ಪತ್ತನುಳಿದು |
ವರಮುಕ್ತನಾನೆಂಬುದೇ ಮಹಾಮೋಹ ಮುಂ
ದರಿಯದಣಿಮಾದಿದಶವಿಧವಿಷಯಗಳ ನಂಬಿ
ತುರಿಯದುಃಖಂ ನೋಡೆ ತಾಮಿಸ್ರನಾಮಕಂ ಚರಮಾಂಧತಾಮಿಸ್ರಮುಂ ||೪೭||

ತಡೆಯದರುವತ್ತೆರಡುಭೇದ ಸೂಚನೆಯಾದು
ದೊಡನೆ ಶಕ್ತಿಗಳನಿಪ್ಪತ್ತೆಂಟು ಪನ್ನೊಂದು
ದೃಢತರೇಂದ್ರಿಯಸಪ್ತದಶಬುದ್ಧಿಯೆಂದೆನಿಪುದವನೆ ಬಿತ್ತರಿಪೆ ನನಘ |
ಝಡಿತೆ ಜಿಹ್ವೆಗೆ ಶ್ರವಕೆ ಬಾಧಿರ್ಯ ತ್ವಕ್ಕಿನೊಳ
ಗೊಡನೆ ಶ್ವಿತ್ರಂ ನೇತ್ರಕಂಧತೆಯು ಘೋಣಕಂ
ಬಿಡದಲಘ್ರಾಣತ್ವ ನುಡಿಗೆ ಮೂಕತೆ ನಡೆಗೆ ಪಂಗುತ್ವ ಹಸ್ತಗಳಿಗೆ ||೪೮||

ಕ್ಷೀಣಿತ್ವ ಪಾಯ್ವಿಂದ್ರಿಯಕ್ಕುದಾವರ್ತತ್ವ
ಮಾಣದಲುಪಸ್ಥೆಗಂ ಕ್ಲೈಬ್ಯ ಮನಕುನ್ಮಾದ
ಜಾಣರೇಕಾದಶೇಂದ್ರಿಯವಧಾರೂಪಮೆಂದೊರೆವರಿದನರಿತು ನಡೆವ |
ಮಾಣದಂಭೋಗಸಲಿಲಂ ಮೇಘವೃಷ್ಟಿಗಳ್
ಕೇಣವಿಲ್ಲದಪಾರ ಮತ್ತಪಾರಂಪರ
ವೂಣಯಾಂಬಂಮುತ್ತಮಾಂಬಮೆಂದೈದುವಿಧ ಬಾಹ್ಯಸಿದ್ಧಿಗಳೊರೆದಪೆಂ ||೪೯||

ತಾರಂ ಸುತಾರೆ ಮತ್ತಂ ತಾರಯಂತಿಗಳು
ದಾರಪ್ರಮೋದಪ್ರಮುದಿತಪ್ರಮೋದಂಗ
ಳೋರಂತೆ ರಮ್ಯಕಸದಾಪ್ರಮುದಿತಗಳೆಂಬ ಶಕ್ತಿಗಳನೊರೆವೆನಣುಗ |
ವೀರಸಿದ್ಧಿಗಳೆಂಟುವಿಧ ವಿಪರಿಯವೆಂಟು
ತೋರುವವ ಶಕ್ತಿಯಾಪರಿಯಲಿಪ್ಪತ್ತೆಂಟು
ಬೇರೆಬೇರವರವರ ಕ್ರಮುಗಳರಿತರಿತಮುಲಭಾವಮಂ ಕೈಕೊಂಬುದು ||೫೦||

ತಿಳಿವುದಸ್ತಿತ್ವಮೇಕತ್ವಮನ್ಯತ್ವಮಂ
ಕಳಿತಾರ್ಥವತ್ವ ಪಾರಾರ್ಥ್ಯ ಯೋಗ ವಿಯೋಗ
ತೊಳಪ ಕರ್ತೃತೆ ಪುರುಷಬಾಹುಳ್ಯದೇಹಕಂ ಶೇಷವೃತ್ತಿಗಳೆನುತ್ತ |
ತಿಳಿದವರು ದಶಮೂಲಿಕಾಧ(ರ್ಥ?)ಂಗಳೆಂದಿವಂ
ತಳೆದ ಪಂಚಾಶತ್ಸುಪ್ರತ್ಯಯಂ ತುಷ್ಟಿಗಳ್
ಪೊಳೆವುವಿಪ್ಪತ್ತೆಂಟು ಕೂಡಲರುವತ್ತೆನಿಪ ತಂತ್ರಂಗಳಾದುವನಘ ||೫೧||

ಭೂತಪಂಚಕಗಳಂ ತನ್ಮಾತ್ರೆಯಿಂ ಸೃಜಿಸಿ
ಜಾತಮಾದವ ನಿರಾಹಾರಮೆಂದರಿತವರ
ಜಾತಿಗತಿಶಯದನುಗ್ರಹಗೈನುದಕ್ಷರಂ ತಿಳಿ ಭೂತಸರ್ಗಮೆನುತ |
ತಾತ ಪ್ರಾಜಾಪತ್ಯಬ್ರಹ್ಮದೈವಂ ಪೇತ್ಯ
ಮೋತು ಗಂಧರ್ವಪೈಶಾಚರಾಕ್ಷಸಯಕ್ಷ
ಜಾತಿಭೇದಗಳೆಂಟು ಪಶುಪಕ್ಷಿಮೃಗಸರ್ಪಸ್ಥಾವರಗಳೈದು ವಿಧವು ||೫೨||

ಪಾರುವಂ ಮತ್ತಂತ್ಯಜಾತಿಪರ್ಯಂತರಂ
ತೋರುವಶರೀರಂಗಳೇಕವಿಧಮಿದತತ್ವ
ಸಾರಜ್ಞರೆನಿಸಿ ಪದಿನಾಲ್ಕೆನುತತಿಳಿದಿವಕೆ ಯಾತಸರ್ಗಮೆನುತ್ತಲಿ |
ಚಾರುನಾಮವನಿಟ್ಟವರೈ ಮುಂದೆ ಪೇಳುವೆನು
ದಾರಮಕ್ಷರವು ವೈಕಾರಿಕಂ ದಾಕ್ಷಿಣಂ
ಮೂರುಬಂಧಗಳೆನುತ ಯಾನವಿಂದ್ರಿಯಶಾಂತಿ ಸಕಲೋಪರಮಗಳೆನುತ ||೫೩||

ಮೂರುವಿಧಮೋಕ್ಷಮಿಾ ಪರಿಯನೆಲ್ಲವ ತಿಳಿಯೆ
ಮೂರುಂ ಪ್ರಮಾಣಮೆನುತರಿದು ನೋಡಲ್ಕವಗೆ
ಶಾರೀರಮಾನಸೋದ್ಭೂತದಧ್ಯಾತ್ಮಮುಂ ಮನುಜಪಶುಪಕ್ಷಿಸರ್ಪ |
ತೋರಖಗಮೃಗಸ್ಥಾವರಾದಿಗಳ ದೆಸೆಯಿಂದ
ಲಾರಯ್ಯಲಧಿಭೌತಿಕಂ ವಾತಪಿತ್ತಾಧಿ
ಕಾರಮಧಿದೈವಮೆಂದೀ ಪರಿಯ ದುಃಖತ್ರಯಂಗಳಂ ತಳೆವರನಘ ||೫೪||

ತಿಳಿದು ಗುರುಮುಖದಲೀ ಸಾಂಖ್ಯತತ್ವಂಗಳಿಂ
ಪಳಿದು ಪೋಪುದು ಭ್ರಾಂತಿ ನಿರ್ಮಲತೆಯಿಂ ದೇಹ
ದೊಳಹೊರಗೆನಿಪ್ಪುದೊಂದರಿಯದಾನಂದದಿಂ ತತ್ವಸ್ವರೂಪಮೆನಿಸಿ |
ನಳಿನಾಕ್ಷರಾಮಪುರದೆರೆಯ ಪೆರತಿಲ್ಲೆನುತ
ತೊಳಪ ಜ್ಞಾನಾಮೃತದ ಕಡಲೊಳೋಲಾಡುತ್ತ
ಬೆಳಗುತಿಹನಿದು ತತ್ವಮೆಂದರಿತು ಸೌಮಿತ್ರಿ ನಿತ್ಯಸುಖಮಯಮೆನಿಪುದು ||೫೫||

ಅಂತು ಸಂಧಿ ೭ಕ್ಕಂ ಪದನು ೩೧೯ಕ್ಕಂ
ಮಂಗಳಮಹಾ ಶ್ರೀ ಶ್ರೀ ಶ್ರೀ.

— ಎಂಟನೆಯ ಸಂಧಿ —

ಸೂಚನೆ || ಕಾಂತೆ ಸಹಿತಂ ಪಂಚವಟಿಯೊಳಂ ಶ್ರೀರಾಮ
ಸಂತಸದಲಿರಲು ಹೈಮಂತ ತಲೆದೋರುತಿರೆ
ಮುಂತೆ ರಕ್ಕಸಕಾಂತೆ ತಾಂ ತಳುವದೈತಂದು ಸುಳಿದಳಪ್ಸರೆಯಂದದಿ ||

ಪದನು|| ನಂದನೋಪಮಮೆನಿಸಿ ಸರ್ವಸುಖಭೋಗಕಾ
ನಂದಕರಮೆಂದೆನಿಸುವಾ ಪಂಚವಟಿಯ ಮುನಿ
ವೃಂದದೊಡನತಿಶಯದ ಸತ್ಕಥಾಶ್ರವಣದಿಂ ಕೆಲಕಾಲಮಿರಲನ್ನೆಗಂ |
ಇಂದೀವರಾಕ್ಷಿಯರನೊಲಿಪ ಮೋಹನಘುಟಿಕೆ
ಯಂದಮೊ ಪಿಕಾಂಗನಾಪನ್ನಗದ ಗತಿಯನಲ
ವಿಂದಲಡ್ಡೈಸುತಿಹ ಸಿದ್ಧನೋ ಯೆನಲಗಜೆ ಹೈಮಂತ ತಲೆದೋರ್ದುದು || ೧ ||

ಘನಶರಸ್ತಂಭನೋಚ್ಚಾಟನಂಗೈದು ಬಗೆ
ದಿನನ ಪ್ರತಾಪಮಂ ಕಡಿದು ಜಲಜನಿಯ ನಿಜ
ಮನವನುಂ ಕೊರಗಿಸುತಲರಿಚಕ್ರವಕ್ತ್ರಮಂ ಬಾಧಿಸುತೆ ಮತ್ಸರದೊಳು |
ವಿನಯದಿಂ ನಗಿಸಿ ಕುಮುದಿನಿಯ ಮನದಿಷ್ಟಮಂ
ಬಿನದದಿಂ ಕೊಡುವ ತಂಗದಿರ ಪೆರ್ಚಿಸುತ ರುತು
ಜನಪನಂದದಿ ಮಾಗಿ ಮೈದೋರ್ದುದಂಗಜನ ಮೋಹನದ ಬಲೆಯಂದದಿ || ೨ ||

ಕೆಳೆತನವನಗ್ಗಿಯೊಡನೆಸಗಲೆಳಸಿದ ಸೂರ
ನಳಿನಪೀಠಂ ಸತಿಯವದನದೊಳು ಬೈಚಿಟ್ಟ
ನಳಿನೋದರಂ ವತ್ಸದುಪಗೂಹನಂಗೈದ ತೊವಲುಡೆಯನರೆದೇಹಮಂ |
ನಳಿನಮುಖಿಗಿತ್ತು ನಾನೋಪಾಯಗಳನೆಸಗಿ
ಥಳಿಯ ರುಜೆಯಂಟದಂದದಿ ಪೂರ್ವಕಾಲದೊಳೆ
ತಿಳಿದಾತ್ಮರಕ್ಷಣೋದ್ಯುಕ್ತರೆಂದನಿಸಿರ್ದರೈಸೆ ಮಾಗಿಯನು ಜೈಸೆ || ೩ ||

ಮರನಡರಿದಂ ದಿನಪನಗ್ಗಿ ನೀರಂ ಪೊಕ್ಕ
ನರಿಸಮುದಯಂ ಪುಲ್ಲ ಕಚ್ಚಿ ನೆಲನಂ ನಚ್ಚಿ
ಸರಸಿಗಳ ಕಾಣದಿರೆ ನಿಜಕುಲಾಯನಿಲೀಯ ಪದಿಲದಿಂದಿರೆ ಪಕ್ಕಿಗಳ್ |
ತರಣಿ ಕಿರಣಂಗಳಂ ಪಿಡಿದು ನುಂಗುತ ಬರಲ್
ನೆರೆದಾ ಚಕೋರತತಿ ಸರಸಿಜಗಳಲ್ಲಲ್ಲಿ
ಕೊರಗುತಿರೆ ದರಹಾಸಮೆಸಗುತಿರೆ ಕುಮುದಿನಿಯು ಹಿಮದುತ್ಪ್ರತಾಪದಿಂದೆ || ೪ ||

ಅಂಬರಕೆ ಕಳಿಪಿ ಶಶಿಬಿಂಬಮಂ ಜಡೆಯೊಳಿರು
ವಂಬುಜಾನನೆಯ ನೀರಧಿಗಟ್ಟಿ ಪುಲಿದೊವಲಿ
ನಂಬರಪ ಪೊದ್ದು ಕಾಂತಾಲಿಂಗನಂಗೈದು ಕೆದರುತಿಂಗಳಗಂಗಳ |
ಬೆಂಬಿಡದೆ ವಟನೆಳಲ ಸಾರಲೆಲರುಣಿವೆದೆಯ
ನಂಬರಂಗೈದು ನಿಜಪಕ್ಕಗಳನಾಳಿದನ
ನಂಬುಧಿಯ ತಾಣಗೈದಿಟ್ಟ ಹಿಮಭೂಪಾಲನುಪಟಳಕ್ಕಳ್ಕಿ ಭಯದಿ || ೫ ||

ತರಣಿಯ ಪರಾಕ್ರಮವ ತಂಪೆನಿಸಿ ಸರ್ಪಾರ್ಚಿ
ಯುರುವಿಕ್ರಮವ ಶಾಂತಿಗೊಳಿಸಿ ಜವದಿಂ ಕಂದು
ಗೊರಲನಿಂಗಳಗಣ್ಣಿನುಜ್ವಳದ ಪಜ್ಜಳವ ಗೋಪನಂಗೈದು ಬೇಗ |
ನರರ ಶಾರೀರಂಗಳೊಳು ಪೊಕ್ಕು ಬಂಧನವ
ನುರೆಗೊಳಿಸಲನುಗೈದನೋ ಹಿಮಾಧಿಪನೆನಲ್
ಪೊರಟು ಬಹ ಹಿಮಧೂಮವೇಂ ಮನಂಗೊಳಿಸುವುದೊ ಮಾನಸರ ವದನಗಳಲಿ ||೬||

ಲಲನೆಯರ ಗುರುಕುಚಾಗ್ರಿಮಭಾಗಗಳಲಿ ಪೆ
ರ್ಜಲದಂತರಾಳದಲಿ ಪ್ರಾಣಿಗಳ ಜಾಠರದಿ
ಕಲಿತಮಾಗುತಲಗ್ಗಿ ತನುಗೋಪನಂಗೈಯಲರಸುತರಿಯಂ ಕೋಪದಿ |
ಬಲಿದು ನಾಲ್ದೆಸೆಯ ಹಿಮರಾಜನುಜ್ಜೃಂಭಿಸಲ್
ನೆಲದಖಿಳಪ್ರಾಣಿಗಳ್ ನಡನಡುಗಿ ಪಲ್ಗಿಡಿದು
ಲಲನೆಯರ ಮರೆಗೊಳಲ್ಕಲ್ಲಲ್ಲಿ ತುಡುಕುತಿಹರ್ಕೈಕಿಲುಪಟಳದುರುಬೆಗಂ || ೭ ||

ರಾಜವಾಹನಗಳಲಿ ಪರಿಗಣನೆಗೈಯದಿರು
ವಾಜಿಯಂ ಸಾರಿದನಿತಕೆ ಗೋತ್ರಹತಿಗೈದು
ರಾಜಗಪಕೃತಿಯೆಸಗಿ ಮಿತ್ರಾಭಿಧಾನದಿಂದೆಸೆವ ರವಿಯರ(ಸ)ನುರುಬೆಯ(ಂ) |
ಮಾಜಿಸುತ ಕುವಲಯದ ಪೆರ್ಚುಗೆಯಃಗೈದರಿಗ
ಳೋಜೆಯಂ ನಿಲಿಸಿ ರಾಜೋಪಸೇವನೆಗೈವ
ನೈಜಜಂತುಗಳ ಪೆರ್ಚುಗೆಗೈದ ಸಾಧುಗಳನುಪದಿ ವೈಶುದ್ಧವಲ್ತೆ || ೮ ||

ಮಾತುಳನ ಪೆರ್ಚುಗೆಯ ನಿಟ್ಟಿಸುತ ಪೂರ್ವದಿ
ಗ್ವಾತಸುಳಿವುದ ಕಾಣುತರ್ಧಪೌರುಷನಾಗಿ
ತಾತಪ್ಯಮಾನದಿಂದೆಸೆವ ಹರನಂ ಕಂಡು ಮೆಲ್ಲನೈತಂದು ಪಣೆಯೊಳ್ |
ಜಾತಾಂಬಕವ ಮುಟ್ಟಿ ನಸುನಗುತ ನಿಜಶರ
ವ್ರಾತಂಗಳಂ ತೀಡಿ ನಿರ್ಭಯದಿ ತ್ರಿಜಗಮಂ
ತಾ ತಳುವದಲೆ ಗೆಲಲ್ ಬಹ ಮದನನುಪಟಳದಿ ನಡುಗುತಿರ್ದುದು ಲೋಕಮುಂ ||

ಉರು ಮಂಜುಮೌಕ್ತಿಕವ ಹೈಮಂತರಾಜನುಂ
ಧರಣಿಯೆಂಬಂಗನಾಮಣಿಗೆ ಸೇಸೆಯ ಸುರಿದ
ತೆರದೊಳೈಕಿಲ್ಬಿಂದುಗಳ ತಳೆದು ಶಾಡ್ವಲೆಯ ತೃಣರಾಜಿ ರಾಜಿಸುತಿರೆ |
ಸರಸಸಲ್ಲಾಪದಿಂ ಪಾರಿವದ ಕಾದಲರ್
ಗರಿಗೆದರಿ ಗಳಗಳಧ್ವನಿಗಳಿಂ ಮೇಲ್ವರಿದು
ಪರಿದಾಡಿ ಕೂಡುತ್ತಲಿರುತಿರ್ದುವಾ ಕಾಲಮೂಲದೊಳ್ ಪ್ರೋಲ್ಲಾಸದಿ ||೧೦||

ಹೈಮಂತವೀ ಪರಿಯಲಭಿವೃದ್ಧಿಯಾಂತೆಸೆಯು
ಲಾ ಮೌನಿಗಳ ಮಂಡಲದಿ ಕುಳಿತು ಚಿತ್ರಕರ
ಶ್ರೀಮತ್ಕಥಾಶ್ರವಣಗೈಯುತ್ತಲನುದಿನಂ ಗೋದಾವರೀಸ್ನಾನಮುಂ |
ಪ್ರೇಮದಿಂ ರಚಿಸುತ್ತಲುಚಿತಕರ್ಮಂಗಳಂ
ಭಾಮಿನಿಯೊಳೊಡವೆರೆದುಪಾಸನಂಗೈಯ್ಯುತಿರೆ
ಸೌಮಿತ್ರಿ ಫಲಸಮಿತ್ಕುಶಜಲಾದಿಗಳಿಂಬಲುಪಚರಣೆಗೈದಿರ್ದನು ||೧೧||

ಇರುತಿರಲ್ಕೊಂದುದಿನ ಸೌಮಿತ್ರಿಯಂ ನೋಡಿ
ಗುರುಭಕ್ತ ಶಾಂಕರಾಂಕಂ ದೃಢವ್ರತನೆನಿಪ
ಭರತನಂ ನೆನೆನೆನೆದು ರಘುನಾಥನಿಂತೆಂದ ಹೃದಯದನುರಾಗದಿಂದ |
ಕರುಣದಿಂ ಪಿತನಿತ್ತ ರಾಜ್ಯಭೋಗವನುಳಿದು
ಪರಮವೈರಾಗ್ಯಮಂ ತಳೆದು ನಗರಿಯ ಬಿಟ್ಟು
ತರುಣ ನಂದಿಗ್ರಾಮದೊಳಗಿರ್ಪನಾತ್ಮಸುಖಮುಳಿದೆಮ್ಮ ನೆನೆದು ನೆನೆದು ||೧೨||

ದಿನದಿನಮುಷಃಕಾಲದೊಳಗಕಟ ಶೀತಕರ
ವನದೊಳವಗಾಹನೆಯನೆಂತು ಮಾಳ್ಪನೊ ತನ್ನ
ವನಿತೆಯರನುಳಿದಖಿಳಭೋಗಂಗಳಂ ತೊರೆದು ಚೀರವಸನಗಳ ತಳೆದು |
ಘನತರದ ಶೀತೋಷ್ಣಗಳ ಸಹಿಸುತೆಮ್ಮಲ್ಲಿ
ಮನವನಿಟ್ಟನುದಿನ ಫಲಾಹಾರನೇಮದಿಂ
ತನುವ ದಂಡನೆಗೈವ ಸುಕುಮಾರ ನೀಹಾರಕಾಲದೊಳಗೆಂತಿರ್ಪನೊ ||೧೩||

ಅನುರಾಗದಿಂದೆಮ್ಮ ನೆನೆದು ನಿಜಪಿತನಿತ್ತ
ಘನತರಸುಭೋಗಗಳ ಮಾತೆಯುಪದೇಶಗಳ
ನನುವರಿಸದತುಲವೈರಾಗ್ಯದಲಿ ಸಂಪ್ರಾಪ್ತಿಸುಖವ ಲೆಕ್ಕಿಸದಿರ್ಪನು |
ಇನಿಸುವಿಧಮನಕಂಟ ತರಳನ ಶುಭಾಶ್ರಮವ
ದಿನದಿನದಿ ಸ್ಮರಿಸವೇಳ್ಕಾದುದಾದಡು ಧರಾ
ಜನರೊಳೀಪರಿಯ ನೃಪತಿಗಳುಂಟೆ ಪಾಸಟಿಯನಿಡಲುಂಟೆ ಭರತನಿಂಗೆ ||೧೪||

ಬಲುತರಪ್ರೇಮದಿಂ ಸಂಪಾದನಂಗೈದ
ನಲಘುಪ್ರಯತ್ನದಿಂ ತನ್ಮಾತೆ ತನಯಸುಖ
ಗೊಳಲೆಂದು ಸಂಪಾದಿತಾರ್ಥಂಗಳೊಂದನುಂ ಗಣಿಸದಲೆ ಮಾನಸದಲಿ |
ಸುಲಭಮೆನ್ನುತ ಮಾತೆಯಂ ತಿರಸ್ಕೃತಿಗೈದು
ಗೆಲಿದು ಸರ್ಗವ ಸರ್ವಜನರು ಪಗಲಿರುಳಾಗಿ
ಪಲವುವಿಧದಿಂ ಪೊಗಳ್ವ ಚಾರಿತ್ರಮಂ ಪಿಡಿದ ತರಳನಿನ್ನೇಂ ಧನ್ಯನೊ ||೧೫||

ಎಂದು ರಘುನಂದನಂ ಭರತನಂ ನೆನೆದು ಮೋ
ಹಾಂಧದಿಂ ಮುಂದರಿಯದಲೆ ಮರುಗುತಿರೆ ನೋಡು
ತಂದು ಲಕ್ಷ್ಮಣನೆಂದ ದೇವ ಕೈಕಾಗುಣಗಳೆಣಿಸಿ ಫಲಮೇಂ ಬಪ್ಪುದು |
ಸುಂದರಾಮೃತಕಲ್ಪಸವಿನುಡಿಯ ಸಾಧುಗಳ
ವೃಂದ ಮೆಚ್ಚುವ ನಡೆಯ ನಡೆದು ಪೊಡವಿಯ ನಲಿಪ
ಕಂದರ್ಪಸಮರೂಪನಾ ಮಹಾರಾಜನಂ ಬಿಡದೆ ನೆನೆವುದು ಮಾನಸಂ ||೧೬||

ಪರಮಧಾರ್ಮಿಕಶಿಖಾಮಣಿ ಭರತನಾತನಂ
ಪರಿಸೇವಿಸುವ ತರುಣಶತ್ರುಘ್ನರಿರ್ವರುಂ
ಪೊರೆಗೊಳಿಪರೀ ರತ್ನಪೀಠದೆಡೆಯೊಳಗೆಸೆವ ಭವದೀಯಸನ್ಮೂರ್ತಿಯ |
ಹರುಷದಿಂ ನೋಳ್ಪ ಭರ ಮಚ್ಚಿತ್ತಕೆಂದು ಸಂ
ಭರಿತಮಪ್ಪುದೊ ಯೆನುತ ಸಲ್ಲಾಪಗೈಯುತಂ
ಮರುಗಿದರ್ ಶ್ರೀರಾಮಲಕ್ಷ್ಮಣರ್ ಮಾನಸರ ಪರಿಯನಂಗೀಕರಿಸುತ ||೧೭||

ಈ ಪರಿಯಲನುದಿನಂ ಭರತನಂ ನೆನೆಯುತ್ತ
ಲಾ ಪರಮಪುರುಷ ಲಕ್ಷ್ಮಣಸೀತೆಸಹಿತ ಬಳಿ
ಕಾಪಗಾಸ್ನಾನಮಂ ರಚಿಸಿ ಸಂಧ್ಯಾಕೃತ್ಯಗಳ ಮಾಡಿ ಪಣ್ಪಲಗಳಂ ।
ಸೋಪಹಾರಂಗೈದು ಸುಖದಿಂದಲಾಶ್ರಮದಿ
ಭೂಪಾಲಕರ ರನ್ನ ನಖಿಲವರಮೌನಿಕುಲ
ದೀಪರುಸಿರುವ ಚಿತ್ರತರಕಥಾಶ್ರವಣದಿಂದಾನಂದಸಂಭ್ರಮದೊಳು ||೧೮||

ಆಮಹಾರಣ್ಯ ರಾವಣನ ಸಹಜಾತೆಗಂ
ಪ್ರೇಮಾಸ್ಪದಂ ಸ್ವೇಚ್ಛೆಯಿಂದ ಸಂಚರಿಸುತಿರೆ
ತಾಮಸೀಚರಿಯೊಂದು ದಿನದಿ ಮಂದಾಕಿನಿಯ ತೀರದೊಳ್ ಸಂಚರಿಸುತೆ ।
ಈ ಮಹಾಶ್ರಮದಿ ನಿಜಪತಿವೆರೆಸಿ ಸಂತತಂ
ಸೌಮಿತ್ರಿಯುಪಚಾರಮೆಸಗುತಿರೆ ಮಂಡಿಸಿಹ
ರಾಮನಂ ಸೋಮನಳಕೂಬರಜಯಂತಾದ್ಯರೀಶನಂ ನಿಟ್ಟಿಸಿದಳು ||೧೯||

ನಗೆಮೊಗದ ಸುಲಿಪಲ್ಲ ಪದ್ಮಪತ್ರೇಕ್ಷಣದ
ಹೊಗರ ಹೊಸಜವ್ವನದಲಾಜಾನುಬಾಹುಗಳ
ಸೊಗಯಿಸುವ ಮಾತಂಗಗಮನ ಸಿಂಹೋರಸ್ಕಮುರುಜಟಾಮಂಡಲಗಳ ।
ಸೊಗಸಾಂತ ಸುಕುಮಾರವಿಗ್ರಹಮಹಾರಾಜ
ಬಗೆಯ ಲಕ್ಷಣವಾಂತು ತೋರ್ಪ ಶ್ರೀರಾಘವನ
ಸುಗುಣಖನಿಯಂ ಕಂಡಳಾಶ್ರಮದಿ ದೂರದಿಂದಾ ಶೂರ್ಪನಖಿಯಾ ದಿನಂ ||೨೦||

ನೋಡೆ ಸಾಕ್ಷಾನ್ಮದನಮೋಹನದ ಕಣಿಯನುಂ
ಮೂಡಿತಚ್ಚರಿ ಮನಕೆ ಮನ್ಮಥಶಿಲೀಮುಖಗ
ಳೂಡಿದುವು ಹೃಚ್ಛೋಣಿತಂಗಳಂ ಮೈಮರೆದು ನೆಲಕುರುಳಿ ಮೋಹದಿಂದೆ ।
ಬಾಡಿ ಮತ್ತರೆನಿಮಿಷಕೆಚ್ಚತ್ತು ನಾಲ್ದೆಸೆಯ
ನೋಡಿ ವಿಸ್ಮಿತಳಾಗಿ ಕಾತರದಿ ಕಳವಳಿಸಿ
ಮೋಡಿಮುರಿದಾಸ್ಯದೊಳ್ ಬಂದರಿಯದಲೆ ಹಲವ ನೆನದಳುನ್ಮತ್ತೆಯೆನಿಸಿ ||೨೧||

ಅನಿತರೊಳಗರಿತು ಧೈರ್ಯವ ತಂದು ಮತ್ತೊಂದ
ನೆನೆದಳೇನೆಂಬೆ ದುರ್ಮೇಧೆಯಂ ಗೌತಮಿಯ
ವನದೆಡೆಯಲಾ ಮಹಾಪುರುಷನಡಿದಾವರೆಯ ಚೆಲುವ ನಲವಿಂದೆ ಸೋತು ।
ಎನಿತಾದೊಡೀತನಂ ವರಿಸಿದಲ್ಲದೆ ಮಾಣೆ
ನೆನುತ ನಿಶ್ಚಯಗೈದು ಘೋರರಕ್ಕಸರೂಪ
ವನು ಬಿಟ್ಟು ಮಾನುಷ್ಯವನು ತಾಳ್ದಳೀ ಲೋಕಮಚ್ಚರಿಯ ಕೊಳುವಂದದಿ ||೨೨||

ನೋಟದಿ ಮದಲಾಸೆಯ ಭ್ರೂವಿಭ್ರಮದಿ ಮದನ
ಪಾಟಲಿತಚಿತ್ರಲೇಖೆಯ ವದನಮಿಂದುಮತಿ
ಯಾಟಮಂ ಗತಿ ಜನಮನೋಹರದಲೂರುಗಳ್ ವಿಜಿತರಂಭಾಕೃತಿಯದು ।
ಕೂಟದಿ ಕಳಾವತಿಯ ಕುಡಿನೋಟಮೂರ್ವಶಿಯ
ಬೇಟದಿಂ ಮೇನಕೆಯ ಜನವಶೀಕರಣದೆಡೆ
ಯಾಟ ಕೌಶಲದೇವನಾರಿಯರ ರೂಪಮಂ ತಳೆದಳರೆನಿಮಿಷದೊಳಗೆ ||೨೩||

ಸುಲಿಪಲ್ಲ ಚೆಂದುಟಿಯ ನಳಿನಾಂಬಕಂಗಳಿಂ
ಚೆಲುವ ಕನ್ನಡಿಕದಪು ಪೆರೆನೊಸಲು ಭ್ರೂ ಚಾಪ
ಕಲಿತಸುಕಟಾಕ್ಷಗಳ ಶ್ರೀಕರದ ಶ್ರುತಿಗಳಿಂ ಕಂಬುಗಳ ಬಾಹುಲತೆಯ।
ಲಲಿತಾಂಗುಳಿಗಳಿಂದ ಪೊಂಗಲಶಕುಚಯುಗದ
ಸುಳಿನಾಭಿ ತೆಳ್ವಸಿರ ಹರಿಮಧ್ಯ ಘನಜಘನ
ಪೊಳೆಪಾಂತ ಮತ್ತಗಜಗಮನದಾಕೃತಿಯಾಂತು ತೋರಿದಳ್ ನಿಮಿಷದೊಳಗೆ ||೨೪||

ಮದನಮೋಹನಕಣಿಯೊ ಮನ್ಮಥನ ಕೂರ್ಗಣೆಯೊ
ಮಧುಸೂದನಾತ್ಮಜನ ಮುಂಗೈಯ ಮರಿಗಿಣಿಯೊ
ವಿಧುಮನಃಪ್ರೀತಿಕರರೋಹಿಣಿಯೊ ಜಗತಿಯಂ ನೋಳ್ಪರ್ಕೈತಂದ ಶಚಿಯೋ।
ಸುದತಿಯಳ ರೂಪಪೂರ್ವಕಮದೃಷ್ಟಮೆನುತ್ತ
ಮುದದಿಂದ ಮುಲ್ಲೋಕ ಮೋಹಿಪಂತಾಕೃತಿಯ
ಸದನದಂತೊಪ್ಪಿದಳ್ ಕಲಕಂಠಕಂಠಿ ಶುಕವಾಣಿ ಭುಜಗೇಂದ್ರವೇಣಿ ||೨೫||

ಪಾದಸೌಂದರ್ಯಮೋಹಿತಳೆನಿಸಿ ಶೂರ್ಪನಖಿ
ಮಾಧವನ ವಶವೃತ್ತಿಗೈವೆನೆಂಬುತ್ಸವದಿ
ನಾದಿತೇಯರ ತಿರಸ್ಕೃತಿಗೆಯ್ಯೆ ಪೂರ್ವದೊಳ್ ಮಯನಿಂದಲುದಿತಮಾದ।
ಮೇದುರ ಜಗನ್ಮೋಹನಾಕಾರಮಾಯಾನು
ಮೋದವಿದ್ಯವ ನೆನೆದಳಂದು ಖಗಮೃಗವು ಪಿಂ
ದೈದಿ ಮರುಳ್ಗೊಂಡು ಪೆರಸಾರದಂತೆಸಗಿದಳದೇನೆಂಬೆನಾ ಪರಿಯನು ||೨೬||

ಪರಿಪರಿಯ ಮೋಹನದ ವಿದ್ಯೆಯಂ ಶ್ರೀರಾಮ
ಪುರದರಸನಂ ವರಿಸಿ ಕೊಳಲು ರಾವಣನನುಜೆ
ಮೆರೆವ ಮಾಯಾತಿರಸ್ಕರಿಣೀಪ್ರಭಾವಮಂ ಪಣ್ಣಿದಳನೇಕವಿಧದಿ।
ಅರಿದೊರೆವರಾರದರ ಮೋಹನದ ಸತ್ವಮಂ
ಬೆರಗುಗೊಂಬರು ನಿಳಿಂಪಾದ್ಯರೀ ಧರೆಯೊಳಿಹ
ನರರ ಪಾಡೇನುಂಟದೆಂತುಟೋ ದಾನವರ ಕೃತಕಪ್ರಭಾವಮಗಜೇ ||೨೭||

ಅಂತು ಸಂಧಿ ೮ಕ್ಕಂ ಪದನು ೩೪೮ಕ್ಕಂ
ಮಂಗಳಮಹಾ ಶ್ರೀ ಶ್ರೀ.

— ಒಂಭತ್ತನೆಯ ಸಂಧಿ —

ಸೂಚನೆ || ಪಲವು ಮಾಯಾವಿಲಾಸದಲೊಲಿಸಲೈತಂದು
ಚೆಲುವ ಮೋಹನಸುವೇಷವ ತೋರುತಂಡಲೆವ
ಖಲನನುಜೆಯಂ ಕರ್ಣನಾಸಿಕವನಿಳಿಹಿದಂ ಕಲಿಸುಮಿತ್ರಾತ್ಮಭವನು ||

ಪದನು|| ಪೆಂಗಳ ಶಿರೋರನ್ನೆ ಕೇಳ್ ತಿರಸ್ಕರಣಿಯಿಂ
ಹಿಂಗದರೆನಿಮಿಷ ಕಂಗಳ ಮುಚ್ಚಿ ಜಾನಿಸಲು
ಸಿಂಗರದ ಮದನಂ ವಸಂತಚಂದಿರಮುಂದಮುರುತಶೃಂಗಾರಕಲಿತ |
ಸಂಗಡಿಗ ಶುಕಪಿಕಂ ಮುದ್ದಂಚೆ ಸೋಗೆಯುರು
ಭೃಂಗತತಿ ನೆರೆದುದರೆನಿಮಿಷದೊಳು ಲೋಕಮಂ
ಹಿಂಗದಲೆ ಮೋಹಿಪೊಲದೇನೆಂಬೆ ಸುಂದರೀಮಾಯಾವಿಲಾಸಕರವ || ೧ ||

ಮಧುರತರಸುಸ್ವರದ ಗುಂಭನದಿ ಕೋಗಿಲೆಗ
ಳದುಭುತದಿ ಪಾಡುತಿರಲನುಸರಿಸುತರೆಗಿಳಿಗ
ಳೊದಗಿ ನನೆಗೋಲನಾಗಮುವ ಪೇಳುತ್ತಿರಲ್ ನಡೆಯುತಿರೆ ಹಂಸಂಗಳು |
ಚದುರಿಂದಲನುಸರಿಸಿ ಶ್ರುತಿಯ ಪೆರ್ಚಿಸೆ ಭೃಂಗ
ಮದನಾಜ್ಞೆಯಿಂದ ನಿಟ್ಟಿಸಿದ ಜಂತುಗಳೆಲ್ಲ
ಮುದದಿಂದ ಬೆಂಬತ್ತಿ ಬರತೊಡಗಿತುಳಿದ ಜನರಿರವದೇಂ ಬಣ್ಣಿಸುವೆನು || ೨ ||

ಮೆಲುನಡೆಗೆ ನೃಪಕೀರ ನಾಚಿದುವು ಮೋಚಕಂ
ಬಳುಕಿದುವು ನುಣ್ದೊಡೆಗೆ ತಲೆಗುತ್ತಿ ತುಂಬಿಗ
ಳ್ಮೊಳಗಿದುವು ತನುಗಂಧ ಮಕರಂದಕಾನಂದಗೊಳುತಂದು ವಂದಿಗೆಯೊಳು |
ಬೆಳಗಿತಾಗೆಣ್ದೆಸೆ ಕಟಾಕ್ಷಗಳ ಹೊಳಹಿನಿಂ
ಥಳಥಳಿಸಿ ಮನ್ಮಥನ ಮದದಾನೆಯೆಂದೆನಿಸಿ
ಖಳಯುವತಿ ತಾ ಜಗನ್ಮೋಹಿನಿಪೊಲಾಗೆನಿಸಿ ಗಮಿಸಿದಳ್ ಮಾಯೆವೆರಸಿ || ೩ ||

ಮಚ್ಚನಯನಾಪಾಂಗದಚ್ಚಪ್ರಭಾವದಿಂ
ಮಚ್ಚುಗೊಂಡಂತಖಿಳಪ್ರಾಣಿಗಳ ಪಿಂದಿಟ್ಟು
ಚಚ್ಚರಗಳುಳಿದು ಮರಳಾಗಿ ಮರಳದಲಿರಲ್ ತನುಗಂಪನುಂಬರೈದೆ |
ಬೆಚ್ಚದೈತಹ ಮಿಳಿಂದಗಳ ಗಾನಕೆ ನಟಿಸು
ತಚ್ಚರಿಯ ತೋರುತಿರೆ ಸೋಗೆ ಜೀವಂಜೀವ
ಮಚ್ಚುಗೊಂಡೈದುತಿರಲೇಂ ಪೇಳ್ವುದಾ ಜಗನ್ಮೋಹನದ ವಿಗ್ರಹವನು || ೪ ||

ಪಲವು ಮಾತೇನುಂಟು ಶೃಂಗಾರರಸ ಮೂರ್ತಿ
ಕಲಿತಮಾಗುತೆ ಧರಾವಲಯುಮಂ ಮೋಹಿಸುವ
ರೊಲವಿಂದಲೈತಂದುದಖಿಳಪ್ರಾಣಿಗಳ ಮೋಹಾಕಲಿತಗೊಳಿಸಲ್ಕೈದೆ |
ನೆಲಕಿಳಿದುದೆಂಬ ಮುನಿತಿಲಕರಚ್ಚರಿವಟ್ಟು
ಕಳೆಗುಂದಿ ನೋಡುತಿರಲನ್ನೆಗಂ ಮೋಹಿನಿಯ
ನೊಲಿಪ ತವುರೆನಿಪಂತೆ ಮೆಲ್ಲನೈತರುತಿರ್ದಳಾಶ್ರಮದ ಪೊರೆಗೆ ನಯದಿ || ೫ ||

ತಿಲಕಮಂ ತಳ್ಕಿಸುತೆ ಚಿಗುರಿಸುತೆ ಕುರಬಕವ
ನಳಿನಗಳ ಚುಂಬಿಸುತೆ ಸೂಡುತ್ತಶೋಕಮಂ
ಫಲಗಳಂ ಸೇವಿಸುತ್ತಡಿಗಡಿಗೆ ಕುಡಿಗೊಳಿಸುತೆಳೆಲತೆಗಳೊಯ್ಯೊಯ್ಯನೆ |
ಅಳಿಗಳಂ ಪಾಡಿಸಾಘ್ರಾಣಿಸುತೆ ಮಲ್ಲಿಗೆಯ
ಗಿಳಿಗಳಂ ನುಡಿಸುತ್ತೆ ತೆವರಿಸಿ ಜಿತೇಂದ್ರಿಯರ
ಕಳವಳಂಗೊಳಿಸುತ್ತೆ ಗರುವಾಯಿಗಮುಕದಿಂ ಶೂರ್ಪನಖಿ ಸುಳಿದಳೊಲಿದು || ೬ ||

ಅಲರಂಬನೀಯೆ ಕರಲಾಘವವ ಮುದ್ದಂಚೆ
ಯೊಲಪಿಂದಲೆಚ್ಚರಿಪೆ ಪೊಗಳುತಿರಲರಗಿಳಿಗ
ಳೊಲಿದುಗ್ಘಡಿಸೆ ಮುಂದೆ ಕಲಕಂಠತುಂಬಿಗಳ್ ಸಂಚುಗಳ ಪಾಡುತಿರಲು |
ಮಲಯಾನಿಲಂ ಚಂದ್ರ ಬಸವಂತರನುಪದದಿ
ಲಲನೆಯ ಯಶೋರಾಶಿಯಂ ಪೇಳುತ್ತೈತರಲ್
ಕಲುಮುರಂಗಳು ಮರುಳುಗೊಳುವಂತೆ ಬಂದಳಾಶ್ರಮದೆಡೆಗೆ ಶೂರ್ಪನಖಿಯು || ೭ ||

ಹರನ ತಪಕಂತರಾಯವನೆಸಗಲೈತಂದ
ಗರುವ ಸುರಕನ್ನೆಯರ ದೊರೆ ಯಿಾಕೆಯೆಂಬಂತೆ
ನಿರುಪಮಾನಂದಂ ನಿರೀಹನಿರ್ಮಾಯನಂ ಮಾಯೆಯಿಂ ಮೋಹಿಸುವೊಡೆ |
ಪರಿಪರಿಯ ಮೋಹನಾಕೃತಿಯಾಂತು ಚಿತ್ರಕರ
ಸರಸನುಡಿಗಳಿನಸುರೆ ಬಂದು ರಘುರಾಜೇಂದ್ರ
ನಿರುವೆಡೆಗೆ ಮುಸುತೆಯೊಳ್ ಮೂದಲಿಸಲನುಗೈದಳರಗಿಳಿಯ ನುಡಿಗಳಿಂದೆ || ೮ ||

ನೋಡಿ ಜಾನಕಿದೇವಿ ಕರಣಧೃತಿ ಕಂಪಿಸ
ಲ್ಲಾಡಿಸಾಗಾಸುರೆಯ ಲಾವಣ್ಯರಸನೆ (ಕೆ)ಸು
ಪ್ರೌಢಿಗಂ ಬೆರಗುತಳ್ಕಿದಳು ಜಗದೊಳಿನ್ನಾವಹೆಟ್ಟಿಗೆ ಪಡೆದಳೊ |
ಗಾಡಿಕಾತಿಗ ಸೋಲದವರಾರು ಪಾವಕಗೆ
ನಾಡಿನೊಳ್ ನವನೀತಕರಗದಿರ್ದಪುದೆ ತಾಂ
ಬೇಡಮೆಂದೆನಿಸದಿರದರಸಂಗೆ ಮುಂದೆನಗೆ ಗತಿಯೇನುಯೆನುತಿರ್ದಳು || ೯ ||

ದೇವರಾವೆಡೆಯಿಂದಲೈತಂದುದೀ ವನಕ
ದಾವ ದೇಶಾಧಿಪರ್ ಬರವದೇಂ ಕಾರಣದೊ
ಈ ವಸುಧೆಗಾದುದೀ ಸಿರಿಮೊಗವ ನಿಟ್ಟಿಸಲ್ ಚಕ್ರೇಶಲಕ್ಷಣಗಳು |
ಠೀವಿಯಿಂ ಕಾಣುತಿದೆ ಶರಚಾಪಲಾಂಛನಗ
ಳೋವಿ ಕಂಗೆಸೆವುತಿವೆ ಮುನಿವೇಷ ಬಂದೊದಗಿ
ತಾವ ಪರಿಯದನರಿಪವೇಳ್ಕು ನವಮೋಹನಾಕಾರ ಕರುಣದೊಳೆಂದಳು ||೧೦||

ನರರಾಕೃತಿಯನಾಂತು ನಾಸತ್ಯರೇಂ ನೆಲಕೆ
ಬರವಾಯ್ತೊ ಮಘವನೇನೀ ಧರಾತಳವನುಂ
ಹರುಷದಿಂ ನೋಳ್ಪೊಡೈತಂದನೋ ಸುತಗೂಡಿ ಮಗುಳೆ ರವಿಶಶಿಗಳೇನು |
ಸರಸಾಕೃತಿಯನಾಂತು ಧರಣಿಗಂ ಬಂದಿಹರೊ
ಮೆರೆವ ನೃಪವೆಂಜನಾನ್ವಿತರೆನಿಸಿ ಯೆಲ್ಲರಿರ
ಲರಿನಿಕೃಂತನನಾ ಜಗನ್ಮೋಹನಾಕಾರದಿಂದೆಸೆವುದೇನುಸಿರ್ವುದು ||೧೧||

ಕರ್ಕಶದ ಖರದೂಷಣಾದಿರಕ್ಕಸನಿಚಯ
ದಿಕ್ಕೆ ಮಗುಳೀ ವನಂ ದೇವದಾನವರುಗಳು
ದಿಕ್ಕ ನಿಟ್ಟಿಸುವರಸದಳ ಮಹಾಘೋರತರ ಬನದೊಳಂ ಬಂದುದೆಂತು |
ಪೊಕ್ಕು ಪೊರಡುವರುಂಟೆ ಕಾನನವ ಲೋಕದೊಳ
ಗೆಕ್ಕತುಳಬಲಯುತರ್ ಬರವಿದದ್ಭುತಮೆನಿಸಿ
ಮಿಕ್ಕುತಿದೆ ಮುನಿವೇಷದೊಡೆಯು ಮಾನಿನಿಯಿರ್ಪಳೇಂಕಾರಣಂ ಪೇಳ್ವುದು ||೧೨||

ಚೆಲುವ ನಿಟ್ಟಿಸುತಾನು ಬಲುತರಾಕಾಂಕ್ಷೆಯಿಂ
ಪಲವು ವಿಧ ಕಣೆಗಳಿಂದೀಡಾಡಿ ಮನ್ಮಥನ
ಬಲಕಂಜಿ ಬಂದು ಮರೆವೊಕ್ಕೆ ದಯದಿಂದೆನ್ನ ಪತಿಯೆನಿಸಿ ಕರವ ಪಿಡಿದು |
ಸುಲಭಮೆಂದೆನಿಸು ಸ್ಮರನಂ ರಸಿಕರಗ್ರೇಶ
ಕುಲನೆಲಂಗಳನೊರೆದು ಕೃತಕೃತ್ಯಳಂ ಮಾಳ್ಪ
ದೊಲವಿಂದಲೆನುತ ಬೆಸಗೊಳೆ ರಾಘವಂ ನುಡಿದ ನೀಕ್ಷಿಸುತ ನಸುನಗೆಯೊಳು ||೧೩||

ಪುರುಹೂತಸಖ ತರಣಿಕುಲರನ್ನ ದಶರಥನ
ತರಳ ಶ್ರೀರಾಮುಮೆಂಬಭಿಧಾನಮಿಾ ತರುಣ
ಘುರವಿಜಯನನುಜಾತಲಕ್ಷ್ಮಣಾಭಿಧ ಸತಿಯು ಜನಕಸುತೆ ಧರಣಿಜಾತೆ |
ಪರಮಕಾರುಣಿಕಪಿತನಪ್ಪಣೆಯೊಳೀ ವನಕೆ
ಬರವದಾದುದು ಪುಸಿಯ ನುಡಿಯೆವೆಂದಿಗು ಪೇಳ್ವ
ಪರಿಯಲ್ಲ ನರರು ಬಾಹುಜರೆಂದು ತಿಳಿವುದಿದ ನನ್ನಿಯಿಂದಬ್ಜವದನೆ ||೧೪||

ಪಿತನಾಜ್ಞೆಯಂ ಸಲಿಸಲೆಂದು ಲಕ್ಷ್ಮಣನು ಭೂ
ಸುತೆಸಹಿತ ಬನಕೈದಿ ಚಿತ್ರಕೂಟದಲಿರ್ದು
ಮತಿವಂತಕಲಶಭವನನುಮತಿಯೊಳೀ ನದೀತಟದಿ ವಾಸಂಗೈದೆವು |
ಅತಿಕೋಮಲಾಂಗಮತಿಸೌಂದರ್ಯಕಲಹಂಸ
ಗತಿ ಚತುರಮಾತುಳ್ಳ ಸುಕುಮಾರಿ ಮಾರಸತಿ
ಗತಿಶಯದ ರೂಪಾಂತರಣ್ಯದೊಳ್ ಚರಿಪುದೇಂ ಶ್ವಾಪದಂಗಳ ಸಂತೆಯೊಳ್ ||೧೫||

ಪಸಿವುನೀರಡಕೆಬಿಸಿಲುಪಟಳಂಗಳಂ ಸೈಸಿ
ಪೊಸತೆನಿಸಿ ಲಾಲಿತ್ಯಮಾನಸದೊಳಂ ನೀನು
ನಸುನಗುತ ಬಂದಿರ್ಪೆ ಭವದೀಯವೃತ್ತಮೆಳ್ಳನಿತನುಂ ಮರೆಗೈಯದೆ |
ಪುಸಿಯನುಸಿರದೆ ದಿಟವನೊರೆವುದೆನಲಾ ಕಾಂತೆ
ಕುಸುಮಶರನುರುಬೆಯಿಂ ಕಂಗೆಟ್ಟು ಕಾತರದಿ
ಪೊಸವೆನಿಪ ಮಾತುಗಳ ಪೇಳ್ವುದುಳಿದುಂ ನಿಜವನುಸಿರಲನುಗೈದಳೊಲಿದು ||೧೬||

ಹರಸಖಾನುಜ ಬ್ರಹ್ಮಋಷಿಜಾತ ಬಿಡುಗಣ್ಣ
ರೆರೆಯುಮುಖ್ಯರ ಗೆಲಿದಖರ್ವಸಂಪದವೀರ್ಯ
ವೆರೆದ ದಶಕಂಠ ಮಗುಳವನನುಜಕುಂಭಿತಮಗಾಧನಿದ್ರಾಮುದ್ರಿತಂ |
ಪರಮಧಾರ್ಮಿಕವಿಭೀಷಣ ತೃತೀಯಂ ಮಗುಳೆ
ಖರದೂಷಣರೆನುತ್ತಲಿರುವರನುಜಾತರುಂ
ಹರಿಯುಕ್ತವಿಕ್ರಮರ್ ಮತ್ತವರೆಡೆಯೊಳಾನು ಶ್ರೇಷ್ಠರನುಜಾತೆಯರಸ ||೧೭||

ಪರಮಪ್ರೇಮದೊಳೆನ್ನನರೆಗಿಳಿಯ ಸಲಹಿದಂ
ತರಿನಿಷೂದನರಮಿತಹಿತದಿಂದ ಪೊರೆದರೀ
ಧರೆಯೊಳೆನ್ನಿಚ್ಛೆಯಿಂದಿರ್ಪಂತೆ ನಿಯಮನಂಗೈದರದರಿಂದಲಾನು |
ಚರಿಪೆಂ ಜನಸ್ಥಾನಗಹನದೊಳ್ ಮನಬಂದ
ಪುರುಷರನ್ನೊಲಿಪರಾನನುದಿನಂ ತೊಳಲುತಿಹೆ
ನರಸ ಪಾಸಟಿಯನರಸುರರೊಳಾರನುಂ ಕಾಣದಂಗಜಪ್ರೇರಣೆಯೊಳು ||೧೮||

ಪಲವುಕಾಲಕೆ ಮನೋರಥಲತೆಯು ಪೆರ್ಚಿ ಸ
ತ್ಫಲವನಾಂತಂತೆನ್ನ ಕಂಗಳೆದಿರೊಳ್ ತೋರ್ದ
ಚೆಲುವರಿಗೆ ಚೆಲ್ವ ನಿಪುಣರ ನಿಪುಣ ನೀ ದೊರೆದೆ ಯೆನ್ನ ಕೃತಸುಕೃತದಿಂದೆ |
ನಲವಿಂ ಪರಿಗ್ರಹಿಸಿ ವೈಭವದ ಗಿರಿಸಾನು
ಗಳಲೆಸೆವ ಶೃಂಗಾರಬನಬನಗಳೆಡೆಯ ಸುಖ
ಕಲನೆಯಿಂ ಕ್ರೀಡಿಪುದು ಸುರಲೋಕಸೌಖ್ಯಕಿಂದಿಮ್ಮಡಿಸಿ ಪ್ರೀತಿವೆರಸಿ ||೧೯||

ಬೇಡಿದುದನೊಲಿದೀವೆ ಬೇಕಾದ ಭೋಗಮಂ
ಕೂಡೆ ಕೈಸಾರಿಸುವೆ ತ್ರಿಭುವನೋನ್ನತಶೌರ್ಯ
ನಾಡೆನಿಪ ಸಾಹಸಿಕ ಸಾಹಾಯದಿಂ ಮೂರುಲೋಕಗಳವಶಗೈವೆನು |
ಈಡಲ್ಲದೀ ಮನುಜಕೀಟಸತಿಯಂ ಬಿಟ್ಟು
ಕೂಡೆನ್ನ ವರಿಸು ಮನದಿಚ್ಛೆಬಂದಂತಮಿತ
ಗಾಡಿಯಾಕೃತಿಯಾಂತು ಪೇಳ್ದಂತೆ ಮಾನಸೋಲ್ಲಾಸಕರನೆನಿಪೆ ನರಸ ||೨೦||

ಸ್ಮರವಶಾರ್ತತೆಯಿಂದ ಶೂರ್ಪನಖಿ ಪರಿಪರಿಯ
ಸರಸಮೃದುತರದೈನ್ಯವೆರೆದ ಮಾತುಗಳಿಂದ
ಕರುಣ ಪುಟ್ಟುವೊಲೆಸಗಿ ಕಾಮನುರುಬೆಗೆ ಸಹಿಸದೊಳಗಿರ್ದ ಹೃದಯದಿರವ |
ಮರೆದೊರೆದ ದಾನವಿಯ ನಿರವ ನಿಟ್ಟಿಸುತ ನಗೆ
ವೆರೆದ ಮೃದುನುಡಿಗಳಿಂದಿಂತೆಂದ ಶೃಂಗಾರ
ತರಸುಪ್ರಸನ್ನಸುಂದರಿ ನೀನು ನಿನಗೆಣೆಯರಾರುಂಟು ಪುರುಷರೊಳಗೆ ||೨೧||

ಒಲವರಿದು ನಿನ್ನ ಮನದುಲುಹ ಪಿಡಿದತ್ಯಂತ
ಚೆಲುವ ವಿಭ್ರಮವಿಲಾಸಗಳಿಂದ ಸ್ವಚ್ಛಂದ
ಕಲಿತನಾಗುತ ನದೀನದಪರ್ವತಾದಿಗಳ ರಮ್ಯಸ್ಥಳಂಗಳಲ್ಲಿ |
ಪಲಬಗೆಯ ಕ್ರೀಡೆಗಳ ಸಲಿಸಿ ರಂಜನೆಗೈವ
ಕಲಿಕರುಣಶೃಂಗಾರಭಾವಜ್ಞ ದೊರೆಕಿದೊಡೆ
ಗೆಲುವೆ ಮನ್ಮಥನುರುಬನಲ್ಲದುಳಿದವರಿಂದಲುಪಶಾಂತಿ ತಾನಪ್ಪುದೆ ||೨೨||

ಸತಿಯರಿಗೆ ಸವತಿಯಿಪ್ಪೊಡೆಯು ಸುಖಲೇಶಸಂ
ಗತಿಯಾಗಲರಿದು ಶೃಂಗಾರಮಂ ಬಯಸಿ ಬಂ
ದತಿಶಯದ ವೈಕಾರಬೀಭತ್ಸನದರೊತ್ತ ಸಾರ್ಚಿದಂತಪ್ಪುದಬಲೆ |
ಕೃತದಾರನಾಗಿರ್ಪೆನದರಿಂದೆ ಭವದೀಯ
ರತಿಗೂಣೆಯಂ ಬರ್ಪುದದರಿಂದಲನುರೂಪ
ಜೊತೆಯನುಸಿರುವೆ ಚಿತ್ತ ಬೇಟದಾಟಗಳೆಲ್ಲ ಕೈಸಾರ್ವುದತಿಮೋದದಿ ||೨೩||

ಎಳೆಯ ಜವ್ವನಿಗ ರೂಪಯುತಮೋಹನಮೂರ್ತಿ
ದಳೆದಂ ಮನುಜನಿರ್ಪನನುರೂಪ ನಿಜಚಿತ್ತ
ನಿಲಯದಂತಸ್ತಾಪಹರಗೈವನೆನುತುಸಿರ್ದ ಪರಿಹಾಸವಚನಗಳನು ।
ತಳೆದು ನಿಜಮೆಂದೆನುತ ಲಕ್ಷ್ಮಣನ ಪೊರೆಗೈದಿ
ನಳಿನಬಾಣಸಮಾನ ನೀನೆನಗೆ ಪತಿಯೆನಿಸಿ
ನಳಿತೋಳ್ಗಳಿಂದಪ್ಪಿ ಸಂತವಿಸು ಮದನಾನಲೋದ್ಧತಿಯ ಕ್ರೂರಹತಿಯ ‖೨೪‖

ನೇಮವಾಯ್ತಗ್ರಜನ ನೀನೆನಗೆ ಪತಿಯೆನಿಸಿ
ಕಾಮನಟ್ಟುಳಿಯುಳಿಸು ಶಶಿವಸಂತಾದಿಗಳ
ಭ್ರಾಮಕಂಗಳ ಪಳಿದು ಸಗ್ಗಸುಖಕಿಮ್ಮಡಿಯ ಭೋಗಂಗಳಂ ಸ್ವಾದಿಸಿ ।
ಸೌಮನಸ್ಸಿನೊಳಿರುವದುಚಿತ ಯವ್ವನಮುಳಿದು
ತಾಮಸದ ವಾರ್ಧಕದೊಳೇಂ ಕಾಣ್ಬೆಯೆನುತಸುರ
ಕಾಮುಕಿಯು ಪರಿಪರಿಯೊಳೊರೆದ ವಾಣಿಯ ಕೇಳಿ ಸೌಮಿತ್ರಿ ನಗುತೆಂದನು ‖೨೫‖

ಅತಿಶಯದ ಜವ್ವನಂ ಸಂಪತ್ಸ್ವತಂತ್ರಸಂ
ಯುತಪುರುಷರೊಡಗೂಡಲಪ್ಪುದು ಮನೋರಥಂ
ಕ್ಷಿತಿಯೊಳಾಗಾರ್ದೊಡಂ ಪರತಂತ್ರ ಡಿಂಗರಿಗನಂಗಸಂಗವನು ಬಯಸಿ ।
ಸತಿಯರೇನುಂಬರವನಂತೆ ದಾಸೀಜನದ
ಜೊತೆಯೊಳಿರೆ ಸೌಖ್ಯಮೇನಿಹುದು ರಘುಕುಲರನ್ನ
ಪತಿ ಯೆನಗೆ ದಾಸ ತಾಂ ತಿಳಿಯೆನುತ ನಸುನಗೆಯಲುಸಿರ್ದನಾಸುರೆಯೊಳಾಗಾ ‖

ಸೌಮಿತ್ರಿಯೊರೆದವಾಣಿಯ ಕೇಳಿ ಶೂರ್ಪನಖಿ
ಕಾಮುವಶವಾರ್ತೆಯಿಂ ಕಂಗಾಣದೀ ವಚನ
ಸಾಮಾನ್ಯಮೆಂದರಿತು ರಘುವೀರನೆಡೆಗೈದಿ ಕುಪಿತಮಾನಸಳೆನಿಸುತೆ ।
ಸೋಮಸನ್ನಿಭವದನ ಚಾತುರ್ಯಗಳಸದನ
ಕೋಮಲಸುಗಾತ್ರ ವಿಕಸಿತಕುಶೇಶಯನೇತ್ರ
ನೀ ಮಹಾಪ್ರಾಜ್ಞ ಮನ್ಮಥವೇದಸಾರಜ್ಞನೆನುತರಿತು ಮೋಹಿಸಿದೆನು ‖೨೭‖

ಮನದೊಲವನರಿದು ಮನ್ನಿಸದೆ ನಾನಾಪರಿಯ
ವಿನಯದಿಂ ವಂಚಿಪುದಿದಾವನಿಪುಣತೆ ಮನುಜ
ವನಿತೆಯಂ ನಚ್ಚಿ ಮಗುಳೆನ್ನುಪೇಕ್ಷಿಸಲೀಗ ಸೌಮಿತ್ರಿಸೀತೆಯರನು ।
ತಿನುವೆನರೆನಿಮಿಷದೊಳ್ ಬಳಿಕ ನಿನ್ನಂ ಬೆರೆದು
ಬನಬನಂಗಳೊಳಮಿತಸೌಖ್ಯತಾಣಂಗಳಂ
ಮನಸಿಜನ ಕಲೆಯಿಂದ ಕಳೆಯಿನಿಪೆನೆನುತಸುರೆ ಘರ್ಜಿಸಿದಳಾಗ್ರಹದೊಳು ‖೨೮‖

ಮೊದಲು ತರುಣತೆಯಾಂತ ಕಾಮಾಗ್ನಿ ಪರಿಹಾಸ
ದುದಯಮುನ್ನಾಂತು ಕ್ರೋಧೋತ್ಸಂಗಮುನ್ನಡರೆ
ಕೆದರಿತಳಕಾಳಿ ಯಾಕ್ಷಣದೊಳಿಂಗಳದೊತ್ತ ತಾಳ್ದುವಸುರೆಯ ಕಂಗಳು ।
ಪದರುತಿವೆ ಕಂಪನಂ ತರಣಿಸಂಭವನಿರ್ಪ
ಸದನಮೆನೆ ಬಾಯ್ದೆರೆದು ಬರ್ಪ ರಕ್ಕಸಿಯು ಕದ
ಬದವ ನಿಟ್ಟಿಸಿ ರಾಮ ಸೌಮಿತ್ರಿಯೊಡನೆಂದ ಸಮಯಕರಮೆನಿಪುದೊಂದ ‖೨೯‖

"ಅಸಮಾನಭಾಷಣಮನರ್ಥಕದ ಹೇತು"ವೆಂ
ದುಸಿರ್ವ ಪಂಡಿತರರ್ಥ ಸಾರ್ಥಮಾಯ್ತುವಸರದೊ
ಳಸುರೆಯಂ ವೈರೂಪ್ಯಗೈದು ನಿಗ್ರಹಿಸದಿರಲಹುದನರ್ಥತೆ ಕ್ಷಣದೊಳು |
ವಸುಮತೀಯಣುಗಿ ಭಯಗೊಳುವಳೆನ್ನುತೆ ಕೋಪ
ದೆಸಕದಿಂ ರಘುವೀರ ಬೆಸಸಿತ್ತೊಡನುಜನ್ಮ
ಬಿಸುಗೋಪದಿಂ ಪಿಡಿದನಸುರೆಯಂ ಧಿಕ್ಕರಿಸಿ ಮುಂದಲೆಯ ಮುಂಭರದೊಳು ||೩೦||

ಕಿಡಿಯಿಡುವ ಕಡುಗೋಪದಿಂದ ಖಡ್ಗವ ಪಿಡಿದು
ತುಡುಕಿ ದಾನವಿಯ ನಾಸಾಚ್ಛೇದನಂಗೆಯ್ದು
ಬಿಡದೆರಡುಕಿವಿಗಳನ್ನಿಳಿಹಿ ಪದದಿಂದೊದೆದು ಧಿಕ್ಕರಿಸುತಟ್ಟೆ ಭರದಿ |
ನಡುಗಿ ನಾನಾವಿಧದ ಘೋರನಿಸ್ವನಗಳಂ
ಕೊಡುತಳಲುತಾರ್ಭಟಿಸುತಾವೆಡೆಯೊಳಂ ನಿಲದೆ
ಕೆಡೆಪುತಂ ಭೂತಳಕೆ ರುಧಿರಪ್ರವಾಹಮಂ ಶೂರ್ಪನಖಿ ಚಿಗಿದಳೊಡನೆ ||೩೧||

"ಕಾಮುಕತೆಯಿಂದ ಕಳವಳಿಪ ಜಂತುಗಳಿಂಗೆ
ನಾಮಮುಳಿವುದೆ ಜಗತಿಯೊಳ"ಗೆಂಬ ಗಾದೆಯುಂ
ಸೌಮಿತ್ರಿ ಸರ್ವಜನರಿಂಗರಿಪುವಂದದಿಂ ಕರ್ಣನಾಸಗಳನಿಳಿಹಿ |
ಕಾಮಚರನನುಜೆಯಂ ಕಳಿಪಿ ಸುಖದಿಂದ ಶ್ರೀ
ರಾಮಪುರದರಸನಂಘ್ರಿದ್ವಯದ ಸೇವೆಯೊಳ್
ಭೀಮಬಲ ಲಕ್ಷ್ಮಣಂ ಬೆಳಗುತಿರ್ದಂ ಬನದಿ ಬಸವಂತನೆಂಬಂದದಿ ||೩೨||

ಅಂತು ಸಂಧಿ ೯ಕ್ಕಂ ಪದನು ೩೭೦ಕ್ಕಂ.
ಮಂಗಳಮಹಾಶ್ರೀಶ್ರೀ.

— ಹತ್ತನೆಯ ಸಂಧಿ —

ಸೂಚನೆ || ತ್ರಿದಶದಲ್ಲಣ ಚತುರ್ದಶದೈತ್ಯಮಲ್ಲರಂ
ಸದೆದು ರಣಭೂಮಿಯೊಳ್ ಚಂಡಭಾಸ್ಕರನಂತೆ
ಕದಗಲಿಸಿ ರಘುವೀರನಿರಲನ್ನೆಗಂ ಬಂದನಾ ಖರಾಸುರ ಕೋಪದಿ |

ಪದನು|| ಧಾರಿಣೀಧರತನುಜೆ ಕೇಳ್ ಶೂರ್ಪನಖಿ ಯಮಿತ
ದಾರುಣಸ್ವರದಿಂದ ಸಂವರ್ತಮೇಘ ಮೊರೆ
ದಾರುಣಾಸಾರಮಂ ಕರೆಯುತ್ತಲೈದುವಂತಾರ್ಭಟಿಸಿ ಘುಡುಘುಡಿಸುತ |
ಆರಾಮುಮಧ್ಯಸ್ಥ ಖಗಮೃಗಂಗಳ್ ಬೆದರೆ
ಚೀರುತಿರಲೆಡಬಲದಿ ಸಿಂಹಶಾರ್ದೂಲಗಳ್
ತೋರಭಯದಿಂದಲಲ್ಲಲ್ಲಿ ಮುನಿಜನರೆಲ್ಲ ತಲ್ಲಣಿಸಿ ನಡುಗುತಿರಲು || ೧ ||

ಕೊರೆದು ಕಳಚಿದ ಕರ್ಣನಾಸಿಕವ ಕೈಕೊಂಡು
ಭರದಿಂದ ಶೂರ್ಪಣಖಿ ಮೃತ್ಯುದೇವತೆಯಂತೆ
ಖರನ ಕಾನನಕೈದಿ ಕೆಡೆದಳೆಡೆಯೊಳ್ ಮಹಾಶನಿ ಬೀಳ್ವ ಮಾಳ್ಕೆಯಿಂದ |
ಬಿರುನುಡಿಗಳಿಂ ಬೈದು ಬೆದರದಲೆ ಕೋಪಿಸುತ
ಉರಿ ಮುಸಗೆ ಕಂಗಳೊಳು ಸುರಿವ ರುಧಿರೌಘದಿಂ
ಪೊರಳಿದಳ್ ಗೋಳಿಡುತಮಾರಣ್ಯಜಂತುಗಳ್ ನಡುಗಿ ಕಳವಳಿಸುವಂತೆ || ೨ ||

ಇಂತಮಿತಶೋಕಸಾಗರಮಗ್ನಳೆನಿಸಳುವ
ಭ್ರಾಂತೆಯಂ ಕಂಡು ಖರ ಕಡುಗೋಪ ಪೆರ್ಚುತಂ
ಚಿಂತಿಸದುದಾರದುರುನುಡಿಗಳಿಂ ಬೆಸಗೊಂಡ ಭಗಿನಿಯಂ ಕುಸ್ತರಿಸುತ |
ಇಂತಿದಾರಿಂದಾದುದುಸಿರುಸಿರು ವಿಷವನೋ
ರಂತೆ ಪೀರ್ದವನಾರು ಕಾಲಪಾಶವ ಸುಮ
ಭ್ರಾಂತಿಯಿಂ ಕೆಳೆಗೊಂಡನಾರು ದುರ್ಮೇಧಸನ ಪೆಸರದೇಂ ಪೇಳೆಂದನು || ೩ ||

ಮತ್ತಾವ ದುರ್ಬುದ್ಧಿಯಿಂದ ಕಾಳಾಹಿಯ
ನ್ನೊತ್ತಿ ಕರದಿಂ ಪಾದಬಲಯುತನ ಪೆಸರದೇ
ನಿತ್ತೆರದ ಬಲಿಯದಾರೇಂ ಕತದಿ ವೈಕಾರಮುಡಸಿತಾ ಪರಿಯನೆಲ್ಲಂ |
ಬಿತ್ತರಿಸಲವ ದೇವಯಕ್ಷಗಂಧರ್ವಾಧಿ
ಪತ್ಯದೊಳಗಾವನಾದರು ತರಿದು ಶಾಕಿನಿಗೆ
ತುತ್ತೆನಿಸದಿರ್ದಪೆನೆ ಪೇಳುಪೇಳೆಂದೆನುತ ಪಲ್ಮೊರೆದು ಮೊರೆದೆಂದನು || ೪ ||

ಕಾಲನಂ ಕೆಣಕಿ ಬಾಳ್ದಪರೆ ಹಾಲಾಹಲವ
ಲೀಲೆಯಿಂ ಪೀರ್ದು ಬದುಕುವರುಂಟೆ ಮೃತ್ಯುಸಂ
ಚಾಲನಂ ಗೈದು ಬಾಳ್ದವರುಂಟೆ ಕಾಳ್ಕಿಚ್ಚ ಮುಚ್ಚುತೊಡಲುಳಿದರುಂಟೇ |
ಬಾಲಿಶನದಾವನೀ ಸಂವರ್ತಕಾಲದು
ಜ್ವಾಲಭೈರವನಿಗಪಕೃತಿಗೈದನೆಂಬುದ
ನ್ನಾಲಸ್ಯಗೈದಾತನುಸಿರೆಂದು ಬೆಸಗೊಂಡ ಕ್ರೋಧದಿಂ ದನುಜಾತೆಯಂ || ೫ ||

ಸುರರೆರೆಯನಲ್ಲದೆಮಗಪಕಾರಲೇಶಮಂ
ಸ್ಮರಿಸುವವರುಂಟೆ ಮುಲ್ಲೋಕದೊಳ್ ನಿಂದೆನ್ನ
ಶರಗಳುರೆ ಬಿಸಿರಕುತಧಾರೆಗಳನುಂಡುಂಡು ತೃಪ್ತಿಗೈದಪುವು ಬಳಿಕ |
ಕರುಳ ಖಂಡಂಗಳಂ ಧರಣಿಯೊಳಗುಳ್ಳಖಿಳ
ತರುಣಪೈಶಾಚಶವ್ಹಾಪದಂಗಳು ತಿಂದು
ಸುರಿವ ರಕುತವನೀಂಟೆ ಸಂತೋಷಕರಪಾಗಿ ಪೊಗಳಿ ಪಾಡುವುವೆಂದನು || ೬ ||

ಆಲಸ್ಯಮೇತಕಪಕೃತಿಗೈದ ದುರ್ಮೇಧ
ಸಾಲಸನ ಪೇಳೆನುತಲರೆಯೆ ಪಲ್ಗಳ ಕೋಪ
ಜಾಲಸಂಕಲಿತಖರನಂ ನೋಡಿ ಶೂರ್ಪನಖಿ ಮನದಿಷ್ಟ ಸಲುವುದೆಸುತ |
ಮೇಲೊರೆದಳಳುತಳುತ ಕೇಳಣ್ಣ ಸುಕುಮಾರ
ಬಾಲಕರ್ ರೂಪಯುತರಮಿತವಿಕ್ರಮರತಿವಿ
ಶಾಲಾಕ್ಷಕೃಷ್ಣಾಜಿನಾಂಬರದತೀವಸೌಂದರ್ಯಯುತರತುಳಬಲರು || ೭ ||

ಪೊಸ ಕಂದಮೂಲಾಶನರ್ ದಾಂತರತಿಶಾಂತ
ರೆಸೆವ ರವಿಶಶಿಗಳಂತಿರ್ಪರಮರೇಂದ್ರಸಖ
ವಸುಮತೀಯರಸ ದಶರಥರಾಜನಂದನರ್ ಸ್ವನೃಪ(ಕ)ಚಿಹ್ನಯುತರು |
ಸಸಿವದನೆಯಿರ್ಪಳೊರ್ವಳು ಸೀತೆಯೆಂದೆಂಬ
ಪೆಸರಿಂದಲಾ ಪಂಚವಟಿಯಲೊಪ್ಪಿರಲಾನು
ರಸೆಯ ನಿಟ್ಟಿಸುತಲೊಂದಾನೊಂದುದಿನ ಚರಿಸುತ್ತೈದಿದೆಂ ವಿಪಿನದೆಡೆಗೆ || ೮ ||

ನೋಡಿದೆ ವಿಲಾಸವಿಭ್ರಮಕಲಿತರಾರೆನುತ
ಮೂಡಿದುತ್ಸವದಿಂದ ಮೂದಲಿಸಲೈದಿದೆಂ
ಕೂಡೆ ಪಿರಿಯಾತನಾಜ್ಞೆಯೊಳನುಜನೈತಂದು ದುರ್ಮಾರ್ಗಗತಿಯ ಪಿಡಿದು |
ಮಾಡಿದಂ ಕರ್ಣನಾಸಾಚ್ಛೇದನಂಗಳ
ನ್ನಾಡಲೇನವರ ಬಿಸಿರಕುತತನಿಗೆಂಡಗಳ
ನೂಡಿಸಲ್ ಶಾಂತಿಯಹುದೈ ಜಠರದಗ್ನಿಯೆನಲಸುರ ಮೊರೆದಿಂತೆಂದನು || ೯ ||

ನರಕೀಟಕಿನಿತುಬಲ ದೊರದುದೆಮ್ಮಯ ಕುಲಕೆ
ಪರಮಹರ್ಷವನೀವುದೆನುತ ಸಂತಸಗೊಂಡು
ಹರಿಯಕ್ಷವಿಕ್ರಮರ ಚಿತ್ತಾನುವರ್ತಿಗಳ ಧುರವಿಜಯದೋರ್ದಂಡರ |
ನಿರತಪತಿಕಾರ್ಯೈಕಧುರ್ಯರಂ ಕೋಪದಿಂ
ಕರೆದು ನೇಮಿಸಿದ ಬೇಗದೊಳೈದಿ ಮಾನುಷರ
ತರಿದಿಟ್ಟು ನಾರಿಯಂ ಪಿಡಿದು ತಪುದೆನುತೊರೆದು ಬೀಳ್ಕೊಟ್ಟನತಿರೋಷದಿ ||೧೦||

ಪದಿನಾಲ್ಕುಸಂಖ್ಯೆಯುಳ್ಳಧಿಕತರಶೂರರುಂ
ಕದನಕರ್ಕಶಶಮನಕಿಂಕರರ ಪಡೆಯೆಂಬ
ರೊದಗಿ ನಿಂದೈತಂದರಾ ಶೂರ್ಪನಖಿಯೊಡನೆ ಭೋಮೆ(ಗ)ರೆವುತಾಕ್ಷಣದೊಳು |
ಕುಣಿದುದಂಬುಧಿ ಯಾರುಭಟೆಗೆ ಪದಘಟ್ಟಣೆಗೆ
ಕುಧರಂಗಳುಂ ನಡುಗೆ ಕೂಗಿ ಬೊಬ್ಬಿಡುತಲುಂ
ಬೆದರಿಸುತ ಖಗಮೃಗದ ಸಂದೋಹಮಂ ಬಿಡದೆ ಬಂದರಾ ವಿಪಿನದೆಡೆಗೆ ||೧೧||

ದುರುಳದಾನವಿ ರುಷಾಘೋರರಕ್ಕಸರುಗಳ
ಕರೆದೊಯ್ದು ರಾಮಾಶ್ರಮವ ತೋರಲಾಸುರರ್
ಭರದಿಂದೆ ಕಂಡರೆಡನಂಕದೊಳು ಸೀತೆಯುಂ ಮುಂಗಡೆಯ ಸೌಮಿತ್ರಿಯುಂ |
ಚರಣಸೇವನೆಗೈಯಲಮರೇಂದ್ರನಂದದಿಂ
ಶರಚಾಪಗಳ ಧರಿಸಿ ದಿವ್ಯತೇಜೋಮಯದಿ
ಮೆರೆವ ನರಪುಂಗವನ ನೋಡಿ ವಿಸ್ಮಿತರಾದರಾಗಲಾ ದೌರ್ಜನ್ಯರು ||೧೨||

ಅನಿತರೊಳು ಘೋರನಿಸ್ವನಬಲದ ಖಳರ ಮುಂ
ದನುವಿನಿಂ ಬಹ ದುಷ್ಟರಕ್ಕಸಿಯ ನಿಟ್ಟಿಸುತ
ವಿನಯದಿಂ ರಘುನಾಥ ಸೌಮಿತ್ರಿಯೊಡನೆಂದನಿಂದು ಮುಂಬರಿದು ಬರುವ |
ಘನತರದ ತಾಮಸೀಗಣವ ತರಿದಿಡುವನ್ನ
ಜನಕಜಾತೆಯನೊಂದು ತಾಣದೊಳಗಿಟ್ಟು ನೀ
ನನುವಿಂದ ಕಾದಿರ್ಪುದೆನೆ ಪಸಾದಮೆನುತ್ತ ಲಕ್ಷ್ಮಣಂ ಕೈಮುಗಿದನು ||೧೩||

ನೇಮಿಸುತ ಲಕ್ಷ್ಮಣನ ಕಳಿಪಿ ರಘುವರ ದಿವ್ಯ
ಚಾಮೀಕರವಿಭೂಷಿತಾಂಗಚಾಪವ ಪಿಡಿದು
ನೇಮದಿಂದರಿಕುಲವನರಿವ ಶರಗಳ ತಿರಿಪುತಾಗ ನಗುತಿಂತೆಂದನು |
ಈ ಮಹಾಘೋರವನ ದುಶ್ಚರಮದಾದಡೆಯು
ಮಿಾ ಮೌನಿಸಂಕುಲದ ಮತದೊಳನುಮತಕರದ
ಧಾಮವಾಯ್ತೆಮಗೆ ನಿರ್ವ್ಯಾಜದಿಂದಾವಿರ್ದಪೀ ತಾಣದೊಳ್ ಸುಖದೊಳು ||೧೪||

ಪೆರತಿನಿತು ಹಂಗಿಲ್ಲದಿರುವ ತಾಪಸಕುಲವ
ನರೆವರ್ಗೈತಪ್ಪುದಿದು ದುರ್ನೀತಿ ಸುಖದಿಂದ
ಲಿರಲಿಚ್ಛೆಯುಂಟಾಗಲೆಲ್ಲರುಂ ಪಿಂದಿರುಗಿ ಪೋಪುದತಿಲೇಸಲ್ಲದೆ |
ದುರುಳಮೂಕೊರತಿಗುಪಕಾರವೆಸಗಲ್ ಬಂದು
ತೊರೆವುದನುಚಿತ ತನುಗಳಂ ತೊಲಗಿ ಬದುಕೆನುತ
ಲೊರೆಯಲಾ ರಕ್ಕಸರ್ ಕೋಪದಿಂ ಪಲ್ಗಡಿದು ಬೊಬ್ಬಿಡುತಯಿಂತೆಂದರು ||೧೫||

ದೇವಸುರದಲ್ಲಣಖರಾಸುರಂಗಪಕೃತಿಯ
ನಾವನೆಸಗಿದರುಳಿವ ನಿಜಜೀವನೋಪಾಯ
ಮಾವವಿಧದಿಂದಹುದು ಬಹುರಕ್ಕಸರ ಗಣದೊಳಿಂತೊರ್ವ ಬದುಕಿ ಪೋಪೆ |
ದೇವದಾನವರಿಗಳವಲ್ಲೆಮ್ಮ ರಣದೊಳಗೆ
ನೋವಿಸುವರುಳಿದವರದೆಂತುಂಟು ಕೋ ಯೆನುತ
ತೀವಿದುರುಶೂಲಕರದಿಂದಾರ್ಭಟಂಗೈಯುತೊಳಪೊಕ್ಕರಾಶ್ರಮವನು ||೧೬||

ಕಾಲಪಾಶೋಪಮಿತಕಿಡಿಗಳುಗುಳುವ ಘೋರ
ಶೂಲಂಗಳಿಂದಿಟ್ಟರಾರ್ಭಟಿಸಿ ರಘುವೀರ
ಲೀಲೆಯಿಂದಂ ಚತುರ್ದಶದೈತ್ಯರಾಯುಧವ ಕೋಲಿಂದಲರಿಯೆ ಮಗುಳೆ |
ಮೇಲೆ ಖತಿ ಮುಸಗಿ ರಕ್ಕಸನಿಚಯಮುನ್ನತದ
ಶೈಲಂಗಳಂ ಪಿಡಿದು ಪೊಡೆಯಲೈತರೆ ದನುಜ
ಜಾಲಮಂ ತರಿದಿಡುವೆನೆಂದು ವಜ್ರೋಪಮಿತಶರಗಳಂ ತೆಗೆದನುಲಿದು ||೧೭||

ಕೋಪಶಿಖಿ ಮುಂಬರಿದು ಬರೆ ಪೋದುದಾರ್ದೆಸೆವ
ಚಾಪನಿಸ್ಸೃತಕಣೆಯ ದಳ್ಳುರಿಯ ಪ್ರಬಲತರ
ತಾಪದಿಂ ರಕ್ಕಸರ್ ಗರಿಸೀದ ಶಲಭಗಳ ತೆರದಂತೆ ಸಂಚರಿಸುವ |
ಸೋಪಾಯಮುಳಿದು ಮನ ಜಡಮೆನಿಪುದನಿತರೊಳ
ಗಾಪೋಶನಂಗೈದನಸುಗಳಂ ಸುರರೆರೆಯು
ಭಾಪೆನುತ ಕರೆಯೆ ಪೂವಳೆಯು ಪೊಗಳುವ ಮುನಿಯ ಸಂದೋಹ ಪ್ರೀತಿವರಿಯೆ ||

ತೊಡಿಸಿದುದದಾವಗಂ ಚಾಪಕಂಬಂ ಮಗುಳೆ
ಬಿಡುವುದಾವಗಮುವೆಂಬ ಕಾಲಭೇದವನರಿಯ
ದೊಡನೆ ರಕ್ಕಸವಡೆಯು ಪೊಡವಿಯೊಳು ಕೆಡೆದುದಂ ನೋಡಿ ದೇವತೆಗಳೆಲ್ಲ |
ಕಡು ವಿಸ್ಮಯದಿ ಬೆರತು ಮಿಡುಕದಂದದೊಳಿರಲ್
ಕಡುಗಲಿಗಳಳಿದ ಪರಿಯುಂ ನೋಡಿ ಶೂರ್ಪನಖಿ
ಕಡೆಗೋಡಿ ಭೈರವಸ್ವನದಿಂದ ಗೋಳಿಡುತಲೈದಿದಳ್ ಖರನೊತ್ತಿಗೆ ||೧೯||

ಪಿಡಿದು ದುಮ್ಮಾನದಿಂ ಕಡುಶೋಕದುರುಬೆಯಿಂ
ಪೊಡವಿಯೊಳ್ ಕೆಡೆದಚೇತನದಂತೆ ತೋರ್ಪನುಜೆ
ಯೆಡೆಗೈದಿದೇಂ ಪಾಪಶಮುದಂತಭಗ್ನಮಂ ಮಾಳ್ಪ ಶೂಲಗಳನುಳಿದು |
ಕಡೆಗೋಡಿ ಬಂದಳುವುದೇನು ಮನದಿಷ್ಟಮಂ
ಕೊಡುವ ಕಿಂಕರಚತುರ್ದಶದೈತ್ಯರುಗಳನುಂ
ಬಿಡುತಳುವುದೇನವ್ವೆ ಪೇಳೆನುತ ಕುಸ್ತರಿಸಿ ಬೆಸಗೊಂಡರಿತೆಂದಳು ||೨೦||

ಕಿವಿಮೂಗನುಂ ಕೊರೆದರೆನುತ ಕೋಪವ ತಾಳ್ದು
ನವಕಾಲನಿಭದೈತ್ಯರಂ ಕಳಿಪಲೆನ್ನೊಡನೆ
ಬವರದೊಳಗರೆನಿಮಿಷ ನಿಲದೊರಗಲಾನಂಜಿ ಕಂಗೆಟ್ಟು ಜೀವದಿಂದೆ |
ತವಕದಿಂ ಜಾರಿದೆಂ ನಿಮಗಪಂ ಮಣಿದಪನೆ
ಶಿವವಿರಿಂಚಾದಿಗಳ ಗಣಿಸುವನೆ ಕದನದೊಳ್
ಭುವನೈಕವೀರರಘುವೀರ ದಾನವಹರಣಕೈತಂದ ಮನುಜನೆನಿಸಿ ||೨೧||

ಜಗದುದ್ಧತಪರಾಕ್ರಮಾಕ್ರಾಂತಮೂಲೋಕ
ದೊಗುಮಿಗೆಯ ಶೂರಾಗ್ರಗಣ್ಯ ದಶಕಂಧರನ
ಭಗಿನಿ ವೈರೂಪ್ಯದಿಂದಿರೆ ನೋಡುತೀ ಪರಿಯಲೆನ್ನಂತೆ ಮಿಡುಕುತಳುತೆ |
ಬಗೆಬಗೆಯುಲುಪಚರಿಪೆ ಶೂರನೆನಿಸುವ ಪೆಸರ
ಮೊಗೆದುಮೆನ್ನಂತೆ ರಣಹೇಡಿ ಬೇಗದೊಳೋಡಿ
ಮಿಗೆ ಸಲಹಿಕೋ ನಿನ್ನ ಜೀವನವನಿದರಿಂದ ಲಾಭ ಮಗುಳೊಂದಿರ್ಪುದೆ ||೨೨||

ಈ ಜನಸ್ಥಾನಮಂ ಬಿಟ್ಟೋಡಿದಲ್ಲದಿರೆ
ಮೂಜಗಜ್ಜೈತ್ರ ರಘುನೇತ ನಿನ್ನಂ ಕಾಕ
ಭಾಜನಂಗೈಯದುಳಿವಪನೆ ದುಷ್ಕುಲಜಾತ ಶೂರಸಂತತಿಯ ನುಡಿಯ |
ಮಾಜಿಸದೆ ಹೆಂಬೇಡಿತನದಿಂದಲಾಸಿರ್ಪ
ಪೊಜೆಯುಂ ನೋಡಿ ಕ್ರೋಧಂ ಜನಿಸಲಾದುದಿ
ನ್ನೀ ಜಗದೊಳೆಂತಿರುವೆ ನರಗಂಜಿ ನಡುಗುತಿಹ ದುರ್ಮೇಧಕುಲಪಾಂಸನೆ ||೨೩||

ನಡುಕದ ತರಂಗತತಿ ಮಿಡುಕುವ ವಿಷಾದಂಗ
ಳೆಡೆಯಾಡುತಿಹ ನಕ್ರಚಿಂತೆ ಬಾಡಬಶೋಕ
ಕಡಲೊಳಗೆ ಮುಳುಗಿ ಮುಂಗಾಣದಿಹ ಸೋದರಿಯ ನಿಟ್ಟಿಸದೆ ಪೆಣದಂದದಿ ।
ಪೊಡವಿಯೊಳು ಬದುಕಿ ಫಲವೇನು ಕೀರ್ತಿಯ ಕುಲವ
ಕೆಡಿಸುತುದರದ ಭರಣಗೈದು ಡಿಂಗರಿಗನಂ
ತಡಿಗಡಿಗೆ ಜೀವನೋಪಾಯಮಂ ನೆನವುತಿಹೆ ಖೂಳ ದುರ್ಜನದಾಳಿದೆ ॥೨೪॥

ಬಲುಪರಿಯ ಶೂರ್ಪನಖಿ ಬೈದು ಖರನಂ ಮಗುಳೆ
ಪಲುಬುತಲನೇಕವಿಧದಿಂದ ಶೋಕಾರ್ಣವದಿ
ಕಲನೆಯಾಂತೊರಗಿರಲ್ ಕೋಪದಿಂದಾ ಖರಂ ಶೂರ್ಪನಖಿಯೊಡನೆಂದನು ।
ಕೊಲುವೆ ದುಶ್ಚಾರಿತ್ರಯುತನೆನಿಪ ನರಪಶುವ
ಬಲಿಯೆನಿಪ ಲಕ್ಷ್ಮಣನ ಕೆಡೆಪಿ ತದ್ರಕ್ತಮಂ
ಗೆಲವಿಂದಲುಂಡು ಶೋಕಾಗ್ನಿಯಂ ನಂದಿಪುದು ಬಂಧುರದ ಸುಖದಲೆನುತ ॥೨೫॥

ಪೇಳಿದ ಖರಾಸುರನ ಕೋಪಯುತವಚನಗಳ್
ಜಾಳೆನಿಸಿದುವು ತಾಪಮಂ ನಿಮಿಷಮಾತ್ರದಲಿ
ಪೇಳುವರು ದೂಷ್ಯಮೂಷ್ಮದಿ ಶಾಂತಿ ಯಹುದೆಂಬ ಗಾದೆಯಿಂ ಶೂರ್ಪನಖಿಯು ।
ಪೇಳಲುಜ್ಜುಗಗೊಂಡಳೀತನ ಪರಾಕ್ರಮಗ
ಳೇಳಿಗೆಯ ಶಿತಿಕಂಠನುಗ್ರಶೂಲಾಯುಧವ
ತಾಳಿರುವ ಶೂರ ನಿನಗೆಣೆಯದಾರೈ ಸಮರಭೂಮಿಯೊಳು ಭೂತಳದೊಳು ॥೨೬॥

ಮನಬಂದೊಲುಲಿವ ಮಾನಿನಿಯ ಮಾತಂ ಕೇಳ್ದು
ಕನಲಿ ಕಡುಗೋಪದಿಂ ತನ್ನ ಸೇನಾನಾಥ
ನೆನಿಪ ದೂಷಣಗೆಂದನೆಲವೊ ತನ್ನಯ ಭುಜಪರಾಕ್ರಮದ ಚಿತ್ತದಿರವ ।
ಅನುಸರಿಪ ಲೋಕಹಿಂಸಾರತರ ಕ್ರೂರತರ
ರಿನಿಸುಳ್ಳ ಶಾರ್ದೂಲನಿಭಪರಾಕ್ರಮಿಗಳಂ
ಮನುಜನೊರ್ವಂ ಸದೆದ ಗಡ ಕಾಲಸಂಗ ಕೇಳಾಟಮಂ ನೋಡೆಂದನು ॥೨೭॥

ಕುರಿಯು ವ್ಯಾಘ್ರಂಗಳಂ ಕೋಪದಿಂ ತಿನುವಂತೆ
ನರನುಂ ಚತುರ್ದಶಾಸುರರನೊಂದೇ ನಿಮಿಷ
ತರಿದಿಟ್ಟನೇನೆಂಬೆ ಕಾಲಗತಿಯಂ ಮುಂದೆ ತರಿಸು ರಥಮಂ ಬೇಗದಿ ।
ಕರೆ ಚತುರ್ದಶಸಹಸ್ರಾಶರರ್ ಧನುಶರಗ
ಳಿರದಿನ್ನು ತರಿಸೆನಲ್ ಸೇನಾಧಿಪತಿ ಪೇಳ್ದ
ತೆರದೊಳೆಲ್ಲರ ಸಜ್ಜುಗೊಳಿಸಿ ಬಿನ್ನಪಗೈದು ನಿಜಪತಿಗೆ ತತ್ಕ್ಷಣದೊಳು ॥೨೮॥

ಕ್ರೂರತರಕೋಪದಿಂ ಖರನೈದಿ ರಥವೇರಿ
ಭಾರಣೆಯ ಬಿಲ್ಗೋಲ್ಗಳಂ ಪಿಡಿದು ನಡೆಯಲಾ
ಧಾರಿಣಿಯು ಕಂಪಿಸಿತು ತುಳ್ಕಿತಂಬುಧಿ ಬೆಗಡುಗೊಂಡುದಮರರ ಸೇನೆಯು ।
ಆರು ಸೈರಿಪರಸುರನುಪಟಳವ ಮೃತ್ಯುವಾ
ಕಾರವಿಡಿದೈತರ್ಪುದೆನಲು ಬಹ ಖರದೈತ್ಯ
ದಾರುಣವ ಕಂಡಂಜಿ ಋಷಿಗಳುಂ ತಮತಮಗೆ ತಳ್ಳಂಕಗೊಳುತಿರ್ದರು ॥೨೯॥

ಇನನು ಗುಡಿಗಟ್ಟಿದಂ ಘನತಮದ ಕಬಳಿತದಿ
ಜನರು ಮೊಗಗಾಣದಂತಲ್ಲಲ್ಲಿ ದುಸ್ಸ್ವರದಿ
ವನಮೃಗಂಗಳು ಕೂಗಲೆಳಸಿದುವು ರೋಹಿತದ ಕರೆದುದಾ ಮೇಘಜಾಲ ।
ಕನಕಛತ್ರಾಗ್ರದೊಳ್ ಮನೆಗೆಯ್ವು ಗೃಧ್ರಗಳ್
ಘನಚಕ್ರಯುತರಥದ ಗಾಂಧರ್ವಗಳು ಕೆಡೆದು
ವನಿತಿನಿತೆನುತ್ತ ಪೇಳ್ದಪರಾರಿಗಳವಹುದು ಗಮನಾಶುಭಂಗಳನ್ನು ||೩೦||

ಉದಿಸುವ ವಿಕಾರದುಶ್ಶಕುನಗಳ ಗೊಂದಣವ
ನದಿರದಿಟ್ಟಿಸಿ ಖರಂ ನಸುನಗುತಲಿಂತೆಂದ
ಮದಿರಾಮದಾಂಧಗೇನರಿವು ಕೃತ್ಯಾಕೃತ್ಯಗಳ ಲಾಭಲೋಭಂಗಳು ।
ಬೆದರಿಪುವು ಘೋರತರಶಕುನಂಗಳಳಿಮನದ
ಬದಗರಿಂಗದ ಗಣಿಸೆ ಕೆಡೆವುವೆನು ತಾರೆಗಳ
ಸದೆವೆನಂತಕಪುರದ ಕದನದೊಳ್ ಮಾನವನ ಬಡಿದಲ್ಲದಾನುಳಿವೆನೆ ||೩೧||

ಸುರಪನೈರಾವತದನಡರಿ ಸಂಯುಗದೊಳಂ
ತರಹರಿಸಿ ನಿಲ್ದಪನೆ ಸಮರಮುಖದೊಳಗೆ ಪಿಂ
ದಿರುಗೆಂದಿಗಾದೊಡಂ ಬಹೆನೆ ವಿಜಯಾಂಗನೆಯೆ ಗೃಹದಾಸಿಯಲ್ತೆ ಬಳಿಕ ।
ನರನ ಶೌರ್ಯಮದೆಂತು ದುಶ್ಶಕುನಗಳ ಕಂಡು
ತಿರುಗುವೆನೆ ಲೋಕಮಂ ಸಂಹರಿಸಿ ಪಾರುವರ
ಪರಿಯನೆಲ್ಲವ ತೋರ್ಪೆನರೆನಿಮಿಷದೊಳಗೆಂದು ಬೊಬ್ಬಿರಿದ ಖಳ ಕೋಪದಿ ||೩೨||

ಬಿರುನುಡಿಗಳಿಂದಲೀ ಪರಿಯ ಖರ ಮೂದಲಿಸೆ
ನೆರೆದಖಿಲರಕ್ಕಸರ್ ಸಂತಸದಿ ಹಿಗ್ಗುತಂ
ಭರದಿಂದ ಮುಂಗಡೆಯುಲ್ಯೆದಿದರ್ ಸಂವರ್ತಭೈರವನ ಕಿಂಕರರೊಲು ।
ಸುರರು ಭೂಸುರರು ಕಂಡಂಜಿ ಕಂಪಿಸಿ ಕ್ಷೇಮ
ಕರನ ಜಗದೀಶನೆಂತಿತ್ತಪನೆನುತ್ತ ಬಲು
ಪರಿಯಿಂದ ಮಿಡುಕುತಿರಲಸುರಪಡೆ ನಡೆತಂದುದಮಿತಾಟ್ಟಹಾಸದಿಂದ ||೩೩||

ಪೊಡವಿ ಬೆಸಲಾದಂತೆ ರಕ್ಕಸರ ಪಡೆ ನಡೆಯ
ಲೊಡನೆ ದುರ್ಜಯ ಪುರುಷಕಾಲಕಾರ್ಮುಕ ಯಜ್ಞ
ಗೆಡುಕ ಕರವೀರಾಕ್ಷ ವಿಹಗ ಪೃಥುಲಗ್ರೀವ ಸರ್ಪಾಸ್ಯ ರುಧಿರಾಶನಂ ।
ಕಡುಗಲಿ ಮಹಾಮಾಲಿ ಮೇಘಮಾಲಿಯು ಸೇನೆ
ನಡೆಯಲತಿಬಲರಮಿತವಿಕ್ರಮರ್ ಖರನ ಮುಂ
ಗಡೆಯುಲ್ಯೆದಿದರತುಳಭೀಮಾಟ್ಟಹಾಸದಿಂ ಧರಣಿ ತಲ್ಲಣಿಪಂದದಿ ||೩೪||

ಅಂಬರವನಡಸುವ ಸ್ಥೂಲಾಕ್ಷ ರಿಪುಬಲವ
ನುಂಬಂ ಮಹಾಕಪಾಲಂ ದೇವತಾಗಣದ
ದಂಬಮಂ ಕಳೆವ ತ್ರಿಶಿರಸ್ಸೆ ಪ್ರಮಾಥಿಯೆನಿಪ ಯೋಧರಗ್ರಭವರು ।
ಬೆಂಬಿಡದೆ ದೂಷಣನ ಪೊರೆಯೊಳ್ಯೆತರೆ ದೇವ
ಡೊಂಬ ಕಂಗೆಟ್ಟು ಕಳವಳಿಸುತಿರೆ ರವಿಶಶಿಯು
ಬಿಂಬಗಳ ಪಿಡಿವ ಮಾಲಾಗ್ರಹಗಳಂದದಿಂ ಬರುತಿರ್ದರಾರ್ಭಟೆಯೊಳು ||೩೫||

ಮೃಗಗಳೋಡಿದುವು ದೆಸೆದೆಸೆಗೆ ಸ್ಥಾವರಗಳುಂ
ಮಿಗೆ ನಡುಕಗೊಳ್ಳುತಿರೆ ದೇವರ್ಷಿಸಂದೋಹ
ಬಗೆಬಗೆಯ ಚಿಂತೆಯಿಂದಾಪದುದ್ಧಾರಕನ ಜಪಿಸುತಿರಲಸುರಪಡೆಯು ।
ನಗೆನುಡಿಯು ಮೂದಲಿಕೆ ಮುಳಿಸು ವಾದಗಳಿಂದ
ಲಗಣಿತೋತ್ಕರ್ಷಭೀಕರಹೇತಿಗಳನಾಂತು
ಜಗತಿಯಂ ಬೆದರಿಸುತ ಬಂದರಚ್ಚರಿಯನೇಂ ಪೇಳ್ವುದಾ ಸಮಯದೊಳಗೆ ॥೩೬॥

ಭೀಮಬಲಖರದೂಷಣತ್ರಿಶಿರರಕ್ಕಸ
ಸ್ತೋಮದೊಡವೆರೆದು ವೀರಾವೇಶದಿಂದೊಂದ
ಕಾಮಿಸದೆ ಗತಿವಿಡಿದು ಕಲ್ಪಾಂತಭೈರವಂ ಬಳಗದೊಡನೈತಪ್ಪೊಲು ।
ಆ ಮಹಾಕಾನನವನೊಳಪೊಕ್ಕು ಬೊಬ್ಬಿಡುತೆ
ತಾಮಸೀಚರರೈದೆ ಬರುತಿರ್ದರರಸುತಂ
ರಾಮಪುರದರಸನಿರ್ಪೆಲೆವನೆಯ ಸನ್ನಿಧಿಯನೇನೆಂಬೆನದ್ಭುತವನು ॥೩೭॥

ಅಂತು ಸಂಧಿ ೧೦ಕ್ಕಂ ಪದನು ೪೧೭ಕ್ಕಂ
ಮಂಗಳಮಹಾ ಶ್ರೀ ಶ್ರೀ ಶ್ರೀ.

—ಹನ್ನೊಂದನೆಯ ಸಂಧಿ—

ಸೂಚನೆ || ಲೋಕಕಂಟಕದೂಷಣತ್ರಿಶರರಕ್ಕಸರ
ನೀಕಮಂ ಸಂಹರಿಸಿ ಕಡುಗೋಪದಿಂದ ಪೈ-
ನಾಕಪಾಣಿಯ ತೆರದಿ ಶರವ ತಿರಿಪುತಲಿರ್ದ ಲೀಲೆಯಿಂ ರಘುವೀರನು ||

ಪದನು|| ಪೊಡವಿ ಬೆಸಲಾದಂತೆ ಪಡೆ ನಡೆದುದುಘ್ಘಡದೊ |
ಳಡಿಗಡಿಗೆ ಜನಿಸುವೌತ್ಪಾತಭೀಕರಗಳಂ
ಪೊಡವಿಪತಿ ರಘುನಾಥ ನೋಡಿ ವಿಸ್ಮಿತನಾಗಿ ಸಂವರ್ತಸಮಯದಂತೆ |
ತುಡುಕುತಿದೆ ಭಯರಸವನಿಂದಿದೇಂ ಕಾರಣಂ
ಕಡುಗಲಿಗಳಾರ್ಬರ್ಪರಾ ಯೆನುತ ಲಕ್ಷ್ಮಣನ
ಕಡೆಯ ನಿಟ್ಟಿಸಿ ಪೇಳ್ದಮುಂತಪ್ಪಶುಭಗಳಂ ಕೇಳು ಶೈಲೇಂದ್ರಜಾತೆ || ೧ ||

ಕೂಗುತಿದೆ ಘೋರನಿಸ್ವನದಿಂದ ಪಕ್ಕಿಗಳ್
ಮೇಗೆ ಶರದಗ್ರಧೂಮಾಕಲಿತಮಾಗಿ ತಲೆ
ದೂಗುತಿವೆ ಚಾಪ ಭಯ ಮುಂಕೊಂಡು ಬರುಸದೆಂದಡಿಗಡಿಗೆ ತೋರುತಿದೆಕೊ |
ಸಾಗರಂ ಮೊರವಂತೆ ನಾಲ್ದೆಸೆಯು ಘೀಳಿನುತ
ಲಾಗುತಿದೆ ಭೀಕರದ ಬಹುನಿನದ ಸೌಮಿತ್ರಿ
ಯಿಾಗಲೇಂಗೈದಪೆವನಾಯಾಸದಿಂ ತೋರ್ಪ ದಾರುಣಾಕ್ರಾಂತತತಿಗೆ || ೨ ||

ಇಂತಪ್ಪ ಶುಭವ ಪೇಳುತಲಿವೆಕೊ ಚಾಲನೆಗ
ಳಾಂತೆಮ್ಮ ಭುಜಮಿಂದು ಭಾಸ್ಕರಪ್ರಭೆ ಧೂಮ
ತಿಂಥಿಣಿಯೊಳೊಡವೆರೆದು ಮಗುಳೆ ನಿರ್ಮಲಿತಮಾಗೆಸೆವುತಿದೆ ಜಯಮಾಂತರ |
ಸಂತೆಗಳ ಮುಖದಂತೆ ಸುಪ್ರಸನ್ನತೆ ವಿಪುಲ
ಕಾಂತಿಯಾಗಿದೆ ಭವದ್ವಕ್ತ್ರಮರಿಶಾಸನಂ
ಚಿಂತೆಯಿಲ್ಲದೊಲಪ್ಪುದೆಮಗೆ ಜಯ ತಪ್ಪದೆನುತಾಗ ಮಗುಳಿಂತೆಂದನು || ೩ ||

ಪ್ರಳಯಘನನಿರ್ಘೋಷಮೆನೆ ಭೇರಿತಂಬಟಗ
ಳುಲಿ ಮಸಗುತಿದೆ ಸಿಂಹನಾದ ನೆಲಬಿರಿವಂತೆ
ಮೊಳಗುತಿದೆ ಮುಂದಸುರಸಂದೋಹ ಬಪ್ಪುದಿದು ಸಿದ್ಧಮೆಂದರಿದು ಮೊದಲೆ |
ನಳಿನಾಕ್ಷಿ ಸೀತೆಯಂ ಕರೆದೊಯ್ದು ಗೋಪ್ಯತರ
ದಳೆದತಾಣದೊಳಿಟ್ಟು ಕಾದಿರ್ಪುದನ್ನೆಗಂ
ಕೊಳುಗುಳದ ಕರ್ಕಶದ ರಕ್ಕಸರ ಭರವನಾರ್ಬೈದ ಬಳಿಕಹುದು ಮುದವು || ೪ ||

ಮಾಡುವುದನಾಗತಿವಿಧಾನಮಂ ಜಯದ ಸಿರಿ
ಕೂಡಲಿಚ್ಛೈಸಿದವನದರಿಂದಲೀ ದುರ್ಗ
ಮಾಡಲ್ಲ ವಾಕ್ರಮಿಸಲಸದಳದ ಪರ್ವತದೊಳೊಂದು ಮರೆಯೆನಿಪ ಗುಹೆಯ |
ನೋಡಿ ನೆಲೆಗೈದು ಜನಕಜೆಯ ಕರೆದೊಯ್ವುದೆನು
ತಾಡಲಾ ಕ್ಷಣದಿ ಲಕ್ಷ್ಮಣ ಧರಣಿಜಾತೆಯಂ
ಕೂಡೆ ತಾಂ ಕರದೊಯ್ದು ಶೈಲಾಗ್ರದೊಳಗಿಟ್ಟು ಪದುಳದಿಂ ಕಾದಿರ್ದನು || ೫ ||

ಧರಿಸಿ ಕವಚವ ಪಿಡಿದು ತ್ವರಿತದಿಂ ಚಾಪಮಂ
ತಿರಿಪುತಲಿ ಮಾರ್ಗಣವ ಪೊಗೆಯಿಲ್ಲದುರಿಯಂತೆ
ನರಸಿಂಹನೊಪ್ಪಿರಲ್ ನೋಡಿ ದೇವತೆಗಳುಂ ಸಿದ್ಧಚಾರಣಮುನಿಪರು ।
ಅರಿಕರಂ ಸಿಂತೆ ದುರ್ಜಯದ ದಾನವರುಗಳ
ನರಿದು ಗೋಬ್ರಾಹ್ಮಣರ ಕಂಟಕವನಪಹರಿಸಿ
ಪೊರೆದಂತೆ ರಾಘವಂ ಪೌಲಸ್ತ್ಯರೆಲ್ಲರಂ ಸಂಯುಗದಿ ಪೊಡೆಯಲೆನುತ ॥ ೬ ॥

ಹರಸಿ ಮುಗುಳಿಂತೆಂದರೀ ರಕ್ಕಸೋತ್ತಮರ್
ಧುರವಿಜಯರತಿಕ್ರೂರಭೀಮಕರ್ಮಿಗಳವರ
ಪೊರೆಯೊಳೊರ್ವಂ ರಾಮ ಗೆಲಿವಪನದೆನ್ನುತಂ ವಿಸ್ಮಯದೊಳಂಬರದೊಳು ।
ಪರಿಪರಿಯ ವಾಹನಗಳಡರಿ ನೋಡುತಲಿರಲ್
ಶರಚಾಪಮಂ ಪಿಡಿದು ಕಲ್ಪಾಂತದೀಶಾನ
ಪರಿಯನಂಗೀಕರಿಸಿ ರಾಮನಿರೆ ನೋಡುತಂ ಭಯಗೊಂಡುದಮರನಿಚಯ ॥ ೭ ॥

ಪೊಡೆವ ರಣಭೇರಿಗಳ ಬಡಿವ ತಂಬಟಗಳಂ
ಜಡಿದು ಖಡ್ಗಂಗಳಂ ಸಿಂಹನಾದಗಳೆಸಗು
ತಡಿಗಡಿಗೆ ಚಾಪಟಂಕಾರಂ ಜಗತ್ರಯವ ಬೆದರಿಸುವೊಲಸುರರೊದಗಿ ।
ಗಡಣದಿಂದೈತಪ್ಪ ರಥಗಜಾಶ್ವಪದಾತಿ
ಪೊಡವಿಯಿಂದೊಡೆದು ಮೂಡಿದ ತೆರದೊಳೈತಂದು
ದೊಡನೆ ಮೂಜಗವು ತಲ್ಲಣಗೊಂಡುದೇನೆಂಬೆ ದಾನವರ ಭೀಕರವನು ॥ ೮ ॥

ಜಗತಿಯಂ ನಡುಗಿಸುತ ಬಪ್ಪ ರಕ್ಕಸಬಲದ
ಪಗೆಯ ರಣಪಂಡಿತಂ ರಘುವೀರ ತಿಳಿದಾಗ
ಮಿಗೆ ಕೋಪವೆಗ್ಗಳಿಸಿ ಚಾಪಕಂಬಂ ತೊಡಿಸಿ ದಾನವರ ಕುಲವನೆಲ್ಲಂ ।
ಬಗಿದಿಡುವೆನೆಂದು ಕಾಲಾಗ್ನಿಯಂದದಿ ಕೋಪ
ದೊಗುಮಿಗೆಯ ಪರಿ ದಕ್ಷಸವನನಾಶನಾರುದ್ರ
ನಿಗೆ ನಾಲ್ಕುಮಡಿಯಂತೆ ಕಂಗೊಳಿಸಲುಂ ದೈತ್ಯ ಸಂತೆ ಕಂಪಿಸಲು ಮುಂತೆ ॥ ೯ ॥

ಥಳಥಳಿಸೆ ಭೂಷಣದ ಕಾಂತಿ ಕಾರ್ಮುಕಶರದ
ಪೊಳೆಪು ಮಿಂಚಿನೊಲೆಸೆಯೆ ಮಾತಂಗರಥಘೋಷ
ಮೊಳಗೆನಿಸೆ ಕಾಲಮೇಘಗಳು ಭಾಸ್ಕರನಂಟೆ ಕವಿದಂತೆ ದೈತ್ಯೇಶರ ।
ಬಳಗದೊಡನೈತಂದು ನೋಡಿದ ಖರಾಸುರಂ
ಕೊಳುಗುಳದ ಮಸಕದಿಂ ಸನ್ನದ್ಧನೆಂದೆನಿಸಿ
ಪ್ರಳಯಾಗ್ನಿಯಂತೆಸೆವ ರಘುವೀರನಂ ಕಂಡ ಧುರವಿಜಯ ಹಮ್ಮೀರನಂ ॥೧೦॥

ಕ್ರೋಧಶಿಖಿ ಮುಂಬರಿದು ಪಡಿಗಳಂ ಕೆಡಪುವೊಲ
ಗಾಧಶರಗಳನಿಟ್ಟು ಬೊಬ್ಬಿರಿಯೆ ಖರದೈತ್ಯ
ರಾಧರಾಧರದೆಡೆಯ ಘನ ಮುಸುಕುವಂತೆ ಶರಗಳನು ಮಾರ್ದಿಟ್ಟೊಡನೆ ।
ಬಾಧಿಸುವ ಮುದ್ಗರಮುಸುಂಡಿಪಟ್ಟಿಶಶೂಲ
ಭೇದಕರಕರವಾಳಪರಶುಮುಸಲಂಗಳಿಂ
ದಾ ಧರಾನಾಥನಂ ಬಳಸಿ ನಾನಾಪರಿಯ ಮಳೆಗರೆವುತಾರ್ಭಟಿಯೊಳು ॥೧೧॥

ಅಮಿತರಕ್ಕಸರೆಸುಗೆಯೈತಂದ ಖದ್ಯೋತ
ದ್ಯುಮಣಿಪ್ರಭಾಲೀನವಾದಂತೆ ರಘುವರನ
ವಿಮಲಶರದೊಳಗಡಗಲೈತಂದುವಸ್ತ್ರಂಗಳಶನಿಯಂತಾ ರಕ್ಕಸ |
ಸಮುದರಕ್ತವನುಂಡು ಸರ್ವಾಂಗಮುಂ ಛಿದ್ರ
ಕ್ರಮುಗೊಳಿಸೆ ಬೆದರದನುಗೈದು ನಿಶಿತಾಸ್ತ್ರಗಳ
ಸಮರಮುಖದೊಳಗೆಚ್ಚು ಬೊಬ್ಬಿರಿದರಲ್ಲಲ್ಲಿ ಕ್ರೋಧದಿಂದೇನೆಂಬೆನು ||೧೨||

ಬಿಡದಸ್ತ್ರದೆಸುಗೆಯಂ ಕಂಡು ರಘುವೀರನತಿ
ಕಡುಗೋಪದಿಂ ಕಾಲದಂಡನಿಭಶಸ್ತ್ರಗಳ
ಬಿಡಲೈದಿ ರಕ್ಕಸರ ಕರ ನಾಸ ಕರ್ಣಗಳನರಿದು ಕೊಂಡೈದೆ ಬಳಿಕ |
ಬಿಡದೆ ಹೃದಯದಿ ಪೊಕ್ಕು ಭೇದನಂಗೈದಸುಗ
ಳೊಡನೈದಿದುವು ಲೀಲೆಯಿಂದ ಕರಲಾಘವದಿ
ತುಡುಕುವುದನೆಸೆವುದಂ ಕಾಣದಾದುದು ಗಗನ ಶರಮಯದೊಳಾಕ್ಷಣದೊಳು ||೧೩||

ಕರಿತುಂಡ ತುರಗಶಿರ ನರಮಸ್ತಕಂ ತೀರ್ಗ
ಳುರುಕಲಶವಾಯೋಧರೆಸೆವ ಕಾರ್ಮುಕಶೂಲ
ಪರಿಪರಿಯಭೂಷಣಗಳಿಂದ ರಾಜಿಸಿದುದಮಿತಮೆನಲಾ ಧಾರಿಣಿ|
ತರಿಯೆ ಪುಟನೆಗಬು ಬೊಬ್ಬಿರಿದ್ಯೈದುತಿಹ ತಲೆಗ
ಳೊರೆವ ರಕುತವ ಸುರಿಯೆ ಮಿಳಿಂದಜಂಬಾಲಗಳ್
ನೆರೆದಿರಲ್ ಬಹ ಜಾರಿಕೆಡೆವ ರಕ್ಕಸನಿಚಯದಟ್ಟೆಗಳ್ ಕಂಗೆಸೆದುವು ||೧೪||

ಶರಹತಿಯ ಗಣಿಸದ್ಯೈತಂದು ರಕ್ಕಸನಿಚಯ
ಕರೆವರಂಬಿನಮಳೆಯ ಪಾದಪಶಿಲಾಸಾರ
ದುರುಗಲಂ ರಘುವೀರನೊಂದೆಣಿಸದಾ ದಿವ್ಯಮಂತ್ರಾಸ್ತ್ರಗಳನೆಸೆಯಲು |
ಶರಗಳುಪಟಳಕಳ್ಕಿ ತರಹರಿಸಲಳವಲ್ಲ
ದುರುಖರಾಸುರನ ಮರೆಹೊಗಲೆಂದು ದಾನವರ
ನೆರವಿಯೋಡುತಲಿರಲ್ ಕಂಪು ದೂಷಣನವರ ಕರೆವಭಯಗಳನಿತ್ತನು ||೧೫||

ಓಡುತಿಹ ರಕ್ಕಸರ ಪಡೆಗಭಯದಾನಮಂ
ನೀಡಿ ದೂಷಣ ಮಹಾಸ್ತ್ರಂಗಳಂ ಸಮತೆಗೈ
ದಾಡಲಸದಳದಾರುಭಟೆಯಿಂದ ಬಲಸಹಿತಲೈತಂದು ರಘುವೀರನ |
ನೋಡಿ ಕಡುಗೋಪದಿಂದಖಿಳಶಸ್ತ್ರಾಸ್ತ್ರಗಳ
ನಾಡನರ್ಪಿತಗೈದರತುಳಬಲರಕ್ಕಸರ್
ಕೂಡೆ ಬೊಬ್ಬಿರಿದಾರ್ದು ಕವಿದರಾಮೇಘತತಿ ದಿನಪನಂ ಮುತ್ತುವಂತೆ ||೧೬||

ಕ್ರೂರರಕ್ಕಸದೂಷಣಪ್ರಹಿತರಕ್ಕಸರ
ತೋರಬಲ ಕವಿಯಲುಂ ಘನದಂತೆ ಕರಸಂಪ್ರ
ಚಾರದಿಂ ತರಣಿ ಯರಿದಿಡುವಂತೆ ಸಂಹರಿಪ ಸಾಹಸಿಕ ಕಣೆಯ ತಿರುವ |
ಭಾರಣೆಯ ಚಾಪಕಂ ತೊಡಿಸಿ ಗಂಧರ್ವಾಸ್ತ್ರ
ತೋರಮಂತ್ರದಿ ಪೂತಮೆನಿಸಿ ಬಿಡಲೈತಂದು
ದಾರಶರನಿವಹ ಮುಟ್ಟಿದುವಖಿಲರಕ್ಕಸರನೇನೆಂಬೆನದ್ಭುತವನು ||೧೭||

ಕವಿದ ಶರ ರಕ್ಕಸರನೊಳಪೊಕ್ಕು ಕಡಿದರಿದು
ತಿವಿದು ಕೊಚ್ಚುತ ಚುಚ್ಚಿ ಮುಚ್ಚಿತೂಷ್ಮಂ ಪೆರ್ಚೆ
ತನಕದಿಂ ಮಕುಟಬೃಂದಂಗಳಂ ಕೆಡೆಪುತಂಬರವನಡರಿ |
ನವನವಕಮೆನೆ ಸರಾಕೃತಿಯಿಂದ ತೋರ್ದೊಡಾ
ಭವಕಂಠಭೂಷಣಕ್ಕೈದುವುವೊ ಯೆನೆ ದೈತ್ಯ
ನಿವಹ ಕಂಡಂಜಿ ನಾಲ್ದೆಸೆಯನರಸುತಲಿರ್ದುದೆಡೆಯಾಟದಿಂ ಭೀತಿಯಿಂ ||೧೮||

ತನ್ನ ಬಲವೀಪರಿಯ ತಾನವತೆಯಾಂತಿರುವ
ಬನ್ನಮಂ ಕಂಡಾಗ ದೂಷಣಂ ಬೇಗ ಜಗ
ದುನ್ನತಪರಾಕ್ರಮಿಗಳಾತ್ಮೋಪಮಿತರೈದು ಸಾಸಿರಾಸುರರ ಕರೆದು |
ಮನ್ನಣಂಗೈದು ಕಳುಪಿದರವರು ಪರ್ವತಗ
ಳನ್ನೊಂದ ಪಿಡಿಪಿಡಿದು ಕಲ್ಪಾಂತಭೈರವನ
ಭಿನ್ನಮೂರ್ತಿಗಳಂತೆ ರಘುವೀರನಂ ಕವಿದು ಶಸ್ತ್ರಾಸ್ತ್ರಗಳನಿಟ್ಟರು ||೧೯||

ಶರಶಿಲಾವರ್ಷಗಳ ಪರಿಯ ನಿಟ್ಟಿಸಿ ರಾಮ
ಗುರುತರದ ಕೋಪದಾವಾನಲಂ ಸಂಜನಿಸ
ಲುರಿ ಮಸಗುತಸ್ತ್ರಗಳ್ ಪೊಕ್ಕುವಾಶರಕುಲವ ಪೊಡೆವುತಿಕ್ಕಡಿಗೈವುತೆ |
ಗರಗರನೆ ಕೊರಲರಿವುತದರ ನೆತ್ತರನೀಂಟಿ
ಪೆರತಾರದಲೆ ದಾಂಟಿ ಪೆರ್ಚಿರ್ದ ರಕ್ಕಸನ
ನರೆನಿಮುಷದೊಳಗದನುಮೇನೆಂಬೆನಾ ಕಣೆಗಳುರುಕಠಿಣತರಶೌರ್ಯಮಂ ||೨೦||

ಮಡಿದು ಪೋಗಲ್ಕೈದುಸಾಸಿರದ ದಾನವರ್
ಕಡುಗೋಪದಿಂದ ದೂಷಣ ಬೇಗ ಕಾರ್ಮುಕವ
ಪಿಡಿದಾರ್ದು ಸಾಸಿರ ಶರಂಗಳಂ ಸೆಳೆದೆಚ್ಚು ರಘುವರನ ನಿಟ್ಟಿಸುತಲಿ |
ತುಡುಕಲೈತಹ ಕಣೆಗಳೆಡೆಯೊಳಗೆ ಕತ್ತರಿಸಿ
ಸಡಗರದೊಳವನ ಕರಕಲಿತಚಾಪವನಾಗ
ಕಡಿಯೆ ಕೆಡೆದುದು ಧರೆಗೆ ಪೇಳ್ವುದೇಂ ಶರವೇಗಲಾಗುಗಳ ಪರಿಪರಿಯನು ||೨೧||

ತುರಗಗಳ ನಾಲ್ಕರಿಂ ಸಾರಥಿಯನೈದರಿಂ
ವರವರ್ಮವೆಂಟರಿಂ ರಥವನೊಂಭತ್ತರಿಂ
ದರಿಯಲಾ ರಕ್ಕಸಂ ಧರಣಿಯೊಳ್ ಕೆಡೆದೆದ್ದು ಗಿರಿನಿಭದ ಪರಿಘವಿಡಿದು |
ತ್ವರಿತದಿಂ ರಾಘವನನಿಡುವರೈತರೆ ಬರ್ಪ
ಬರವ ನಿಟ್ಟಿಸುತಾಗ ಶರವೆರಡರಿಂದವನ
ಪರಿಘಯುತತೋಳ್ಗಳಂ ತರಿದಿಟ್ಟನಾಕ್ಷಣದಲುಳಿದ ಪಡೆ ತಲ್ಲಣಿಸಲು ||೨೨||

ಕುಲಿಶಹತಿಯಿಂ ಧರಾತಳಕೆ ಪಕ್ಕಗಳುಡಿದು
ಬಲುಗಿರಿಗಳುಂ ಕೆಡೆವೊಲಾ ದೂಷಣಂ ಬೇಗ
ನೆಲಕುರುಳಲಿಟ್ಟಿಸಿ ಪ್ರಮತಿ ಸ್ಥೂಲಾಕ್ಷನುಂ ಕೋಪದಿ ಮಹಚ್ಛೀರ್ಷನುಂ |
ಕಲಿತನದಿ ಕೊಡಲಿ ಪಟ್ಟಿಸ ಶೂಲಗಳ ಪಿಡಿದು
ಕೊಲಲೆಂದು ಬಹವೇಗಮಂ ಕಂಡು ರಾಘವಂ
ಹೊಳಚಿದಂ ಕೂರ್ಗಣೆಗಳಿಂದ ಮೂವರನಾಗ ಭೂತಳದೊಳಚ್ಚರಿಯೆನೆ ||೨೩||

ಲೀಲೆಯಿಂ ದೂಷಣಸಮೇತ ಬಲವುಂ ಮಡಿಯೆ
ಮೇಲೆ ಖರಗತಿಕೋಪಮೂಡಿ ಬರೆ ಕರನ ಸಂ
ಚಾಲನಂಗೈದೆಂದನೀ ಕುಮಾನುಷನಿಂದ ಸೇನೆ ಹತಮಾದುದೆನುತ |
ಕಾಲಶಿವನಂ ಪಿಡಿಯಲನ್ವಳಿಪ ಶಮನಂತೆ
ಮೇಲುವರಿದಾರ್ಭಟಿಸುತೈತರಲ್ ಕಂಡಂಜಿ
ಮೇಲೆ ಸುರಕಿನ್ನರ್ ಕಂಪಿಸಿದರಂಬುನಿಧಿ ಕುದಿದುದಾಸುರನ ಭರಕೆ ||೨೪||

ಮೇಘಮಾಲಿಯು ಮಹಾಮಾಲಿ ಸರ್ಪಾಸ್ಯನುಂ
ವೇಗದುರ್ಜಯ ಪರುಷ ಕಾಲಕಾರ್ಮುಕನಮರ
ಪೂಗದಲ್ಲಣ ಯಜ್ಞಶತ್ರುವು ವಿಹಂಗಮುಂ ಕರವೀರನೇತ್ರಾದಿಗಳ್ |
ಸಾಗರದ ನಿರ್ಘೋಷದಂತುಲಿವುತೈತಂದು
ರಾಘವೇಶನನಿಟ್ಟು ಬತ್ತೀಸಶಸ್ತ್ರದಿಂ
ತೂಗಿ ಬೊಬ್ಬಿರಿದಾರ್ದರವನಿ ಕಂಪಿಸುವಂತೆ ಕಲ್ಪಾಂತಘನಗಡಣದೊಳ್ ||೨೫||

ಮುಂಬರಿದು ಬಹ ದೈತ್ಯಡೊಂಬಿಯಂ ಕಂಡು ಪಟು
ಶುಂಭಾಸ್ತ್ರಗಳ ಪಿಡಿದು ರಾಘವಂ ನಿಮಿಷದೊಳು
ಜಂಭಾರಿಕುಲವ ಮರ್ದನೆಗೈದ ಶತಶತವ ಸಾಸಿರವ ಸಾಸಿರದೊಳು |
ಅಂಬುದಗಳವನಿತಳದೊಳ್ ಕೆಡದ ಮಾಳ್ಕೆಯೊಳ್
ಕಂಬನಿಗಳಾ ರಕ್ತದಟ್ಟೆಗಳ್ ಭೂತನಿಕು
ರುಂಬಕೌತಣಗೈಯೆ ಕೆಡೆದುವರೆನಿಮಿಷದೊಳಗಮರತತಿ ವಿಸ್ಮಯಗೊಳೆ ||೨೬||

ಕಡಿದ ಕಾಲಾಳುಗಳ ಮಡಿದ ಮೇಲಾಳುಗಳ
ಕೆಡೆದ ಕರಿಘಟೆಗಳಲ್ಲುಡಿದತುರಗ ಕೆಳಕೂ
ಗಿಡುವ ಮಸ್ತಕಗಳಂ ಸುರಿವರುಣಧಾರೆಯಂ ಕುಡಿಕುಡಿದು ಸಂತಸದಲಿ |
ತೊಡೆವರೆಗಳಂ ಕುಟ್ಟಿ ಕುಣಿವ ಭೇತಾಳಗಳ
ಪಡೆಯ ಸಂಭ್ರಮದಿಂದಲಾವನಂ ನಿರಯಸಂ
ಗಡಿಗನಂದದಿ ತೋರ್ದುದೊರ್ವರಘುವೀರನಿಂದೇನೆಂಬೆನಚ್ಚರಿಯನು ||೨೭||

ಬಲಸಮಗ್ರಂ ಮಡಿಯಲುಳಿದ ಖರತ್ರಿಶಿರರಾ
ನೆಲದೊಳಗೆ ಕಡುಗೋಪದಿಂದ ಪಲ್ಗಳನರೆದು
ಕೊಲಲೆಂದು ಕ್ರೋಧದಿಂ ಕಂಡೈದುತಿಹ ಖರನೊಳಿಂತೆಂದು ತ್ರಿಶಿರ ನುಡಿದಂ |
ಗೆಲುವುದೆನಿತೀ ಮನುಜಕೀಟಮಂ ನೇಮಿಸಿಯೆ
ಕಳಿಪೆನ್ನನೀ ಕ್ಷಣದೊಳೊಡಲ ಬಗಿದಿಟ್ಟವನ
ತಲೆಯ ತಂದೊಪ್ಪಿಸುವೆನೆಂದಪ್ಪಣೆಯನಾಂತು ದಾನವಂ ಪಿಂದಿರುಗಿದಂ ||೨೮||

ಮುಂಗಾರ ಮಿಂಚು ಪೊಳೆವಂದದಿಂ ರಥ ಪೊಳೆಯ
ಲಿಂಗಡಲ ವಳಿಗಳೆನೆ ತುರಗಘೋಷಾರವಗ
ಳಿಂ ಗಗನಪಥವಿಡಿದು ಸಿಡಿಲು ಪೊಡವಿಯ ಪೊಡೆದ ತೆರದೊಳಾಗ ಸುರೇಶನು |
ಕಂಗಳೊಳಗಿಂಗಳವ ಕರೆಯುತಲಿ ನೈಶಿತಶ
ರಂಗಳಂ ತೆಗೆದೆಚ್ಚು ಬೊಬ್ಬಿರಿದು ಗೆಲಲೆನ್ನು
ತಂಗವಿಸಿ ತಾಂ ತವಿಸಿ ವಿಶಿಖಗಳ ಮಗುಳಾರ್ದ ಕಲ್ಪಾಂತರುದ್ರನಂತೆ ||೨೯||

ತೆಗದೆಸುವ ಬಾಣಗಳ ಬಗೆಯನನಿತಿನಿತೆನುತ
ಮಿಗೆ ಕಾಣ್ಬುದತಿಶಯಮುದೆಂಬಂತೆ ದಾನವಂ
ಬಗೆಬಗೆಯ ಕಣೆಗಳಂ ತೆಗೆದೆಚ್ಚು ಮೂಜಗಂ ಕಂಪಿಸುಪೊಲನುಗೈದನು |
ಸಗರಕುಲದೀಪ ಶರಚಾಪಗಳ ಪಿಡಿದವನ
ಬಗೆಯರಿದು ರಥಮುಶ್ವಸಾರಥಿಶರಾಸನವ
ಮಿಗೆ ಖಡ್ಗಮೊದಲಾದುವಂ ಬಿಡದೆ ಭರದಿಂದ ಕುಸುರಿದರಿದನು ರಾಘವಂ ||೩೦||

ವಿ. ಸೂ :—

ಮಾತೃಕೆಯಲ್ಲಿ ಅರಣ್ಯಕಾಂಡದ ಭಾಗವಿಷ್ಟುಮಾತ್ರವೇ ಇರುವುದರಿಂದ ಉಪಾಯಾಂತರವಿಲ್ಲದೆ ಇಲ್ಲಿಗೇ ನಿಲ್ಲಿಸಬೇಕಾಗಿದೆ. ಮೈಸೂರು ಗವರ್ನ್ಮೆಂಟ್ ಲೈಬ್ರರಿಯಲ್ಲಿರುವ ಹಸ್ತಲಿಖಿತ(ಕಾಗದ)ಪ್ರತಿಯು ಈ ಲೈಬ್ರರಿಯ ಓಲೆಯ ಪ್ರತಿಯ ಪುಸ್ತಕವೆಂದೇ ತೋರುವುದು. ಇದರಲ್ಲಿ ಗ್ರಂಥಪಾತವಿರುವ ಸ್ಥಳಗಳಲ್ಲಿ ಅದರಲ್ಲಿಯೂ ಪಾತಗಳಿವೆ. ಅಲ್ಲದೆ ಈ ಅರಣ್ಯಕಾಂಡದಲ್ಲಿ ಇಲ್ಲಿಂದ ಮುಂದೆ ಕಾಂಡ ಮುಗಿಯುವವರೆಗೂ ಆ ಪ್ರತಿಯಲ್ಲೂ ಇಲ್ಲ. ಇಲ್ಲಿಂದ ಮುಂದಣ ಕಥಾಭಾಗವನ್ನೊಳಗೊಂಡಿರುವ ತೊರವೆರಾಮಾಯಣದ ಭಾಮಿನೀ ಷಟ್ಪದಿಗಳನ್ನು ಯಾರೋ ಕಥಾಪೂರಣಕ್ಕಾಗಿ ಸೇರಿಸಿರುವರು.